ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಡಿಸೆಂಬರ್ 10, 2024

ಸಂಪುಟ : 51 ಸಂಚಿಕೆ : 207 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಕಾರ್ತಿಕೋತ್ಸವ ಸಾಂಸ್ಕೃತಿಕ, ಸಾಹಿತ್ಯಿಕ ಧಾರ್ಮಿಕ ಹಿನ್ನೆಲೆಯಲ್ಲಿ ನಡೆಯಲಿ: ತರಳಬಾಳು ಶ್ರೀ ಆಶಯ

**ಶ್ರೀ ವಿಶ್ವಬಂಧು ಮರಳಸಿದ್ದೇಶ್ವರ ದೇವಸ್ಥಾನದ 17ನೇ ವರ್ಷದ ಕಾರ್ತಿಕ ಮಹೋತ್ಸವ**

ದಾವಣಗೆರೆ, ಡಿ.9- ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ಕಾರ್ತೀಕ ಮಹೋತ್ಸವ ಕಾರ್ಯಕ್ರಮಗಳು ನಡೆಯಬೇಕು. ಬದಲಾಗಿ ದೀಪ ಹಚ್ಚಿ, ಕೇವಲ ಕಾರಾ ಮಂಡಕ್ಕಿ ತಿನ್ನಲು ಸೀಮಿತವಾಗಬಾರದು ಎಂದು ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನದ ಕಾರ್ತಿಕ ಸಮಿತಿ ವತಿಯಿಂದ ನಗರದ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದ ಆವರಣದಲ್ಲಿ ಶ್ರೀ ವಿಶ್ವಬಂಧು ಮರಳಸಿದ್ದೇಶ್ವರ ದೇವಸ್ಥಾನದ 17ನೇ ವರ್ಷದ ಕಾರ್ತಿಕ ಮಹೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಹಾಗೂ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ವಿದೇಶದಲ್ಲಿ ನಡೆದ ಕಥೆಯೊಂದನ್ನು ಉದಾಹರಿಸಿದ ಶ್ರೀಗಳು, ಪಾಶ್ಚಾತ್ಯ ದೇಶಗಳ ಜನರು ನೇರ ನಡೆ, ಶಿಸ್ತು ಹಾಗೂ ಆದೇಶ ಪಾಲನೆಯ ಗುಣ ಹೊಂದಿರುತ್ತಾರೆ. ಹೀಗಾಗಿ ಪಾಶ್ಚಾತ್ಯರಲ್ಲಿನ ಉತ್ತಮ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ತಿಕೋತ್ಸವ ಸಮಿತಿಯು ಪುಣ್ಯಕೋಟಿ ಗೋವಿನ ಕಥೆಯ ರೂಪಕ ಏರ್ಪಡಿಸಿರುವುದು ಶ್ಲಾಘನೀಯ. ಈ ಕಥೆಯಿಂದ ಮಕ್ಕಳು ಪ್ರಭಾವಿತರಾಗುತ್ತಾರೆ. ಆನಂದ ಪಡುತ್ತಾರೆ. ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚು ಹೆಚ್ಚು ಆಕರ್ಷಣೀಯವಾಗಿ ಕಾರ್ಯಕ್ರಮಗಳನ್ನು ಸಮಿತಿಯು ನಡೆಸಲಿ ಎಂದು ಆಶಿಸಿದರು.

ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಮಾತನಾಡಿ, ಆರ್ಥಿಕ ಚೈತನ್ಯ ಇಲ್ಲದ ಬಡ ಮಕ್ಕಳಿಗೆ ಉಚಿತ ಶಿಕ್ಷಣ ಕೊಟ್ಟು ಮೇಲೆತ್ತುವ ಕೆಲಸವನ್ನು ಮಠದ ಹಿಂದಿನ ಮಠಾಧೀಶರು ಮಾಡಿದ್ದಾರೆ. ಈಗಿನ ಜಗದ್ಗುರುಗಳೂ ಸಹ ಅದರ ಮುಂದುವರೆದ ಭಾಗವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಕೇವಲ ಪದವಿ ನೀಡುವುದಲ್ಲ, ಶಿಕ್ಷಣದ ಜೊತೆ ಸಂಸ್ಕಾರವನ್ನೂ ನೀಡುವ ಕೆಲಸವನ್ನು ಸಿರಿಗೆರೆಯ ಶಿಕ್ಷಣ ಸಂಸ್ಥೆಗಳು ಮಾಡುತ್ತಿವೆ ಎಂದು ಹೇಳಿದರು.

ಕಲೆಗಳಲ್ಲಿ ಆಸಕ್ತಿ ಬೆಳೆಸುವ ಜೊತೆಗೆ, ಸಮಾಜದಲ್ಲಿ ಸಂಸ್ಕಾರವಂತರಾಗಿ ಹೇಗೆ ಬಾಳಬೇಕೆಂಬುದನ್ನು ತಿಳಿಸಿಕೊಡುವ ಸಂಸ್ಥೆಗಳೆಂದರೆ ಅದು ಸಿರಿಗೆರೆ ಸಂಸ್ಥೆಗಳು ಎಂದರು.

ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನದ ಕಾರ್ತಿಕ ಸಮಿತಿ ಅಧ್ಯಕ್ಷ ಹೆಚ್. ಜಯಣ್ಣ ರಾಮಗೊಂಡನಹಳ್ಳಿ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾಧಿಕಾರಿ ಜಿ. ಎಂ. ಗಂಗಾಧರಸ್ವಾಮಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ. ವಾಮದೇವಪ್ಪ, ಸರ್ಕಾರಿ ನೌಕರರ ಜಿಲ್ಲಾಧ್ಯಕ್ಷ ವೀರೇಶ್ ವಡೇನಾಪುರ, ಮಾಗನೂರು ಸಂಗಮೇಶ್‌ಗೌಡ್ರು ಉಪಸ್ಥಿತರಿದ್ದರು.

ಸಮಿತಿಯ ಕಾರ್ಯದರ್ಶಿ ನಾಗರಕಟ್ಟೆ ಪ್ರಕಾಶ್, ನಿರ್ದೇಶಕರುಗಳಾದ ಬುಳ್ಳಾಪುರದ ಸಿದ್ದೇಶ್, ಸಿರಿಗೆರೆ ಸಿದ್ದೇಶ್, ಬೇತೂರು ರಾಜಣ್ಣ, ವಿ. ಶಿವಮೂರ್ತಿ, ಮಳ್ಳೇಕಟ್ಟೆ ಸಿದ್ದೇಶ್, ಕಾಕನೂರು ಪ್ರಭುಗೌಡ್ರು, ಕೊರಟಿಕೆರೆ ಶಿವಕುಮಾರ್, ಶಿವನಹಳ್ಳಿ ರಮೇಶ್

ಸಮಿತಿಯ ಕೋಶಾಧ್ಯಕ್ಷ ಕರೆಶಿವಪ್ಪರ ಸಿದ್ದೇಶ್ ವಂದಿಸಿದರು. ಸಂಗೀತ ಶಿಕ್ಷಕ ಅಜಯ್ ನಾರಾಯಣ್ ಪ್ರಾರ್ಥಿಸಿದರು. (2ನೇ ಪುಟಕ್ಕೆ)

# ಕಲಾಪದಲ್ಲಿ ವಕ್ಫ್ ಕೋಲಾಹಲ

## ವಕ್ಫ್ ನೋಟೀಸ್, ಪಂಚಮಸಾಲಿ ಮೀಸಲಾತಿ ವಿಚಾರದಲ್ಲಿ ವಾಕ್ಸಮರ



ಬೆಳಗಾವಿ, ಡಿ. 9- ರೈತರ ಮತ್ತು ಮಠಮಾನ್ಯಗಳ ಆಸ್ತಿಗಳನ್ನು ವಕ್ಫ್ ಹೆಸರಿಗೆ ಮಾರ್ಪಡಿಸುತ್ತಿರುವ ಹಾಗೂ ಪಂಚಮಸಾಲಿ ಸಮಾಜದ ಹೋರಾಟ ಹತ್ತಿಕ್ಕಲು ರಾಜ್ಯ ಸರ್ಕಾರ ಮುಂದಾಗಿದೆ ಎಂಬ ವಿಷಯ ವಿಧಾನಸಭೆಯಲ್ಲಿ ಕೋಲಾಹಲ ಸೃಷ್ಟಿಸಿ ಇಡೀ ದಿನದ ಕಲಾಪವನ್ನು ನುಂಗಿಹಾಕಿತು.

ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಗಾಲದ ಅಧಿವೇಶನದ ಮೊದಲ ದಿನವೇ ವಕ್ಫ್ ವಿಷಯವನ್ನು ಕೈಗೆತ್ತಿಕೊಂಡ ಪ್ರತಿಪಕ್ಷ, ರೈತರು ಹಾಗೂ ಮಠಮಾನ್ಯಗಳ ಆಸ್ತಿಯನ್ನು ಒಂದು ನಿರ್ದಿಷ್ಟ ಸಮುದಾಯಕ್ಕೆ ನೀಡಲು ಹೊರಟಿದೆ ಎಂದು ಆರೋಪಿಸಿತು.

ಪ್ರಶ್ನೋತ್ತರ ಅವಧಿ ಕೈಬಿಟ್ಟು ರೈತರ ವಿಚಾರ ಕೈಗೆತ್ತಿಕೊಳ್ಳಲು ಅವಕಾಶ ನೀಡಿ, ನಂತರ ಮುಂದಿನ ಕಲಾಪ ನಡೆಸಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ನಿಲುವಳಿ ಸೂಚನೆ ಮಂಡಿಸಿದರು.

ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ ನಂತರ ಉಳಿದ ವಿಚಾರ ಚರ್ಚಿಸೋಣ, ಪಕ್ಷಾತೀತವಾಗಿ ಸದಸ್ಯರು, ಕ್ಷೇತ್ರ ಮತ್ತು ರಾಜ್ಯದ ಸಮಸ್ಯೆಗಳಿಗೆ ಸರ್ಕಾರದಿಂದ ಉತ್ತರ ಬಯಸಿದ್ದಾರೆ, ಅದಕ್ಕೆ ಮೊದಲು ಸ್ಪಂದಿಸೋಣ ಎಂದರು.

ಪ್ರಶ್ನೋತ್ತರ ವೇಳೆ ಮುಗಿಯುತ್ತಿದ್ದಂತೆ ವಕ್ಫ್ ವಿಚಾರ ಪ್ರಸ್ತಾಪಿಸಿದ ಅಶೋಕ್, ರಾಜ್ಯಾದ್ಯಂತ ರೈತರ ಕೃಷಿ ಭೂಮಿಗಳಿಗೆ ವಕ್ಫ್ ಆಸ್ತಿಗಳೆಂದು ನೋಟಿಸ್ ನೀಡಿ, ಅವರನ್ನು ಒಕ್ಕಲೆಬ್ಬಿಸುವ ಕಾರ್ಯ ನಡೆದಿದೆ.

ಮತ್ತೊಂದೆಡೆ ರೈತರ ಭೂಮಿಯನ್ನಷ್ಟೇ ಅಲ್ಲದೆ, ಮಠಮಾನ್ಯಗಳ ಆಸ್ತಿಗಳ ಮೇಲೂ ವಕ್ಫ್ ಕೆಂಗಣ್ಣು ಬಿದ್ದಿದೆ ಎನ್ನುತ್ತಿದ್ದಂತೆ, ಆಡಳಿತ ಸದಸ್ಯರು, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು, ಮಾನವತಾವಾದಿ ಬಸವಣ್ಣವರ ಬಗ್ಗೆ ಅವಹೇಳನದ ಮಾತುಗಳನ್ನು ಆಡಿದ್ದಾರೆ, ಮೊದಲು ಇದರ ಕುರಿತು ಚರ್ಚೆಗೆ ಅವಕಾಶ ಕೊಡಿ ಎಂದು ಸಭಾಧ್ಯಕ್ಷರ ಮುಂದೆ ಪಟ್ಟು ಹಿಡಿದರು.

ಎರಡೂ ವಿಷಯಗಳಿಗೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ವಾಕ್ ಸಮರ ಜೋರಾಗಿ, ಯಾರು ಏನು ಹೇಳುತ್ತಿದ್ದಾರೆ ಎಂಬುದೇ ಕೇಳದಾಯಿತು.

ಗದ್ದಲದ ನಡುವೆಯೇ ಸರ್ಕಾರ ಪಂಚಮಸಾಲಿ ಸಮಾಜದ (5ನೇ ಪುಟಕ್ಕೆ)

## ಪಂಚಮಸಾಲಿಗೆ ಮೀಸಲಾತಿ ನಾಳೆ ಕೋರ್ಟ್ ಆದೇಶ ಮಂಡನೆ



ಬೆಳಗಾವಿ, ಡಿ. 9- ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿ ವಿಚಾರವಾಗಿ ಹಿಂದಿನ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡೆವಿಟ್ ಹಾಗೂ ನ್ಯಾಯಾಲಯದ ಆದೇಶವನ್ನು ಸದನದ ಮುಂದೆ ಮಂಡಿಸುವುದಾಗಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪತ್ರಿಪಕ್ಷ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಪಂಚಮಸಾಲಿಗಳನ್ನು 2ಎ ಪ್ರವರ್ಗಕ್ಕೆ ಸೇರಿಸಲು ಬಹಳ ದಿನಗಳಿಂದ ಹೋರಾಟ ನಡೆಸಲಾಗುತ್ತಿದೆ, ನಾನು ಮುಖ್ಯಮಂತ್ರಿಯಾದ ಮೇಲೆ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸೇರಿದಂತೆ, ಪಂಚಮಸಾಲಿ ಮುಖಂಡರೊಂದಿಗೆ ಎರಡು ಬಾರಿ ಸಭೆ ನಡೆಸಿದ್ದೇನೆ, ಪಂಚಮಸಾಲಿಗಳು ಮೀಸಲಾತಿ ಕೇಳಲು ನಾನು ಅಡ್ಡಿಯಾಗಿಲ್ಲ ಎಂದರು.

ರಾಜ್ಯದಲ್ಲಿ ಹಿಂದುಳಿದ ವರ್ಗಗಳನ್ನು ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-3ಎ ಹಾಗೂ ಪ್ರವರ್ಗ-3ಬಿ ಎಂಬುದಾಗಿ ವಿಂಗಡಿಸಲಾಗಿದೆ, ವೀರಶೈವ-ಲಿಂಗಾಯಿತ ಹಾಗೂ ಪಂಚಮಸಾಲಿ ಸಮುದಾಯಗಳು 3ಬಿ ಅಡಿ ಮೀಸಲಾತಿ ಪಡೆಯುತ್ತಿವೆ.

ಪಂಚಮಸಾಲಿಗಳನ್ನು 2ಎ ಪ್ರವರ್ಗಕ್ಕೆ ಸೇರಿಸಲು ರಾಜ್ಯದ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವರದಿ ಪಡೆಯುವುದು ಅವಶ್ಯಕವಾಗಿದೆ, ಈ ಹಿನ್ನೆಲೆಯಲ್ಲಿ ಆಯೋಗದ ಮುಂದೆ ಮೀಸಲಾತಿ ವಿಚಾರ ಮಂಡಿಸುವಂತೆ ಪಂಚಮಸಾಲಿ ಹೋರಾಟಗಾರರಿಗೆ ಸೂಚಿಸಲಾಗಿದೆ.

ಬಸವರಾಜ ಬೊಮ್ಮಾಯಿ ಸರ್ಕಾರದಲ್ಲಿ ಪಂಚಮಸಾಲಿಗಳನ್ನು (2ನೇ ಪುಟಕ್ಕೆ)

## 17 ತಿಂಗಳಲ್ಲಿ 17 ಅವಾಂತರ ನಿದ್ದೆಗೆ ಜಾರಿದ ಆಡಳಿತ ಯಂತ್ರ



ಬೆಂಗಳೂರು, ಡಿ. 9- ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತದ 17 ತಿಂಗಳಲ್ಲಿ 17 ಅವಾಂತರ ಮಾಡಿಕೊಂಡಿದ್ದು, ಇಡೀ ಆಡಳಿತ ಯಂತ್ರ ನಿದ್ದೆಗೆ ಜಾರಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಚಳಿಗಾಲದ ವಿಧಾನಮಂಡಲ ಅಧಿವೇಶನಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ವೇಳೆ ನೀಡಿದ ಆಡಳಿತ ಈ ಬಾರಿ ಕಾಣುತ್ತಿಲ್ಲ, ಅವರು ಮುಡಾ ಕೇಸ್‌ನಲ್ಲಿ ನರಳುತ್ತಿದ್ದರೆ, ಸರ್ಕಾರ ನಿದ್ದೆ ಮಾಡುತ್ತಿದೆ ಎಂದರು.

ಬೆಳಗಾವಿಯೊಂದರಲ್ಲೇ 325 ಮಕ್ಕಳು ಮೃತಪಟ್ಟಿದ್ದಾರೆ, ಯಾವ ಇಲಾಖೆ ಮೇಲೂ ಮುಖ್ಯಮಂತ್ರಿ ಹಿಡಿತ ಇಲ್ಲವಾಗಿದೆ, ಬಾಣಂತಿಯರು, ಮಕ್ಕಳು ಸಾಯುತ್ತಿದ್ದರೂ ಸರ್ಕಾರ ನಿದ್ದೆಗೆ ಜಾರಿದೆ, ನಿಯಂತ್ರಣ ಇಲ್ಲದೆ ಎಲ್ಲ ಇಲಾಖೆಗಳಲ್ಲಿ ಅನಾಹುತವಾಗುತ್ತಿದೆ, ಸಚಿವರು ಹಣ ಮಾಡುವುದರಲ್ಲಿ ನಿರತರಾಗಿದ್ದಾರೆ, ಜಿಲ್ಲಾ ಪ್ರವಾಸ ಮಾಡುತ್ತಿಲ್ಲ. ಸಚಿವರು ಹಣ ಮಾಡಲು (5ನೇ ಪುಟಕ್ಕೆ)

# ನಗರದೊಳಗೆ ಬರುವ ಟ್ರ್ಯಾಕ್ಟರ್‌ಗಳ ಮೇಲೆ ಕೇಸ್ ದಾಖಲಿಸಲು ಸೂಚನೆ



**ಸಂಚಾರಿ ನಿಯಮಗಳ ಪಾಲನೆ ಕುರಿತು ನಡೆದ ಸಭೆಯಲ್ಲಿ ಡಾ. ಗಂಗಾಧರ ಸ್ವಾಮಿ**

**ಪಾರ್ಕಿಂಗ್‌ನಲ್ಲಿ ನಿಲ್ಲದೇ ಇರುವ ಕನಿಷ್ಠ 100 ವಾಹನಗಳನ್ನಾದರೂ ತಡೆದು ದಂಡ ವಿಧಿಸಬೇಕು**

ದಾವಣಗೆರೆ, ಡಿ.9- ಏಕಮುಖ ರಸ್ತೆ, ಸಿಗ್ನಲ್ ಜಂಪ್, ಪಾರ್ಕಿಂಗ್ ಇಲ್ಲದ ಜಾಗದಲ್ಲಿ ಪಾರ್ಕಿಂಗ್ ಮಾಡಿದ ವಾಹನ ಸವಾರರಿಗೆ ದಂಡದ ಜೊತೆಗೆ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ಸೋಮವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಗರದಲ್ಲಿ ಪಾರ್ಕಿಂಗ್ ವ್ಯವಸ್ಥೆ, ಘೋಷಿತ ವ್ಯಾಪಾರ ಪ್ರದೇಶ ಹಾಗೂ ನಿರ್ಬಂಧಿತ ವ್ಯಾಪಾರ ಪ್ರದೇಶ, ಮತ್ತು ವಾಹನ ಸಂಚಾರ ನಿಯಮಗಳ ಪಾಲನೆ ಕುರಿತು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತಾನಾಡಿದರು.

ಸರ್ಕಾರ ಡೀಸೆಲ್ ಮಾದರಿ ಹಾಗೂ ಇತರೆ ಮಾದರಿಯ ವಾಹನಗಳ ಎಫ್.ಸಿ ಮುಗಿದರೂ ವಾಹನಗಳು ವಿಲೇವಾರಿಗೆ ಬರುತ್ತಿಲ್ಲ ಏಕೆ? ಪಾರ್ಕಿಂಗ್‌ನಲ್ಲಿ ನಿಲ್ಲದೇ ಇರುವ ಕನಿಷ್ಠ 100 ವಾಹನಗಳನ್ನಾದರೂ ತಡೆದು ದಂಡ ವಿಧಿಸಿ, ಗಾಡಿಗಳನ್ನು ಜಾಪ್ತಿ ಮಾಡಿ ಎಂದು ಆರ್ ಟಿ ಓ ಅಧಿಕಾರಿಗಳಿಗೆ ಸೂಚಿಸಿದರು.

ಟ್ರ್ಯಾಕ್ಟರ್ ಸಿಟಿ ಒಳಗಡೆ ಬರುತ್ತಿವೆ, ಅಂತಹ ಟ್ರ್ಯಾಕ್ಟರ್ ಮೇಲೆ ಕೂಡಲೇ ಕೇಸ್ ಮಾಡಿ, ಲಾರಿಗಳು ನಗರದ ಒಳಗಡೆ ಪ್ರವೇಶಸಲು ಸಮಯ ನಿಗದಿಮಾಡಬೇಕು. ಸಿ.ಜಿ ಆಸ್ಪತ್ರೆಯ ಸುತ್ತಮುತ್ತ, ಹೈಸ್ಕೂಲ್ ಮೈದಾನದ ಹತ್ತಿರ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ದನಕರುಗಳು ರಸ್ತೆಯಲ್ಲಿ ಓಡಾಡುತ್ತಿವೆ. ಇದರಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗಿ, ಅಪಘಾತಗಳು ಸಹ ಹೆಚ್ಚುತ್ತಿವೆ. ನಗರದಲ್ಲಿ ವಾಹನಗಳ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗಿದ್ದು, ಹಾಗಾಗಿ ರಸ್ತೆ ಸಾಲದೆ ಫುಟ್‌ಪಾತ್ ಮೇಲೂ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿದೆ.

ಕಟ್ಟಡ ನಿರ್ಮಾಣ ಸಾಮಗ್ರಿಗಳಾದ ಎಂ.ಸ್ಯಾಂಡ್, ಮರಳು, ಸಿಮೆಂಟ್, ಇಟ್ಟಿಗೆಗಳನ್ನು ಸಾಗಾಣಿಕೆ ಮಾಡುವ ಭಾರಿ ವಾಹನ, ಲಘು ವಾಹನಗಳ ಮೇಲು ಹೊದಿಕೆಯನ್ನು ಹಾಕಿಕೊಳ್ಳದೆ ವಾಹನಗಳನ್ನು ಚಾಲನೆ ಮಾಡುವ ಕಾರಣ, ಈ ವಾಹನಗಳ ಹಿಂಭಾಗ ಚಾಲನೆ ಮಾಡುವ ದ್ವಿಚಕ್ರ ವಾಹನ ಚಾಲಕರ ಕಣ್ಣಿಗೆ ದೂಳು, ಮಣ್ಣಿನ ಕಣಗಳು, ಕಲ್ಲಿನ ಕಣಗಳು ಬಿದ್ದು ಅಪಘಾತಗಳು ಸಂಭವಿಸುತ್ತಿರುವ ಕಾರಣ, ಸಂಚಾರ ಪೊಲೀಸ್ ಅಧಿಕಾರಿಗಳು ಇಂತಹ ವಾಹನಗಳ ಮೇಲೆ ದಂಡ ವಿಧಿಸುವುದು ಹಾಗೂ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಆಧಿಕಾರಿಗಳು ನಿರ್ದಾಕ್ಷಿಣ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು.

ಖಾಸಗಿ ಬಸ್, ಭಾರೀ ವಾಹನಗಳು, ಕೆಲವು ಶಾಲಾ-ಕಾಲೇಜು ಬಸ್ಸುಗಳು ಆಟೋರಿಕ್ಷಾ ವಾಹನಗಳು ಕರ್ಕಶ ಹಾರನ್‌ಗಳನ್ನು ಅಳವಡಿಸಿಕೊಂಡು ಚಾಲನೆ ಮಾಡುವುದರಿಂದ ನಗರದ ನಾಗರಿಕರಿಗೆ ಹಾಗೂ ಆಸ್ಪತ್ರೆಗಳ ಬಳಿ ಪ್ರದೇಶದಲ್ಲಿ ಶಬ್ದ ಮಾಲಿನ್ಯವು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಅಂತಹ ವಾಹನ ಚಾಲಕರ ಮೇಲೆ ದಂಡ ವಿಧಿಸಬೇಕು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತಾನಾಡಿ, ಚಾಮರಾಜಪೇಟೆ, ಮಂಡಿಪೇಟೆ, ಚೌಕಿಪೇಟೆ ಸುತ್ತಮುತ್ತ ಪ್ರದೇಶಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯಲ್ಲಿ ತುಂಬಾ ತೊಂದರೆಯಾಗುತ್ತಿದೆ. ಹದಡಿ ರೋಡ್‌ನಲ್ಲಿ ಜಕಾತಿ (5ನೇ ಪುಟಕ್ಕೆ)

## ಅನರ್ಹ ಬಿಪಿಎಲ್ ಪಡಿತರ ಚೀಟಿದಾರರ ವಿರುದ್ಧ ಕ್ರಮ

ಬೆಳಗಾವಿ, ಡಿ. 9- ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ನೀಡುವ ಬಿಪಿಎಲ್ ಪಡಿತರ ಚೀಟಿಗಳನ್ನು ಅರ್ಹರಲ್ಲದರು ಪಡೆದಿದ್ದರೆ, ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ವಿಧಾನ ಪರಿಷತ್‌ನಲ್ಲಿಂದು ಎಚ್ಚರಿಕೆ ನೀಡಿದ್ದಾರೆ.

ತಾವು ಇಲಾಖೆ ಹೊಣೆಗಾರಿಕೆ ವಹಿಸಿಕೊಂಡ ದಿನದಿಂದಲೇ ಅನರ್ಹರ ಪತ್ತೆ ಹಚ್ಚುವ ಕೆಲಸ ಮಾಡುತ್ತಿರುವುದಲ್ಲದೆ, ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಂಡಿದ್ದೇವೆ ಎಂದರು.

ಪ್ರಶ್ನೋತ್ತರ ಅವಧಿಯಲ್ಲಿ ಟಿ.ಎನ್. ಜವರಾಯಿ ಗೌಡ, ಐವಾನ್ ಡಿಸೋಜ ಮತ್ತಿತರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಇದುವರೆಗೂ ಅನರ್ಹರ ಚೀಟಿಗಳನ್ನು ರದ್ದುಪಡಿಸಿದ್ದೇವೆಯೇ ಹೊರತು, ಅರ್ಹರ ಒಂದೂ ಚೀಟಿ ರದ್ದು ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಅಕ್ರಮ ಪಡಿತರ ಚೀಟಿ ವಿರುದ್ಧದ ವಿಶೇಷ ಕಾರ್ಯಾಚರಣೆ ಮುಂದುವರೆದಿದೆ, ಅರ್ಹರಲ್ಲದವರು ಚೀಟಿ ಪಡೆದಿದ್ದರೆ, ಸ್ವಯಂಪೇರಿತಾಗಿ ಹಿಂತಿರುಗಿಸಿ ಎಂದು ಸರ್ಕಾರ ಸೂಚನೆ ನೀಡಿತ್ತು.

ಸರ್ಕಾರಿ ನೌಕರರು, ಆದಾಯ ತೆರಿಗೆ (2ನೇ ಪುಟಕ್ಕೆ)

## ಫೆ. 2025ರೊಳಗೆ ಶಿಕ್ಷಕರಿಗೆ ಬಡ್ತಿ ನೀಡುವ ಪ್ರಕ್ರಿಯೆ ಅಂತ್ಯ

ಬೆಂಗಳೂರು, ಡಿ. 9- ಪ್ರೌಢಶಾಲಾ ಸಹ ಶಿಕ್ಷಕರಿಗೆ ಬಡ್ತಿ ನೀಡುವ ಪ್ರಕ್ರಿಯೆ ಬರುವ 2025ರ ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಎಸ್.ಮಧು ಬಂಗಾರಪ್ಪ ಭರವಸೆ ನೀಡಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಎಸ್.ವಿ.ಸಂಕನೂರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈಗಾಗಲೇ 2013ವರೆಗೆ ಪದೋನ್ನತಿ ಪ್ರಕ್ರಿಯೆಗೆ ರಾಜ್ಯಮಟ್ಟದಲ್ಲಿ ಒಂದೇ ಜೇಷ್ಠತಾ ಪಟ್ಟಿ ತಯಾರಿಸುವ ಕುರಿತು ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿದ್ದಾರೆ.

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957ರ 7ಎ ನಿಯಮದನ್ವಯ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದ್ದು, ತ್ವರಿತವಾಗಿ ನಿಯಮಾನುಸಾರ ನಡೆಸಲು ಕ್ರಮ ವಹಿಸಲಾಗುವುದು ಎಂದರು.




# ದಕ್ಷಿಣ-ಉತ್ತರ ಕರ್ನಾಟಕದ ಶಾಲೆಗಳ ಶಿಕ್ಷಕರ ನೇಮಕದ ವ್ಯತ್ಯಾಸಕ್ಕೆ ಬೇಸರ

ರಾಣೇಬೆನ್ನೂರು, ಡಿ. 9- ದಕ್ಷಿಣ ಕರ್ನಾಟಕದಲ್ಲಿ 12 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ, ಉತ್ತರ ಕರ್ನಾಟಕದಲ್ಲಿ 30 ವಿದ್ಯಾರ್ಥಿಗಳಿಗೆ ಒಬ್ಬರು. ಕಲ್ಯಾಣ ಕರ್ನಾಟಕದಲ್ಲಿ 50 ರಿಂದ 60 ವಿದ್ಯಾರ್ಥಿಗಳಿಗೊಬ್ಬ ಶಿಕ್ಷಕರು ಈ ರೀತಿಯ ಧೋರಣೆ ಸರಿಯಾದುದಲ್ಲ. ಈ ಬಗ್ಗೆ ನಾವು ನ್ಯಾಯ ದೊರಕಿಸಿಕೊಳ್ಳುವ ಪ್ರಯತ್ನ ನಡೆಸಬೇಕಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ತಾ.ಪಂ.ನಲ್ಲಿ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಿಕ್ಷಣ ಇಲಾಖೆ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಶಿಕ್ಷಣಾಧಿಕಾರಿಯ ಜೊತೆ ಚರ್ಚಿಸುತ್ತಾ ಮೇಲಿನಂತೆ ಅಭಿಪ್ರಾಯಿಸಿದರು.

ಹಾಜರಾತಿಗಿಂತ ಹೆಚ್ಚು ಮೊಟ್ಟೆ ಇನ್ನಿತರ ಆಹಾರ ಪದಾರ್ಥಗಳನ್ನು ಪಡೆಯುತ್ತಿರುವುದು ಎಲ್ಲ ಶಾಲೆಗಳಲ್ಲಿ ನಡೆಯುತ್ತಿದೆ ಎನ್ನುವ ಸದಸ್ಯರ ದೂರು ಪ್ರಸ್ತಾಪಿಸಿ, ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಅಕ್ಷರದಾಸೋಹ ಇಲಾಖೆ ಅಧಿಕಾರಿ ಹಾಗೂ ಶಿಕ್ಷಣಾಧಿಕಾರಿಗಳಿಗೆ ಶಾಸಕರು



ಸೂಚನೆ ನೀಡಿದರು.

ತಾಲ್ಲೂಕಿನಲ್ಲಿನ ಅಂಬೇಡ್ಕರ್, ವಾಲ್ಮೀಕಿ ಮುಂತಾದ ಮಹನೀಯರ ಹೆಸರಿನ ಸಮುದಾಯ ಭವನಗಳ ಸ್ಥಿತಿ-ಗತಿಯ ಬಗ್ಗೆ ಪ್ರತ್ಯಕ್ಷ ಪರಿಶೀಲನೆ ನಡೆಸಿ ವರದಿ ಕೊಡಲು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗೆ ಶಾಸಕರು ಕಟ್ಟಪ್ಪಣೆ ಮಾಡಿದರು. ಆರೋಗ್ಯ ಇಲಾಖೆಯ ಬಗ್ಗೆ ಬಂದ ದೂರುಗಳ ಬಗ್ಗೆ ಸೂಕ್ತ ಕ್ರಮಕ್ಕೆ ತಾಲ್ಲೂಕು ವೈದ್ಯಾಧಿಕಾರಿಗೆ ಸೂಚಿಸಿದರು.

ಮೊದಲಿನಿಂದಲೂ ಸಂಪರ್ಕದಲ್ಲಿರುವವರಿಗೆ ಮಾತ್ರ ಸರ್ಕಾರದ ಯೋಜನೆಗಳ ಉಪಯುಕ್ತತೆ ಹಾಗೂ ಸಲಕರಣೆಗಳು ದೊರೆಯುತ್ತಿರುವ ದೂರುಗಳ ಬಗ್ಗೆ ಪ್ರಸ್ತಾಪಿಸಿ ಕೃಷಿ ಇಲಾಖೆಯ ಅಧಿಕಾರಿ ಶಾಂತಮಣಿ ಅವರಿಗೆ ಸಮಜಾಯಿಷಿ ಕೇಳಿದ ಶಾಸಕರು, ಎಲ್ಲ ಯೋಜನೆಗಳು ರೈತರಿಗೆ ದೊರಕಬೇಕು. ಆ ದಿಶೆಯಲ್ಲಿ ಕ್ರಮ ಜರುಗಿಸುವಂತೆ ಅವರು ಖಡಕ್ ಸೂಚನೆ ನೀಡಿದರು.

ಪ್ರಾರಂಭದಲ್ಲಿ ನಾಡಗೀತೆಗೆ ಆದ ಅಡತಡೆ ಬಗ್ಗೆ ಪ್ರಸ್ತಾಪಿಸಿ ಮುಂದೆ ಇಂಥಹ ಕೃತ್ಯ ನಡೆಯದಂತೆ ಅಧಿಕಾರಿ ಗಳಿಗೆ ಎಚ್ಚರಿಕೆ ವಹಿಸುವಂತೆ ಶಾಸಕರು ಸೂಚಿಸಿದರು. ವೇದಿಕೆಯಲ್ಲಿ ಗ್ಯಾರಂಟಿಗಳ ಅಧ್ಯಕ್ಷ ಮಂಜನಗೌಡ ಪಾಟೀಲ, ತಾಪಂ ಆಡಳಿತಾಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ, ಪೊಲೀಸ್ ವೃತ್ತ ನಿರೀಕ್ಷಕರು, ತಹಶೀಲ್ದಾರ್ ಹಾಗೂ ಪೌರಾಯುಕ್ತರು ಉಪಸ್ಥಿತರಿದ್ದರು.

# ಸಾಸ್ವಿಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಗೋಪಾಳಿ ಮಮತ



ಹರಪನಹಳ್ಳಿ, ಡಿ.9- ತಾಲ್ಲೂಕಿನ ಸಾಸ್ವಿಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಗೋಪಾಳಿ ಮಮತ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು ತಿಳಿಸಿದ್ದಾರೆ.

ಬಿಜೆಪಿ ಬೆಂಬಲಿತ ಅಭ್ಯರ್ಥಿ ಗೋಪಾಳಿ ಮಮತ ಹಾಗೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಎಸ್. ರತ್ನಮ್ಮ ಸ್ಪರ್ಧಿಸಿದ್ದರು. ಒಟ್ಟು 18 ಸದಸ್ಯರುಗಳಲ್ಲಿ ಬಿಜೆಪಿಯ ಅಭ್ಯರ್ಥಿಗೆ 8 ಹಾಗೂ ಕಾಂಗ್ರೆಸ್ ಅಭ್ಯರ್ಥಿಗೆ 7 ಮತಗಳನ್ನು ಪಡೆದುಕೊಂಡರು.

3 ಮತಗಳು ನಿಷ್ಕ್ರೀಯವಾದ ಕಾರಣ ಬಿಜೆಪಿ ಬೆಂಬಲಿತ ಅಭ್ಯರ್ಥಿ 1 ಮತಗಳ ಅಂತರದಲ್ಲಿ ರೋಚಕ ಗೆಲುವಿನ ನಗೆ ಬೀರಿದರು.

ಸದಸ್ಯರುಗಳಾದ ಹಾಲಮ್ಮ ಎಸ್, ಶಂಕರಗೌಡ ಎಚ್, ಅಂಜಿನಮ್ಮ ಯು, ಪಿ ಮಂಜುನಾಥ, ಎಂ. ಸಿದ್ದಲಿಂಗಪ್ಪ, ರೇವಣಸಿದ್ದಪ್ಪ, ಟಿ. ಮುನೇಗೌಡ, ಟಿ. ಶೃತಿ, ಕೆ. ನೀಲಮ್ಮ ಪ್ರಮುಖರಾದ ಎಸ್. ಎಚ್. ಬುಳ್ಳನಗೌಡ, ಯು. ಕೋಟೆಪ್ಪ, ಕೆ. ಬಸವರಾಜ, ಗಿರಿಯಪ್ಪ ಮಂಜುನಾಥ, ಹೆಚ್. ಶಂಕರಗೌಡ, ಎಂ.ಪಿ. ಹಾಲೇಶ್, ಬಿಜೆಪಿ ಬಸವರಾಜ, ಕೆ.ಜಿ. ಕೊಟ್ರೇಶ್ ಮತ್ತಿತರರು ಇದ್ದರು.

# ಶಿಕ್ಷಣ ಅದಾಲತ್; 'ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆಗೆ'

## ನ್ಯಾಮತಿ ತಾ।।ನಿಂದ ಶಿಕ್ಷಣ ಅದಾಲತ್ ಆರಂಭ: ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ವಿನಯ್ ಕುಮಾರ್

ಹೊನ್ನಾಳಿ,ಡಿ. 9- ಸಾಮಾಜಿಕ ನ್ಯಾಯಕ್ಕಾಗಿ ಸಾರ್ವಜನಿಕ ಕೆಲಸ ಮುಂದುವರಿಸುವುದೇ ನನ್ನ ಆದ್ಯ ಕರ್ತವ್ಯವಾಗಿದೆ. ಲೋಕಸಭಾ ಚುನಾವಣೆಯಲ್ಲಿ ಸೋತೆನೆಂದು ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ಸ್ವಾಭಿಮಾನ ಬಳಗದ ರಾಜ್ಯಾಧ್ಯಕ್ಷ ಬಿ.ಜಿ.ವಿನಯಕುಮಾರ್ ಹೇಳಿದರು.

ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಅಭಿಮಾನಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನನ್ನನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಲಾಯಿತು, ಶಾಮನೂರು ಶಿವಶಂಕರಪ್ಪ ಶಿವಮೊಗ್ಗ ನಗರದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಅವರನ್ನು ಗೆಲ್ಲಿಸಿ ಎಂದು ಕರೆ ಕೊಟ್ಟರು, ಆದರೆ ಅವರ ಮೇಲೆ ಯಾವುದೇ ಕ್ರಮ ಮಾತ್ರ ಆಗಲಿಲ್ಲ. ಇದು ರಾಜಕೀಯ ಕ್ಷೇತ್ರದಲ್ಲಿ ನಡೆಯವಂತಹ ವೈರುದ್ಧ್ಯಗಳು ಎಂದು ಹೇಳಿದರು.

ಬಡವರ ಮತ್ತು ಶೋಷಿತ ವರ್ಗಕ್ಕೆ ರಾಜಕೀಯ ಪ್ರಜ್ಞೆ ಬೆಳೆಸುವುದು ನನ್ನ ಆದ್ಯ ಕರ್ತವ್ಯವಾಗಿದ್ದು, ಇದಕ್ಕಾಗಿ ಸ್ವಾಭಿಮಾನ ಬಳಗದ ವತಿಯಿಂದ ರಾಜ್ಯಾದ್ಯಂತ ಶಿಕ್ಷಣ ಅದಾಲತ್, ಕೃಷಿ ಅದಾಲತ್, ಜನತಾ ಅದಾಲತ್‌ಗಳನ್ನು ಹಮ್ಮಿಕೊಂಡು ತನ್ಮೂಲಕ ಮೂರು ಅಂಶಗಳ ವಿಚಾರಧಾರೆಯನ್ನು ತಲುಪಿಸುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದರು.

ದಿನಾಂಕ 18 ರ ಬುಧವಾರದಿಂದ ನ್ಯಾಮತಿ ತಾಲ್ಲೂಕಿನ



ಸೂರಗೊಂಡನಕೊಪ್ಪ ಗ್ರಾಮದ ಸರ್ಕಾರಿ ಶಾಲೆಯಿಂದ ಶಿಕ್ಷಣ ಅದಾಲತ್ ಪ್ರಾರಂಭವಾಗಿ, ಹಳೇಜೋಗ, ಹೊಸಜೋಗ, ಚಿನ್ನಿಕಟ್ಟೆ, ಮಾದಾಪುರ, ಕೊಡತಾಳ, ಸೌಳಂಗ, ಸೋಗಿಲು, ಚಟ್ನಹಳ್ಳಿ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡಲಾಗುವುದು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳ ಸ್ಥಿತಿ ತುಂಬಾ ಆತಂಕಕಾರಿಯಾಗಿದ್ದು, ಶಿಕ್ಷಣ ಅದಾಲತ್ ಕಾರ್ಯಕ್ರಮದಡಿ 'ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆ' ಎನ್ನುವ ಘೋಷಣೆಯೊಂದಿಗೆ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಮೂಲಭೂತ ಸೌಕರ್ಯಗಳು, ಶಾಲಾ ಕೊಠಡಿ, ಆಟದ ಮೈದಾನ, ಬಿಸಿಯೂಟ ಯೋಜನೆ, ಶೌಚಾಲಯ, ಭದ್ರತೆ, ಶಿಕ್ಷಣದ ಗುಣಮಟ್ಟದ ಬಗ್ಗೆ ಶಾಲಾ ಮುಖ್ಯಸ್ಥರು, ಸಹ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಹಾಗೂ ವಿದ್ಯಾರ್ಥಿಗಳೊಂದಿಗೆ ಮುಕ್ತವಾಗಿ ಚರ್ಚಿಸಲಾಗುವುದು. ಶೈಕ್ಷಣಿಕ ಸಾಮರ್ಥ್ಯ ಹೆಚ್ಚಿಸಲು ಕೈಗೊಳ್ಳಬೇಕಾದ ಮಾರ್ಗಗಳು, ಸಲಹೆಗಳನ್ನು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸಂಬಂಧಪಟ್ಟ ಇಲಾಖೆ ಗಮನಕ್ಕೆ ತಂದು ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುವುದಾಗಿದೆ ಎಂದು ಹೇಳಿದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧೆ ಮಾಡುವಿರಿ ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನನ್ನ ಮುಂದೆ ಹೊನ್ನಾಳಿ, ಹರಪನಹಳ್ಳಿ ಕ್ಷೇತ್ರಗಳು ಇದ್ದು, ಇವುಗಳಲ್ಲಿ ಯಾವುದಾದರೊಂದು ಕ್ಷೇತ್ರದಲ್ಲಿ ಸ್ಪರ್ಧಿಸುವ ಅಭಿಲಾಷೆ ಹೊಂದಿದ್ದು, ಪಕ್ಷದ ಟಿಕೆಟ್ ಸಿಗದಿದ್ದರೆ ಹೊನ್ನಾಳಿಯಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಅಭಿಲಾಷೆ ಇದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಜು ಕಣಗಣ್ಣಾರ್, ಮಂಜುನಾಥ್, ದೇವರಾಜ್, ವಾಸಪ್ಪ, ವಿನಯ್ ಇದ್ದರು.

# ಮಲೇಬೆನ್ನೂರಿನಲ್ಲಿ ಇಂದು ಗುಮ್ಮಿ ಚೌಡೇಶ್ವರಿ ಕಾರ್ತಿಕ

ವಾಲ್ಮೀಕಿ ಬಡಾವಣೆ ಸಮೀಪದ ಶ್ರೀ ಗುಮ್ಮಿ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಇಂದು ಸಂಜೆ 7ಕ್ಕೆ ಕಾರ್ತಿಕೋತ್ಸವ ನಡೆಯಲಿದೆಂದು ಬಸವರಾಜ್ ದೊಡ್ಮನಿ ತಿಳಿಸಿದ್ದಾರೆ.

# ವಿಕಲಚೇತನರ, ಹಿರಿಯ ನಾಗರಿಕರ ಭದ್ರತೆಗೆ ಸರ್ಕಾರ ಬದ್ಧವಾಗಿದೆ: ಎಸ್ಸೆಸ್ಸೆಂ

ದಾವಣಗೆರೆ, ಡಿ.9- ಫಲಾನುಭವಿಗಳು ಸರ್ಕಾರದಿಂದ ಪಡೆಯುವ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಲು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು.

ನಗರದ ಗೃಹ ಕಚೇರಿಯ ಆವರಣದಲ್ಲಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅರ್ಹ 15 ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ವಿತರಿಸಿ ಅರಿವು ಮೂಡಿಸಿದರು.

2012 ಹಾಗೂ 13 ನೇ ಸಾಲಿನಿಂದ ವಿಕಲಚೇತನರಿಗೆ ತ್ರಿಚಕ್ರ ವಿತರಣೆಯ ಯೋಜನೆಯನ್ನು ರೂಪಿಸಲಾಗಿದೆ. ನಮ್ಮ ಜಿಲ್ಲೆಯಲ್ಲಿ ಇದುವರೆಗೂ 5436 ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ನೀಡಲಾಗಿದೆ. 2023-24 ನೇ ಸಾಲಿನಲ್ಲಿ ಜಿಲ್ಲೆಯ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ರೂ.4 ಕೋಟಿ 25



ಲಕ್ಷದ 10 ಸಾವಿರ ಅನುದಾನ ಬಂದಿದ್ದು 2024-25 ನೇ ಸಾಲಿನಲ್ಲಿ 286 ಅರ್ಜಿಗಳ ಪೈಕಿ 86 ತ್ರಿಚಕ್ರ ವಾಹನಗಳನ್ನು ವಿತರಿಸಿದ್ದು, ಇನ್ನುಳಿದವುಗಳನ್ನು ಹಂತ ಹಂತವಾಗಿ ವಿತರಣೆ ಆಗಲಿವೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರ ಇಲಾಖೆಯ ಉಪ ನಿರ್ದೇಶಕ ಡಾ.ಕೆ.ಕೆ ಪ್ರಕಾಶ್, ಕಾಂಗ್ರೆಸ್ ಪಕ್ಷದ ಮುಖಂಡರುಗಳು ಇತರರು ಉಪಸ್ಥಿತರಿದ್ದರು.

# ಪಂಚಮಸಾಲಿಗೆ ಮೀಸಲಾತಿ; ನಾಳೆ ಕೋರ್ಟ್ ಆದೇಶ

**(1ನೇ ಪುಟದಿಂದ)** 2ಎ ಪ್ರವರ್ಗಕ್ಕೆ ಸೇರಿಸಲಿಲ್ಲ, ಬದಲಿಗೆ, ಅಲ್ಪಸಂಖ್ಯಾತ ಮುಸ್ಲಿಮರಿಗೆ ನೀಡಿದ್ದ ಶೇ.4ರಷ್ಟು ಮೀಸಲಾತಿ ರದ್ದುಪಡಿಸಿ, 3ಎ ಹಾಗೂ 3ಬಿ ಪ್ರವರ್ಗಕ್ಕೆ ತಲಾ ಶೇ.2ರಂತೆ ಮೀಸಲಾತಿ ಹಂಚಿಕೆ ಮಾಡಿತ್ತು.

ಇದನ್ನು ಆಕ್ಷೇಪಿಸಿ ಮುಸ್ಲಿಮರು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು, ಪ್ರಕರಣದ ವಿಚಾರಣೆ ವೇಳೆ ಹಿಂದಿನ ಬಿಜೆಪಿ ಸರ್ಕಾರ ಮುಸ್ಲಿಮರ ಮೀಸಲಾತಿ ರದ್ದುಪಡಿಸುವುದಿಲ್ಲ, ಯಥಾಸ್ಥಿತಿ ಮುಂದುವರೆಸಿಕೊಂಡು ಹೋಗುವುದಾಗಿ ಪ್ರಮಾಣಪತ್ರ ಸಲ್ಲಿಸಿದೆ.

ಇದರ ಆಧಾರದ ಮೇಲೆ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿದ್ದು, ಆದೇಶ ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ, ಇದರ ಪ್ರತಿಯನ್ನು ನಾಳೆಯೇ ಸದನದ ಮುಂದೆ ಮಂಡಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಅರವಿಂದ ಬೆಲ್ಲದ್, ನಾಳೆ, ಮಂಗಳವಾರ ಪಂಚಮಸಾಲಿ 2ಎ ಮೀಸಲಾತಿ ಹೋರಾಟ ನಡೆಯಲಿದೆ, ಆದ್ದರಿಂದ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಬುಧವಾರ ಸದನದ ಮುಂದೆ ಮಂಡಿಸುವಂತೆ ಸಭಾಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

# ಧಾರ್ಮಿಕ ಹಿನ್ನೆಲೆ ನಡೆಯಲಿ : ಶ್ರೀ

**(1ನೇ ಪುಟದಿಂದ)** ಸಮಿತಿಯ ನಿರ್ದೇಶಕ ಸಿ.ಜಿ. ಜಗದೀಶ್ ಕೂಲಂಬಿ ಸ್ವಾಗತಿಸಿದರು.

ಸಿರಿಗೆರೆ ತರಳಬಾಳು ಕಲಾ ಸಂಘದ ವಿದ್ಯಾರ್ಥಿಗಳಿಂದ ಗೋವಿನ ಹಾಡು ನೃತ್ಯ ರೂಪಕ, ಮಲ್ಲಕಂಬ, ಮಲ್ಲಿಹಗ್ಗ, ಜಡೇ ಕೋಲಾರ, ಭರತನಾಟ್ಯ ನಡೆಯಿತು. ತುಳಸಿ ಮಹಿಳಾ ಸಂಘದಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

## ಆಂಜನೇಯ ಕಾರ್ತಿಕ

ದಾವಣಗೆರೆ, ಡಿ. 9- ನಗರದ ಕೊಟ್ಟೂರೇಶ್ವರ ಬಡಾವಣೆ ಶ್ರೀ ಮಾಳೆ ಮಾರಮ್ಮದೇವಿ ದೇವಸ್ಥಾನದಲ್ಲಿ ಇದೇ ದಿನಾಂಕ 14ರ ಶನಿವಾರ ಸಂಜೆ 7 ಗಂಟೆಗೆ ಶ್ರೀ ಜಪಲಿ ವೀರ ಆಂಜನೇಯ ಸ್ವಾಮಿ ಕಾರ್ತಿಕ ನಡೆಯಲಿದೆ.

# ಅನರ್ಹ ಬಿಪಿಎಲ್ ಪಡಿತರದಾರರ ವಿರುದ್ಧ ಕ್ರಮ

**(1ನೇ ಪುಟದಿಂದ)** ಪಾವತಿದಾರರು, ನಿಯಮಾವಳಿ ಮೀರಿ ಲಕ್ಷಾಂತರ ಮಂದಿ ಬಿಪಿಎಲ್ ಪಡಿತರ ಚೀಟಿ ಪಡೆದು ಬಡವರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದು ಇಂತಹವರನ್ನು ಇನ್ನು ಮುಂದೆ ಬಿಡುವುದಿಲ್ಲ ಎಂದರು.

ಜನವರಿ 2021ರಿಂದ ಮೇ 2023ರವರೆಗೆ 3,35,463 ಅನರ್ಹರು ಪಡೆದ ಆದ್ಯತಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದೆ, ಇವರಿಗೆ 13,51,30,858 ರೂ. ದಂಡ ವಿಧಿಸುವ ಮೂಲಕ ನಷ್ಟ ಭರಿಸಲು ಸರ್ಕಾರ ಕ್ರಮ ವಹಿಸಿದೆ.

ಆಹಾರ ಇಲಾಖೆ ಉಗ್ರಾಣಗಳಿಂದ ಅಕ್ರಮವಾಗಿ ಕಾಳಸಂತೆಯಲ್ಲಿ ಅಕ್ಕಿ ಮಾರಾಟ ತಪ್ಪಿಸಲು ಸರ್ಕಾರ ಕ್ರಮ ವಹಿಸಿದೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಪಡಿತರ ಅಕ್ರಮ ಸಾಗಣೆ ಕಂಡುಬಂದಲ್ಲಿ ಕೂಡಲೇ ದಾಳಿ ನಡೆಸಿ, ಅಗತ್ಯ ವಸ್ತುಗಳ ಕಾಯ್ದೆ 1955ರಡಿ ಪ್ರಕರಣ ದಾಖಲಿಸಿ, ಅಕ್ರಮ ದಾಸ್ತಾನು ಮುಟ್ಟುಗೋಲು ಹಾಕಿಕೊಂಡು, ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ, ಮುಟ್ಟುಗೋಲು ದಾಸ್ತಾನು ವಿಲೇವಾರಿ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲಾಗುತ್ತಿದೆ.

2024-25ರಲ್ಲಿ 213 ಎಫ್.ಐ.ಆರ್ ದಾಖಲಿಸಿ ಒಟ್ಟು 2,68,07,872 ರೂ. ಮೌಲ್ಯದ ವಸ್ತು ವಶಪಡಿಸಿಕೊಂಡು, 238 ಆರೋಪಿಗಳನ್ನು ಬಂಧಿಸಲಾಗಿದೆ.

ಬಡತನ ರೇಖೆಗಿಂತ ಮೇಲೆ ಬಂದಿರುವವರ ಬಿಪಿಎಲ್ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮ ವಹಿಸಲಾಗುತ್ತಿದೆ.

ಆಹಾರ ಇಲಾಖೆ ಸರ್ವರ್ ಹಳೆಯದಾಗಿದ್ದು, ಎನ್‌ಐಸಿಯಿಂದ ಕೆಎಸ್‌ಡಿಸಿಗೆ ಆಹಾರ ತಂತ್ರಾಂಶ ಮೈಗ್ರೇಶನ್ ಕಾರ್ಯ ಅಂತಿಮ ಹಂತದಲ್ಲಿದ್ದು, ಕಾರ್ಯಪೂರ್ಣಗೊಂಡ ನಂತರ ಆದ್ಯತಾ ಪಡಿತರ ಚೀಟಿ ನೀಡುವ ಹಾಗೂ ಪಡಿತರ ತಿದ್ದುಪಡಿ ಕಾರ್ಯ ನಿರಂತರವಾಗಿ ನಡೆಯಲಿದೆ ಎಂದರು.


## ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಸೊಸೈಟಿಯ ನಿರ್ದೇಶಕರಾದ **ಶ್ರೀ ಎನ್. ನಿಂಗಪ್ಪ** ಅವರ ತಂದೆಯವರಾದ

**ಶ್ರೀ ಪಿ. ನಾಗಪ್ಪ, ಕಂಟ್ರ್ಯಾಕ್ಟರ್**

*ಇವರು ದಿನಾಂಕ : 9.12.2024ರ ಸೋಮವಾರ ನಿಧನರಾಗಿದ್ದು,*
*ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ,*
*ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿ ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.*

**ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ**
**ಪಿಗ್ಮಿ ಸಂಗ್ರಹಕಾರರು ಹಾಗೂ ಸರ್ವ ಸದಸ್ಯರು**

**ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ದಾವಣಗೆರೆ.**

ಶಿವಗೌರಿ, ಮೊದಲನೇ ಮಹಡಿ, ಶ್ರೀ ಭೂತಚೌಡೇಶ್ವರಿ ದೇವಸ್ಥಾನ ಪಕ್ಕ,
ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ -6.

**ಫೋ : 08192-356058, ಮೊ : 9844833876**



## ಪಿ.ನಾಗಪ್ಪನವರು ನಿಧನ



**ದಿ।। ಶ್ರೀ ಪಿ.ನಾಗಪ್ಪನವರು** (ಕಂಟ್ರಾಕ್ಟರ್)

ದಾವಣಗೆರೆಯ ಯಲ್ಲಮ್ಮ ನಗರದ 12ನೇ ಕ್ರಾಸ್ ವಾಸಿ

**ದಿ।। ಶ್ರೀ ಪಿ.ನಾಗಪ್ಪ** (ಕಂಟ್ರಾಕ್ಟರ್) ಇವರು (90)

ದಿನಾಂಕ: 09-12-2024ನೇ ಸೋಮವಾರ ದೈವಾಧೀನಾರಾಗಿದ್ದು, ಮೃತರು ಮೂರು ಗಂಡು ಮತ್ತು ಎರಡು ಹೆಣ್ಣು ಮಕ್ಕಳನ್ನು ಅಗಲಿರುತ್ತಾರೆ.
ಶ್ರೀಯುತರ ಅಂತ್ಯಕ್ರಿಯೆಯನ್ನು ದಿನಾಂಕ:10-12-2024ನೇ ಮಂಗಳವಾರ ಮದ್ಯಾಹ್ನ 12.00 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೇರವೇರಿಸಲಾಗುವುದು.

**ದುಃಖತಪ್ತರು**

- ವಿಶ್ವಾಸ್ ಸ್ಟೀಲ್ ಅಂಡ್ ಸಿಮೆಂಟ್, ದಾವಣಗೆರೆ.
- ಸ್ವಾಮಿ ಬಾರ್ ಅಂಡ್ ರೆಸ್ಟೋರೆಂಟ್, ದಾವಣಗೆರೆ.
- ರಾಜಭವನ್ ಬಾರ್ ಅಂಡ್ ರೆಸ್ಟೋರೆಂಟ್, ದಾವಣಗೆರೆ.
- ಜೆ.ಬಿ. ಇಂಟಿರಿಯರ್ ಅಂಡ್ ಹಾರ್ಡ್‌ವೇರ್, ದಾವಣಗೆರೆ.
- ಭರತ್ ಸ್ಟೀಲ್ಸ್ ಅಂಡ್ ಸಿಮೆಂಟ್ ದಾವಣಗೆರೆ.
- ಕೆ.ಎಸ್.ಎಫ್.ಸಿ. ಶಟಲ್ ಗ್ರೂಪ್, ದಾವಣಗೆರೆ.
- ಪಿ.ಹಾಲಸ್ವಾಮಿ ಮತ್ತು ಗೆಳೆಯರ ಬಳಗ ದೊಡ್ಡಬ್ಬಿಗೆರೆ.

**99166 11976, 91089 48135.**


# ಹರಿಹರದಲ್ಲಿ ಇಂದು ಶಿವಸಂಚಾರ ನಾಟಕ

ಬಸವ ಬಳಗ, ಸಿಟಿ ಫ್ಯಾಮಿಲಿ ಸೆಂಟರ್, ಎಪಿಎಂಸಿ ವಾಯು ವಿಹಾರ ಬಳಗದ ಸಹಯೋಗದೊಂದಿಗೆ ವಿದ್ಯಾನಗರ ಆವರಣದಲ್ಲಿರುವ ಸಿಟಿ ಫ್ಯಾಮಿಲಿ ಸೆಂಟರ್ ಮುಂಭಾಗದ ಆವರಣದಲ್ಲಿ ಶಿವ ಸಂಚಾರ ನಾಟಕ ಮಂಡಳಿಯಿಂದ ಇಂದು ಮತ್ತು ನಾಳೆ ನಾಟಕಗಳ ಪ್ರದರ್ಶನ ನಡೆಯಲಿದೆ.

ಇಂದು ರಾತ್ರಿ 8.30ಕ್ಕೆ 'ಬಂಗಾರದ ಮನುಷ್ಯ' ನಾಟಕ ಹಾಗೂ ನಾಳೆ ಬುಧವಾರ ರಾತ್ರಿ 8.30ಕ್ಕೆ 'ಕೋಳೂರು ಕೊಡಗೂಸು' ನಾಟಕ ಪ್ರದರ್ಶನಗೊಳ್ಳಲಿದೆ.

## ಮಾರಮ್ಮ ಕಾರ್ತಿಕ

ದಾವಣಗೆರೆ, ಡಿ. 9- ನಗರದ ಕೊಟ್ಟೂರೇಶ್ವರ ಬಡಾವಣೆಯಲ್ಲಿರುವ ಶ್ರೀ ಮಾಳೆ ಮಾರಮ್ಮ ದೇವಿ ದೇವಸ್ಥಾನದಲ್ಲಿ ಇದೇ ನಾಂಕ 17ರ ಸಂಜೆ ಮಂಗಳವಾರ ಸಂಜೆ 7 ಗಂಟೆಗೆ ಮಳೆ ಮಾರಮ್ಮ ದೇವಿಯ ಕಾರ್ತಿಕ ನಡೆಯಲಿದೆ.

## ತಿಮ್ಮಣ್ಣ ಪಿಸಾಳೆ ನಿಧನ



ದಾವಣಗೆರೆ ಸಿಟಿ ಹೊಂಡದ ಸರ್ಕಲ್ ಹತ್ತಿರದ ವಾಸಿ ಪಿಸಾಳೆ ಸೈಕಲ್ ಶಾಪ್ ಮಾಲೀಕರಾದ ನಾರಾಯಣರಾವ್ ಪಿಸಾಳೆ ಅವರ ಪುತ್ರ ತಿಮ್ಮಣ್ಣ ಪಿಸಾಳೆ (58) ಇವರು ದಿನಾಂಕ 9.12.2024ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.12.2024ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.



## ದಾವಣಗೆರೆ ಹಳೆ ಊರಿನ ಚಳಿಗಾಲದ ಸ್ವಾರಸ್ಯಗಳು...

# ‘ರಾಕ್ಷಸ ಬರಲೇ ಇಲ್ಲ ??’


**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ಚಳಿಗಾಲ ಬಂತೆಂದರೆ ನಮಗೆ ನೆನಪಾಗುವುದು ಆರ್ಟಿಸ್ಟ್ ಕಂಬೈನ್ ಅವರ ನಾಟಕೋತ್ಸವ. ಸುಮಾರು 60 ವರ್ಷಗಳ ಹಿಂದೆ ದಾವಣಗೆರೆಯ ರಾಜನಹಳ್ಳಿ ಹನುಮಂತಪ್ಪನವರ ಧರ್ಮಛತ್ರದ ಬಲಪಕ್ಕದಲ್ಲಿದ್ದ ಸುನಂದರಂಗ ಮಂಟಪ ಅಂದರೆ ಈಗ ರಾಜನಹಳ್ಳಿ ಜನಾಬಾಯಿ ಆರ್.ಆರ್.ಶ್ರೀನಿವಾಸ ಮೂರ್ತಿ ಧರ್ಮಶಾಲಾ ಕಟ್ಟಡ ಇರುವ ಸ್ಥಳ. ಸುನಂದಮ್ಮನವರು ಎಂದರೆ ಧರ್ಮ ಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಮೊಮ್ಮಗಳು, ಧರ್ಮಪ್ರಕಾಶ ರಾಜನಹಳ್ಳಿ ರಾಮಶೆಟ್ಟರ ಮಗಳು, ಆರ್.ಆರ್.ಶ್ರೀನಿವಾಸಮೂರ್ತಿರವರ ಸಹೋದರಿ. ಇವರು ಚನ್ನಗಿರಿ ವಿರೂಪಾಕ್ಷಪ್ಪನವರ ಮೊದಲ ಧರ್ಮಪತ್ನಿಯವರು. ಈ ಸುನಂದ ರಂಗಮಂಟಪದಲ್ಲಿ ನಡೆದ ಅನೇಕ ಮಹತ್ತರ ಕಾರ್ಯಕ್ರಮಗಳ ಬಗ್ಗೆ ಮುಂದೊಮ್ಮೆ ಬರೆಯುವೆ.

ಆರ್ಟಿಸ್ಟ್ ಕಂಬೈನ್ ಅವರ ವತಿಯಿಂದ ಸುಮಾರು ಒಂದು ವಾರದ ಕಾಲ ಪ್ರತಿದಿನ ಸಂಜೆ ‘ಕೈಲಾಸಂ ಸ್ಮಾರಕ ಮಕ್ಕಳ ನಾಟಕೋತ್ಸವ’, ‘ಹಿರಣ್ಣಯ್ಯ ಸ್ಮಾರಕ ಹಿರಿಯರ ನಾಟಕೋತ್ಸವ’ ನಡೆಯುತ್ತಿತ್ತು. ನಮಗೆ ಪರಿಚಿತರಾಗಿದ್ದ ಭದ್ರಾ ನೀರಾವರಿ ಇಲಾಖೆಯ ಹುದ್ದೆಯಲ್ಲಿದ್ದ ಎಂ. ಮೇಲಗಿರಿಯವರು ಸಹಾ ಆರ್ಟಿಸ್ಟ್ ಕಂಬೈನ್‌ನಲ್ಲಿ ಇದ್ದರು. ಹವ್ಯಾಸಿ ನಾಟಕ ತಂಡಗಳೇ ಇದರಲ್ಲಿ ಭಾಗವಹಿಸುತ್ತಿದ್ದು, ಉತ್ತಮ ನಾಟಕಗಳಿಗೆ ಬಹುಮಾನವೂ ಇರುತ್ತಿತ್ತು. ಸಾಮಾನ್ಯವಾಗಿ ಡಿಸೆಂಬರ್ ತಿಂಗಳಲ್ಲೇ ಈ ನಾಟಕೋತ್ಸವ ನಡೆಯುತ್ತಿದ್ದು, ಚಳಿಯಲ್ಲೂ ರಂಗಮಂದಿರದ ಬಯಲಿನಲ್ಲಿ ಕುಳಿತು ನಾಟಕ ನೋಡಲು ಜನ ಕಿಕ್ಕಿರಿದು ಸೇರುತ್ತಿದ್ದರು. ಹೆಚ್ಚಾಗಿ ಹೋಗುತ್ತಿದ್ದುದು ಹಳೆ ದಾವಣಗೆರೆಯ ಮಂದಿಯೇ.

ಶಾಲಾ ವಿದ್ಯಾರ್ಥಿಗಳಿಗೆ ಏಳು ದಿನಗಳ ಸೀಸನ್ ಟಿಕೆಟ್ ಸಹಾ ರಿಯಾಯಿತಿ ದರದಲ್ಲಿ ನೀಡಲಾಗುತ್ತಿತ್ತು.

ಬಾಲ್ಯದಲ್ಲಿ ನಾನು, ನನ್ನ ಅಣ್ಣ ಹೆಚ್. ಆನಂದರಾಮ ಶಾಸ್ತ್ರಿ (ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಖ್ಯಾತ ಬರಹಗಾರರು) ನಮ್ಮ ಅಕ್ಕ ಹೆಚ್.ಬಿ.ಮುಕ್ತಾ (ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಕವಯತ್ರಿ) ಹಾಗೂ ಟಿ.ಗಿರಿಜಾ (ಖ್ಯಾತ ಲೇಖಕಿ) ನಾವೆಲ್ಲಾ ಒಟ್ಟಾಗಿ ಹಳೆ ದಾವಣಗೆರೆಯ ಚೌಕಿಪೇಟೆಯಿಂದ ಸಂಜೆ ಕತ್ತಲಾಗುತ್ತಿದ್ದಂತೆ ರೈಲ್ವೆ ನಿಲ್ದಾಣ ದಾಟಿ ಸುನಂದ ರಂಗಮಂಟಪಕ್ಕೆ ಸಡಗರದಿಂದ ಹೋಗುತ್ತಿದ್ದೆವು.



ಆಗ ರೈಲ್ವೆ ನಿಲ್ದಾಣದ ಹೊರಭಾಗದ ಉತ್ತರ ದಿಕ್ಕಿನಿಂದ ದಕ್ಷಿಣ ದತ್ತ ಹೋಗಲು ಹಳೆಯದಾದ ಓವರ್ ಬ್ರಿಡ್ಜ್ ಇದ್ದದ್ದು ಈಗಲೂ ಇದೆ. ಆದರೆ, ರೈಲ್ವೆ ನಿಲ್ದಾಣದೊಳಗೆ ಈ ಕಡೆಯಿಂದ ಆ ಕಡೆ ದಾಟಲು ಮತ್ತೊಂದು ಓವರ್ ಬ್ರಿಡ್ಜ್ ಸಹ ಇತ್ತು. ಎರಡು ಪ್ಲಾಟ್ ಫಾರ್ಮ್‌ಗಳ ಹಳಿಗಳ ಮಧ್ಯದಲ್ಲಿ ಕಬ್ಬಿಣದ ಕಂಬಗಳ ಬೇಲಿ ಇತ್ತು. ಬ್ರಿಡ್ಜ್ ಹತ್ತಿ ಇಳಿಯಲು ಒಲ್ಲದ ಮಕ್ಕಳು ಒಮ್ಮೊಮ್ಮೆ ದೊಡ್ಡವರು ಸಹಾ ಆ ಬೇಲಿಯ ಪ್ರತಿ ಎರಡು ಕಂಬಗಳ ಮಧ್ಯೆ ತಲೆ ತೂರಿಸಿ ನೋಡಿ ಎಲ್ಲಿ ತಲೆ ತೂರುವುದೋ ಅಲ್ಲಿ ಮೈ ಸಹಾ ತೂರುವುದೆಂದು ಖಾತ್ರಿ ಮಾಡಿಕೊಂಡು ದಾಟುತ್ತಿದ್ದರು!.

ಕೈಲಾಸಂ ಸ್ಮಾರಕ ಮಕ್ಕಳ ನಾಟಕಗಳು ಸುಮಾರಾಗಿ ಅರ್ಧ ಗಂಟೆಯ ಅವಧಿಯದಾಗಿದ್ದು, ಸಾಮಾನ್ಯವಾಗಿ ಗುಂಡಣ್ಣ ಮುಂತಾದವರ ತಿಳಿ ಹಾಸ್ಯ ನಾಟಕಗಳೇ ಇರುತ್ತಿದ್ದವು. ಮೊದಲು ಮಕ್ಕಳ ನಾಟಕಗಳಾದ ಮೇಲೆ ಹಿರಣ್ಣಯ್ಯ ಸ್ಮಾರಕ ದೊಡ್ಡವರ ನಾಟಕಗಳ ಪ್ರಸ್ತುತಿ ನಡೆಯುತ್ತಿತ್ತು. ‘ವಿಷಜ್ವಾಲೆ’ ಮುಂತಾದ ಐತಿಹಾಸಿಕ ಹಾಗೂ ಸಾಮಾಜಿಕ ಗಂಭೀರ ಮತ್ತು ಹಾಸ್ಯ ನಾಟಕಗಳು ಇರುತ್ತಿದ್ದವು. ಮಕ್ಕಳ ನಾಟಕಗಳಿಗಿಂತ ದೊಡ್ಡವರ ನಾಟಕಗಳಿಗೆ ಹೆಚ್ಚು ಸಮಯ ಕೊಡಲಾಗುತ್ತಿತ್ತು.

ಪ್ರತಿನಿತ್ಯ ನಾಟಕ ನೋಡಿ ಕೊನೆಯ ದಿನ ಎಲ್ಲಾ ನಾಟಕಗಳ ಕುರಿತು ವಿಮರ್ಶೆ ಬರೆಯುವುದು ಹಾಗೂ ಉತ್ತಮ ವಿಮರ್ಶೆಗೆ ಬಹುಮಾನ ಸಹಾ ನೀಡಲಾಗುತ್ತಿತ್ತು. ನಾಟಕ ನೋಡುತ್ತಲೇ ಟಿ.ಗಿರಿಜಾ ಹಾಗೂ ನಮ್ಮ ಅಣ್ಣ ಮತ್ತು ಅಕ್ಕ ಅಲ್ಲೇ ಪರಸ್ಪರ ಮಾತನಾಡಿ ಕೊಳ್ಳುತ್ತಾ ಅಭಿಪ್ರಾಯ ವಿನಿಮಯ ಮಾಡಿ ಕೊಳ್ಳುತ್ತಿದ್ದರು. ಟಿ. ಗಿರಿಜಾರವರು ತಮ್ಮೊಡನೆ ತಂದ ನೋಟ್ ಬುಕ್ ಒಂದರಲ್ಲಿ ಅದನ್ನೆಲ್ಲಾ ಬರೆದುಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಪ್ರತಿ ವರ್ಷವೂ ಟಿ.ಗಿರಿಜಾ ಅವರ ವಿಮರ್ಶೆಗೆ ಬಹುಮಾನ ಇದ್ದೇ ಇರುತ್ತಿತ್ತು.

ಈ ನಾಟಕೋತ್ಸವದ ವಿಶೇಷವೆಂದರೆ ರಾಜ್ಯದ ಬೇರೆ ಬೇರೆ ಕಡೆಗಳಿಂದಲೂ ತಂಡಗಳು ಬಂದಂತೆ ಮಂಗಳೂರಿನಿಂದಲೂ ‘ಕಡಲನಾಡ ಕಲಾವಿದರು’ ಎಂಬ ತಂಡ ಹಾಗೂ ಮತ್ತೊಂದು ತಂಡ ಬರುತ್ತಿತ್ತು. ಈ ತಂಡದವರ ಸಾಮಾಜಿಕ ಹಾಗೂ ಐತಿಹಾಸಿಕ ನಾಟಕಗಳು ಯಾವ ವೃತ್ತಿರಂಗ ಭೂಮಿಯವರ ನಾಟಕಗಳಿಗಿಂತಲೂ ಕಡಿಮೆ ಇರದೇ, ಹಾಗೆ ನೋಡಿದರೆ ಒಂದು ಗುಂಜಿ ಮತ್ತೂ ಚೆನ್ನಾಗೇ ಇರುತ್ತಿತ್ತು!. ಅದರಲ್ಲೂ ‘ಚಿತ್ರ’ ಎಂಬ ನಾಯಕಿ ಪ್ರಧಾನವಾದ ಅವರ ಪತ್ತೇದಾರಿ ಸಾಮಾಜಿಕ ನಾಟಕವೊಂದು ಹಾಗೂ ಬಹಳ ವಿಶೇಷವಾಗಿ ಅವರ ‘ಚಾಣಕ್ಯ ಚಂದ್ರಗುಪ್ತ’ ನಾಟಕವಂತೂ ಅಭಿನಯ, ವೇಷಭೂಷಣ, ರಂಗ ಸಜ್ಜಿಕೆ, ಸಂಗೀತ, ಸಾಹಿತ್ಯ, ಸಂಭಾಷಣೆ ಎಲ್ಲದರಲ್ಲೂ ಅದ್ಭುತವಾಗಿರುತ್ತಿತ್ತು. ಸಾಮಾನ್ಯವಾಗಿ ಪ್ರತಿ ವರ್ಷವೂ ಅವರಿಗೇ ಪ್ರಥಮ ಬಹುಮಾನ ಹೋಗುತ್ತಿತ್ತು. ಕೊನೆಗೆ ಆಯೋಜಕರ ವಿನಂತಿಯ ಮೇರೆಗೆ ಅವರು ಪ್ರದರ್ಶನ ಕೊಡುತ್ತಿದ್ದರೇ ವಿನಃ ಸ್ಪರ್ಧೆಯಿಂದ ಹೊರಗಿರುತ್ತಿದ್ದರು.

ಮಂಗಳೂರಿನ ಇವರ ತಂಡದ ನಾಟಕಗಳಿದ್ದ ದಿನ ಸೀಸನ್ ಟಿಕೆಟಿಗೆ ಪ್ರವೇಶವಿಲ್ಲದೇ ಅಂದಿನ ನಾಟಕಕ್ಕೆ ವಿಶೇಷ ಟಿಕೆಟ್ ದರ ಸಹಾ ಕೆಲವೊಮ್ಮೆ ನಿಗದಿ ಮಾಡಲಾಗುತ್ತಿತ್ತು!!. ಸುನಂದ ರಂಗಮಂಟಪದ ಮುಂದಿನ ಬಯಲಲ್ಲಿ ಜಮಖಾನ ಹಾಸಿ ಕೂರಲು ವ್ಯವಸ್ಥೆ ಮಾಡಲಾಗಿರುತ್ತಿತ್ತು, ಹಿಂಭಾಗದಲ್ಲಿ ಮರದ ಬೆಂಚುಗಳನ್ನೂ ಹಾಕಲಾಗಿರುತ್ತಿತ್ತು.

ಪ್ರೇಕ್ಷಕರ ಹಾಗೂ ಆಯೋಜಕರ ಒತ್ತಾಯದ ಮೇರೆಗೆ ಮಂಗಳೂರಿನ ಕಡಲನಾಡ ಕಲಾವಿದರು ‘ಚಾಣಕ್ಯ’ ನಾಟಕವನ್ನು ಮರು ವರ್ಷವೂ ಅಭಿನಯಿಸುವವರಿದ್ದರು. ಈ ನಾಟಕದ ಚಾಣಕ್ಯ, ಚಂದ್ರಗುಪ್ತ ಅಷ್ಟೇ ಮುಖ್ಯವಾಗಿ ‘ಅಮಾತ್ಯ ರಾಕ್ಷಸನ’ ಅಭಿನಯಗಳ ಬಗ್ಗೆ ನಾವು ಮಾತನಾಡುತ್ತಿದ್ದುದನ್ನು ಕೇಳಿದ ನಮ್ಮ ಬೀದಿಯ ಕೆಲ ಮಕ್ಕಳು ಅಂದು ನಾಟಕ ನೋಡಲು ನಮ್ಮೊಡನೆ ಬಂದರು. ನಾಟಕ ನೋಡಿ ಖುಷಿ ಪಟ್ಟರು. ಆದರೆ, ಒಬ್ಬ ಹುಡುಗ ಬಹುಷಃ ಶಿವಯೋಗಿ ಇರಬೇಕು, ‘ರಾಕ್ಷಸ ಬರಲೇ ಇಲ್ವಲ್ಲ ?? ನಾನು ನೋಡಬೇಕಿತ್ತು’.. ಎಂದ. ಟಿ.ಗಿರಿಜಾ ಹೇಳಿದರು. ‘ಲೇ ಶಿವೂ, ರಾಕ್ಷಸ ಅಂದ್ರೆ ಕೋರೆ ದಾಡಿ ಇರಾ ರಾಕ್ಷಸ ಅಲ್ಲಪ್ಪ, ಈ ನಾಟಕದಾಗೆ ರಾಜನ ಮಹಾಮಂತ್ರಿ ಇದ್ನಲ್ಲ ಅವನ ಹೆಸರೇ ಅಮಾತ್ಯ ರಾಕ್ಷಸ’ ಎಂದರು. ಶಿವಯೋಗಿ ‘ಹೌದಾ!! ನಾನು ಭಾರೀ ರಾಕ್ಷಸ ಬರ್‍ತೈತಿ ಅದನ್ನು ನೋಡಬೇಕು ಅಂತಾನೆ ಬಂದಿದ್ದೆ’ ಎಂದ.

# ಶೋಷಿತರ ಅಂತರಂಗದ ನುಡಿಗಳೇ ಶರಣ ಸಾಹಿತ್ಯ

## ಶರಣ ಸಾಹಿತ್ಯ ಪರಿಷತ್ ಕಾರ್ಯಕ್ರಮದಲ್ಲಿ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ

ದಾವಣಗೆರೆ, ಡಿ.9- ಬಂಡವಾಳ ಶಾಹಿಗಳ ಸಾಮ್ರಾಜ್ಯದಿಂದ ದೂರು ಇದ್ದಂತಹ ದಲಿತ, ಶೋಷಿತ ವ್ಯಕ್ತಿಗಳು ತಮ್ಮ ಅಂತರಂಗದ ಅರಿವಿನ ಮೂಲಕ ತಾಯಿ ನುಡಿಯ ಭಾಷೆಯಿಂದ ಹೊರ ಹಾಕಿದೆ ನುಡಿಗಳೇ ಶರಣ ಸಾಹಿತ್ಯ. ಜನಸಾಮಾನ್ಯರ ನೋವು, ನಲಿವುಗಳಿಗೆ, ದುಡಿಯುವ ವರ್ಗಗಳ ಧ್ವನಿಯಾಗಿ ಅವ ಅಪೇಕ್ಷೆ, ಅಗತ್ಯತೆಗಳ ದೃಢ ನಿರ್ಧಾರವನ್ನು ಶರಣ ಸಾಹಿತ್ಯ ಪರಿಷತ್ ಒದಗಿಸಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ ಹೇಳಿದರು.

ನಗರದ ಧರ್ಮಪ್ರಕಾಶ ಜಾಲಿಮರದ ವಿರೂಪಾಕ್ಷಪ್ಪ ಸರ್ಕಾರಿ ಪ್ರೌಢಶಾಲೆಯಲ್ಲಿ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ವತಿಯಿಂದ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ‘ಶರಣ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳು’ ಕುರಿತು ಮಾತನಾಡಿದರು.

ಶರಣ ಸಾಹಿತ್ಯವನ್ನು ಯಾರು ಓದಿ ಅಧ್ಯಯನ ನಡೆಸಿ, ಅವಲೋಕನ ಮಾಡಿ, ಆ ನುಡಿಯನ್ನು ತಮ್ಮ ನಡೆಯಲ್ಲಿ ಅಳವಡಿಸಿಕೊಳ್ಳುತ್ತಾರೋ ಆ ವ್ಯಕ್ತಿ ಮೃಗತ್ವದಿಂದ ಮನುಷ್ಯತ್ವ ಮತ್ತು ದೈವತ್ವದ ಕಡೆಗೆ ಕೊಂಡೊಯ್ಯುವ ಶಕ್ತಿಯೇ ಶರಣ ಸಾಹಿತ್ಯದ ಮೌಲ್ಯ ಎಂದರು.

ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ ಅವರು ಅಧ್ಯಕ್ಷತೆ ವಹಿಸಿದ್ದರು. ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ರೇಖಾ ಓಂಕಾರಪ್ಪ ಅವರು, ವಚನ ಸಾಹಿತ್ಯದ ಮಹತ್ವವನ್ನು ವಿವರಿಸಿ, ವಿದ್ಯಾರ್ಥಿಗಳು ಪ್ರತಿ ದಿನ ವಚನಗಳನ್ನು ಅಭ್ಯಾಸ ಮಾಡಬೇಕೆಂದರು.

ಶರಣ ತತ್ವ ಪ್ರತಿಪಾದಕ ಶಿವಕುಮಾರ ಚಿತ್ರಿಕಿ ವಚನ ಗಾಯನದ ಮೂಲಕ



ಸಭಿಕರನ್ನು ರಂಜಿಸಿದರು. ಲಿಂ. ಗೌರಮ್ಮ ಮತ್ತು ವೀರಭದ್ರಯ್ಯ ಹಂಜಗಿಮಠ ದತ್ತಿಯ ಕುಟುಂಬ ಶಾಂಭವಿಯವರನ್ನು ಸನ್ಮಾನಿಸಲಾಯಿತು.

ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಗೌರವಾಧ್ಯಕ್ಷ ಎಂ.ಎಸ್. ನಾಗರಾಜಪ್ಪ, ಉಪಾಧ್ಯಕ್ಷ ಬುಳ್ಳಾಪುರದ ಮಲ್ಲಿಕಾರ್ಜುನಪ್ಪ, ಕೋಶಾಧಿಕಾರಿ ಶೈಲಜಾ ಪಾಲಾಕ್ಷಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಎನ್.ಎಸ್. ರಾಜು, ಗೌರವ ಸಲಹೆಗಾರ ಆರ್. ಯೋಗೇಶ್ವರಯ್ಯ ಮತ್ತಿತರರು ಉಪಸ್ಥಿತರಿದ್ದರು.

ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಕಾರ್ಯದರ್ಶಿ ಶ್ರೀಕುಮಾರ ಆನೆಕೊಂಡ ಸ್ವಾಗತಿಸಿದರು. ಕಾರ್ಯದರ್ಶಿ ಬಿ.ಜಿ.ಲೀಲಾವತಿ ಶೇಖರಪ್ಪ ವಂದಿಸಿದರು. ಶಿಕ್ಷಕ ಪಂಪಾಪತಿ ನಿರೂಪಿಸಿದರು.

## ನಗರದ ಕಾನೂನು ಕಾಲೇಜಿನಲ್ಲಿ ಇಂದು ‘ಮಾನವ ಹಕ್ಕುಗಳ’ ದಿನಾಚರಣೆ


ಆರ್.ಎಲ್.ಕಾನೂನು ಕಾಲೇಜಿನ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ‘ಮಾನವ ಹಕ್ಕುಗಳ’ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರ ಸ್ವಾಮಿ, ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮ.ಕರೆಣ್ಣನವರ, ಜಿಪಂ ಸಿಇಓ ಡಾ.ಸುರೇಶ್.ಬಿ.ಇಟ್ನಾಳ್, ಎಸ್ಪಿ ಉಮಾಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್‌ಕುಮಾರ್ ಆಗಮಿಸುವರು. ‘ಹೊಸತು’ ಮಾಸಪತ್ರಿಕೆ ಸಂಪಾದಕ ಡಾ.ಸಿದ್ದನಗೌಡ ಪಾಟೀಲ್ ಉಪನ್ಯಾಸ ನೀಡುವರು. ಪ್ರಾಂಶುಪಾಲ ಡಾ.ಜಿ.ಎಸ್.ಯತೀಶ್ ಅಧ್ಯಕ್ಷತೆ ವಹಿಸುವರು.

# ವೀರ ರುದ್ರಮುನಿ ಶ್ರೀ ಜನ್ಮ ಶತಮಾನೋತ್ಸವ

ಶ್ರೀ ರಂಭಾಪುರಿ ಪೀಠ (ಬಾಳೆಹೊನ್ನೂರು)- ಡಿ. 9 - ಶ್ರೀ ಜಗದ್ಗುರು ರಂಭಾಪುರಿ ವೀರ ಸಿಂಹಾಸನ ಮಹಾಸಂಸ್ಥಾನ ಪೀಠದ 120ನೇ ಜಗದ್ಗುರುಗಳಾಗಿ ಶ್ರೀ ಪೀಠವನ್ನು ಅಲಂಕರಿಸಿದ್ದ ಲಿಂ. ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರರುದ್ರಮುನಿ ದೇವ ಶಿವಾಚಾರ್ಯ ಭಗವತ್ಪಾದರ ಜನ್ಮಶತಮಾನೋತ್ಸವವನ್ನು ಇದೇ ದಿನಾಂಕ 15 ಭಾನುವಾರ ಬೆಳಿಗ್ಗೆ 11 ಗಂಟೆಗೆ ಆಚರಿಸಲಾಗುವುದು.

ಶ್ರೀ ಜಗದ್ಗುರು ರಂಭಾಪುರಿ ಪೀಠದ ಶ್ರೀ ರುದ್ರಮುನೀಶ್ವರ ಸಮುದಾಯ ಭವನದಲ್ಲಿ ಜರುಗುವ ಸಮಾರಂಭದ ಸಾನ್ನಿಧ್ಯವನ್ನು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹಾಗೂ ಶ್ರೀ ಕೇದಾರ ಭೀಮಾ ಶಂಕರಲಿಂಗ ಜಗದ್ಗುರುಗಳು ವಹಿಸುವರು. ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸುವರು.

‘ಧರ್ಮ ಚೇತನ’ ಕೃತಿಯನ್ನು ಮಾಜಿ ಸಂಸದ ಗೌಡ ಗಾಂವ ಹಿರೇಮಠದ ಡಾ.ಜಯಸಿದ್ಧೇಶ್ವರ ಶಿವಾಚಾರ್ಯರು, ‘ಬಾಳ ಹೊಂಗಿರಣ’ ಕೃತಿಯನ್ನು ಮುಕ್ತಿ ಮಂದಿರ ಕ್ಷೇತ್ರದ ವಿಮಲ ರೇಣುಕ ವೀರ ಮುಕ್ತಿಮುನಿ ಶಿವಾಚಾರ್ಯರು ಹಾಗೂ



‘ರಂಭಾಪುರಿ ಬೆಳಗು’ ವಿಶೇಷಾಂಕವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಬಿಡುಗಡೆಗೊಳಿಸುವರು.

### ರಂಭಾಪುರಿ ಪೀಠದಲ್ಲಿ 15 ರಂದು ಕಾರ್ಯಕ್ರಮ

ಸಿಯುಪಿಎ ಮತ್ತು ಪೀಇಟಿಎ ಇಂಡಿಯಾ ಇವರು ದಾನ ನೀಡಿದ ಯಾಂತ್ರಿಕ ಆನೆಯ ಸಮರ್ಪಣೆ ಈ ಸಂದರ್ಭದಲ್ಲಿ ನಡೆಯುತ್ತದೆ. ಈ ಯಾಂತ್ರಿಕ ಆನೆಯು ನಿಜವಾದ ಆನೆಗಳು ತಮ್ಮ ಕಾಡಿನ ಮನೆಗಳಲ್ಲಿ ಉಳಿಯಲು ಸಹಾಯ ಮಾಡುವ ಹಾಗೂ ಧಾರ್ಮಿಕ ವಿಧಿಗಳನ್ನು ಸಹಾನು ಭೂತಿಯಿಂದ ನಡೆಸುವ ಶ್ರೀ ಪೀಠದ ಬದ್ಧತೆಯನ್ನು ಗೌರವಿಸುತ್ತದೆ.

ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಡಿ. ರಾಜೇಗೌಡ, ಮಾಜಿ ಸಚಿವ ಡಿ.ಎನ್. ಜೀವರಾಜ್, ಬೆಂಗಳೂರಿನ ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾ ಸಂಸ್ಥೆಯ ಅಧ್ಯಕ್ಷ ಯು.ಎಂ. ಬಸವರಾಜ್ ಭಾಗವಹಿಸುವರು. ಅ.ಭಾ.ವೀ. ಶಿವಾಚಾರ್ಯ ಸಂಸ್ಥೆ ಗೌರವಾಧ್ಯಕ್ಷ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಶ್ರೀಗಳು ನೇತೃತ್ವ ವಹಿಸುವರು. ಬಂಕಾಪುರ ಅರಳೆಲೆ ಹಿರೇಮಠ ರೇವಣಸಿದ್ದೇಶ್ವರ ಶಿವಾಚಾರ್ಯ ಶ್ರೀಗಳು ನುಡಿನಮನ ಸಲ್ಲಿಸುವರು.

ಇದೇ ಸಂದರ್ಭದಲ್ಲಿ ಶ್ರೀ ಜಗದ್ಗುರು ರಂಭಾಪುರಿ ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್. ಬಾಳನಗೌಡ್ರ ಇವರಿಗೆ ಜನ್ಮ ಅಮೃತ ಮಹೋತ್ಸವ ನಿಮಿತ್ಯ ಗೌರವ ಗುರು ರಕ್ಷೆ ನಡೆಯಲಿದೆ.

ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು, ಶಿವಮೊಗ್ಗ ಶ್ರೀ ಜಗದ್ಗುರು ಪಂಚಾಚಾರ್ಯ ಐಟಿಐ ಸಂಸ್ಥಾಪಕ ವಿಘ್ನೇಶ್ವರಯ್ಯ ಸೋಲಾಪುರ-ಶ್ರೀಮತಿ ಇಂದಿರಾ, ಕೂಡ್ಲಿಗೆರೆಯ ಜಲಜಾಕ್ಷಮ್ಮ ಮತ್ತು ಮಕ್ಕಳು, ಸವಣೂರಿನ ಡಾ. ಗುರುಪಾದಯ್ಯ ವೀ. ಸಾಲಿಮಠ ಇವರಿಗೆ ವಿಶೇಷ ಗುರುರಕ್ಷೆಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಅನುಗ್ರಹಿಸುವರು.

## ಹೂ ರಾಶಿಯೊಂದಿಗೆ ಕಂಗೊಳಿಸಿದ ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನ



ಕೊಟ್ಟೂರು, ಡಿ.9- ಭಕ್ತರ ಆರಾಧ್ಯದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಹಿರೇಮಠವನ್ನು ಕಾರ್ತಿಕೋತ್ಸವದ ಮುನ್ನಾ ದಿನ ಸೋಮವಾರ ನಿಮಿತ್ತ್ಯ ಭಕ್ತರಾದ ಪಟ್ಟಣದ ಸಹೋದರ ಬಣಕಾರ ಕೊಟ್ರೇಶ ಮತ್ತು ಮೂಗಣ್ಣ ಅವರು ಇಡೀ ದೇವಸ್ಥಾನವನ್ನು ವಿವಿಧ ಬಗೆಯ ಹೂವಿನ ಮಾಲೆಗಳೊಂದಿಗೆ ಅಲಂಕರಿಸಿ ಭಕ್ತ ಸಮೂಹ ಆಕರ್ಷಿಸುವ ಮೂಲಕ ಶ್ರೀ ಸ್ವಾಮಿಗೆ ತಮ್ಮ ಸೇವೆ ಸಲ್ಲಿಸಿದರು.

ಕಳೆದ 8 ವರ್ಷಗಳಿಂದ ಪ್ರತಿ ಕಾರ್ತಿಕ ಮಾಸದಲ್ಲಿ ದೇವಸ್ಥಾನವನ್ನು ಹೂವುಗಳಿಂದ ಶೃಂಗರಿಸುವ ಸೇವೆಯನ್ನು ಮುಂದುವರೆಸಿಕೊಂಡು ಬಂದಿರುವ ಭಕ್ತ ಸಹೋದರರಾದ ಬಣಕಾರ ಕೊಟ್ರೇಶ ಮತ್ತು ಮೂಗಣ್ಣ ಈ ಬಾರಿ 9ನೇ ವರ್ಷದಲ್ಲೂ ಭರ್ಜರಿ ಹೂವುಗಳ ರಾಶಿಯೊಂದಿಗೆ ದೇವಸ್ಥಾನವನ್ನು ಶೃಂಗರಿಸುವ ಸೇವೆಗೈದರು.

ದೇವಸ್ಥಾನವನ್ನು ಹೂವುಗಳಿಂದ ಶೃಂಗರಿಸಲೆಂದೇ ಬೆಂಗಳೂರಿನಿಂದ ವಿಶೇಷವಾಗಿ 9 ವಿಧದ ಹೂಗಳಾದ ಬಿಡಿ ಸೇವಂತಿಗೆ, ಪೂರ್ಣಿಮಾ, ಕೆಂಪು, ಕಾವೇರಿ, ಕೆಂಪು ಕಾವೇರಿ, ಹಸಿರು ಸೇವಂತಿಗೆ, ಬಟನ್, ಕನಕಾಂಬರಿ, ಮಲ್ಲಿಗೆ, ಸೇವಂತಿಗೆ, ಚೆಂಡು ಹೂವುಗಳನ್ನು ಸುಮಾರು 1.50 ಲಕ್ಷ ವ್ಯಯಿಸಿದ್ದರು.

ಈ ಸೇವೆಯನ್ನು ಸಲ್ಲಿಸಲೆಂದೇ ಭಾನುವಾರ ಇಡೀ ರಾತ್ರಿ ದೇವಸ್ಥಾನದ ಬಳಿಯ ಯುವಕರು, ಭಕ್ತರು ಮತ್ತಿತರರೊಡಗೂಡಿ ಶೃಂಗರಿಸುವ ಕಾರ್ಯ ಕೈಗೊಂಡರು. ಸೋಮವಾರದ ಬೆಳಗಿನ ಜಾವ ಐದು ಗಂಟೆಯೊಳಗೆ ಹೂಗಳ ಅಲಂಕಾರದೊಂದಿಗೆ ಕೊಟ್ಟೂರೇಶ್ವರ ಸ್ವಾಮಿ ವಿಶೇಷವಾಗಿ ಕಂಗೊಳಿಸುತ್ತಿತ್ತು.

## ಕಬ್ಬಿಗೆ 5500 ರೂ.ಬೆಂಬಲ ಬೆಲೆಗೆ ಆಗ್ರಹಿಸಿ ಸುವರ್ಣ ಸೌಧ ಚಲೋ

ದಾವಣಗೆರೆ, ಡಿ.9- ಕಬ್ಬಿಗೆ 5500 ರೂ. ಬೆಂಬಲ ಬೆಲೆ ನಿಗದಿ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಾಡಿದ್ದು ದಿನಾಂಕ 12 ರಂದು ಬೆಳಿಗ್ಗೆ 11 ಗಂಟೆಗೆ ಬೆಳಗಾವಿಯ ಸುವರ್ಣ ಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಎಲ್ ಭರತ್ ರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಶೇ. 9.50 ಸಕ್ಕರೆ ಇಳುವರಿ ಆಧಾರದಲ್ಲಿ ಟನ್ ಕಬ್ಬಿಗೆ 5500 ರೂ. ಬೆಂಬಲ ಬೆಲೆ ನಿಗದಿ ಮಾಡಬೇಕು. ಕರ್ನಾಟಕ ಕಬ್ಬು ಖರೀದಿ ಮತ್ತು ಸರಬ ರಾಜು ಅಧಿನಿಯಮ 2013 ರ ಕಾಯ್ದೆ ರದ್ದುಪಡಿಸಿ ಹಿಂದಿನ ಎಸ್‌ಎಪಿ ನಿಗದಿಪಡಿಸಬೇಕು. ರೈತ ವಿರೋಧಿ ಕಬ್ಬು ನಿಯಂತ್ರಣ ತಿದ್ದುಪಡಿ ಕರಡು ಆದೇಶ 2024 ರ ಮಸೂದೆಯನ್ನು ಕೇಂದ್ರ ಸರ್ಕಾರ ವಾಪಾಸ್ ಪಡೆಯಬೇಕೆಂದರು.

ರಾಜ್ಯ ಸರ್ಕಾರ 2022-23 ನೇ ಸಾಲಿಗೆ ಪ್ರತಿ ಟನ್ ಗೆ 150 ರೂ.ಗಳ ಎಸ್‌ಎಪಿ ನೀಡಲು ಆದೇಶಿಸಿದ್ದು, ಅದರ ಬಾಕಿ ಹಣವನ್ನು ರೈತರಿಗೆ ಶೀಘ್ರವಾಗಿ ನೀಡಬೇಕು. ಹರಿಯಾಣ, ಪಂಜಾಬ್ ಮಾದರಿಯಲ್ಲಿ ಎಫ್‌ಆರ್‌ಪಿ ಜೊತೆಗೆ ರಾಜ್ಯ ಸರ್ಕಾರ ಪ್ರತಿ ಟನ್ ಗೆ 900 ರೂ. ಎಸ್‌ಎಪಿ ನಿಗದಿಪಡಿಸಿದೆ. ಅದೇ ರೀತಿ ನಮ್ಮ ಸರ್ಕಾರವು ಕನಿಷ್ಠ 500 ರೂ. ಎಸ್‌ಎಪಿ ನಿಗದಿಪಡಿಸಬೇಕು. ಕಟಾವು ಮತ್ತು ಸಾಗಾಣಿಕ ವೆಚ್ಚವನ್ನು ನಿಯಮಕ್ಕೆ ವಿರುದ್ಧವಾಗಿ ಹೆಚ್ಚುವರಿ ಪಡೆದಿರುವ ಬಾಗಲಕೋಟೆ, ಹಳಿಯಾಳ, ರಾಮದುರ್ಗದ ಇಇಡಿ ಪ್ಯಾರಿ ಶುಗರ್ ಮತ್ತು ಅಫಜಲಪುರದ ರೇಣುಕಾ ಶುಗರ್, ಕೆಪಿಆರ್ ಶುಗರ್ ಕಾರ್ಖಾನೆಗಳಿಂದ ರೈತರಿಗೆ ಹಣವನ್ನು ವಾಪಾಸ್ ಕೊಡಿಸಬೇಕು ಮತ್ತು ಅವುಗಳ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಬೇಕು. ಇತರೆ ಕಾರ್ಖಾನೆಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದರು.

ಕಬ್ಬು ಬೆಳೆದ 12 ತಿಂಗಳಿಗೆ ಕಟಾವು ಮಾಡಬೇಕು. ಹೆಚ್ಚುವರಿ ತಿಂಗಳುಗಳಾಗಿ ರೈತರಿಗಾಗುವ ನಷ್ಟವನ್ನು ಕಬ್ಬು ನಿಯಂತ್ರಣ ಆದೇಶ 1966 ಹಾಗೂ 5 ಎ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಬೇಕು. ಈ ಕಾಯ್ದೆಯ ಅನುಸಾರ ಕಬ್ಬು ಬೆಳೆಗಾರರ ಹಕ್ಕುಗಳ ರಕ್ಷಣೆಗೆ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಆಯುಕ್ತರು, ಜಿಲ್ಲಾಧಿಕಾರಿಗಳು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು. ಕಳೆದ ಹತ್ತು ವರ್ಷಗಳಿಂದ ಸಕ್ಕರೆ ಕಾರ್ಖಾನೆಗಳು ಗಳಿಸಿರುವ ಲಾಭದಲ್ಲಿ ಆಧಾಯದ ಪಾಲಿನ ಪ್ರಕಾರ ರೈತರಿಗೆ ಬಾಕು ಹಣ ನೀಡಬೇಕೆಂದು ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಈ. ಶ್ರೀನಿವಾಸ್, ಆನಂದರಾಜ್, ಭರಮಪ್ಪ ಉಪಸ್ಥಿತರಿದ್ದರು.

# ಡಿ.ಉಮಾಪತಿಗೆ ‘ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ’

ಬೆಂಗಳೂರು, ಡಿ.9- ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಸಕ್ತ ವರ್ಷದಿಂದ ಪ್ರಾರಂಭಿಸಿರುವ ‘ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ’ ಪ್ರಶಸ್ತಿಗೆ ಹಿರಿಯ ಪತ್ರಕರ್ತ ಡಿ. ಉಮಾಪತಿ ಅವರನ್ನು ಆಯ್ಕೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಪತ್ರಿಕೋದ್ಯಮದಲ್ಲಿ ಸಾಮಾಜಿಕ ನ್ಯಾಯ ಕುರಿತು ವರದಿ, ವಿಶೇಷ ಲೇಖನಗಳನ್ನು ಗುರುತಿಸಿ, ಗೌರವಿಸುವ ಉದ್ದೇಶದಿಂದ ಮುಖ್ಯಮಂತ್ರಿಯವರು 2024 ರ ಆಯವ್ಯಯದಲ್ಲಿ ಹಿರಿಯ ಪತ್ರಕರ್ತ ‘ವಡ್ಡರ್ಸೆ ರಘುರಾಮಶೆಟ್ಟಿ’ ಅವರ ಹೆಸರಿನಲ್ಲಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ ಘೋಷಿಸಿದ್ದರು. ನ್ಯಾ.ಅಶೋಕ ಹಿಂಚಿಗೇರಿ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಪ್ರಶಸ್ತಿ ಆಯ್ಕೆ ಸಮಿತಿಯು ಒಮ್ಮತದಿಂದ ಹಿರಿಯ ಪತ್ರಕರ್ತ ಡಿ. ಉಮಾಪತಿಯವರನ್ನು ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿಗೆ ಆಯ್ಕೆ ಮಾಡಿತ್ತು. ಪ್ರಶಸ್ತಿಯು 2 ಲಕ್ಷ ರೂ. ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

**ಪರಿಚಯ:** ಮಾರ್ಚ್ 18, 1959 ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಜನಿಸಿದ ಡಿ. ಉಮಾಪತಿ ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಬಿ.ಎ., ಮೈಸೂರು ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನು ಎರಡನೇ ರ್‍ಯಾಂಕ್ ಪಡೆದವರು.

ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಸಮೂಹ ಸಂಸ್ಥೆಯ ಕನ್ನಡಪ್ರಭ, ಈ ಟಿವಿಯ ದೆಹಲಿ ಕರೆಸ್ಪಾಂಡೆಂಟ್ ಆಗಿ 27 ವರ್ಷಗಳ ಪರಿಣಾಮಕಾರಿ ವರದಿಗಳಿಂದ ಹೆಸರು ಗಳಿಸಿದವರು.

ಪಾರ್ಲಿಮೆಂಟ್ ವರದಿ, ಚುನಾವಣಾ ವಿಶ್ಲೇಷಣೆಗಳು, ಸುಪ್ರೀಂ ಕೋರ್ಟ್ ನ್ಯಾಯಾಧೀಕರಣ ವ್ಯಾಜ್ಯಗಳು, ರಾಷ್ಟ್ರಮಟ್ಟದ ರಾಜಕೀಯ ಬೆಳವಣಿಗೆಗಳು ಮತ್ತು ವಿದೇಶಾಂಗ ಸಚಿವರ ವಿದೇಶ ಪ್ರವಾಸದ ಜೊತೆಗೂಡಿ ರಾಜತಾಂತ್ರಿಕ ವರದಿಗಾರಿಕೆಯಲ್ಲಿ ವಿಶಿಷ್ಟ ಅನುಭವ ಇವರದ್ದಾಗಿದೆ.

ದೆಹಲಿಯಲ್ಲಿ ನೆಲೆಸಿರುವ ಡಿ. ಉಮಾಪತಿ ಅವರು ಆಂದೋಲನ, ರೈತ ಚಳವಳಿ, ವಿಜಯಕರ್ನಾಟಕ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ವಾರ್ತಾಭಾರತಿ ಪತ್ರಿಕೆಗಳಿಗೆ ಅಂಕಣ ಬರಹಗಾರರಾಗಿಯೂ. ಪ್ರಸ್ತುತ ‘ನ್ಯಾಯಪಥ (ಗೌರಿ ಮೀಡಿಯಾ)’ ಮತ್ತು ‘ಈದಿನ’ ವೆಬ್ ಜರ್ನಲ್ ಸಂದರ್ಶಕ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

‘ದೆಹಲಿ ನೋಟ’ , ‘ಪದಕುಸಿಯೇ ನೆಲವಿಲ್ಲ’ ಉಮಾಪತಿ ಅವರ ಎರಡು ಮಹತ್ವದ ಕೃತಿಗಳು ಪ್ರಕಟವಾಗಿವೆ.

## ರಾಜ್ಯ ಕರಾಟೆ ಸ್ಪರ್ಧೆ : ಸಿದ್ದಗಂಗಾ ಶಾಲಾ ಮಕ್ಕಳಿಂದ ಉತ್ತಮ ಸಾಧನೆ



ದಾವಣಗೆರೆ, ಡಿ.9- ನಗರದ ಶಿವಯೋಗ ಮಂದಿರದ ಸಭಾಂಗಣದಲ್ಲಿ ಈಚೆಗೆ ನಡೆದ 3ನೇ ರಾಜ್ಯ ಮಟ್ಟದ ಓಪನ್ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಸಿದ್ದಗಂಗಾ ಶಾಲಾ ಮಕ್ಕಳು ಉತ್ತಮ ಸಾಧನೆ ಮಾಡಿದ್ದಾರೆ.

ಕಟಾ ವಿಭಾಗದಲ್ಲಿ ಎಸ್.ಎಸ್. ಆದಿತ್ಯ ಮತ್ತು ಲಾವಣ್ಯ ಪ್ರಥಮ ಸ್ಥಾನ ಪಡೆದರೆ, ಎಂ.ಕೆ. ಸಮರ್ಥರಾಜ್, ಡಿ.ಸಿ. ಗುರುದತ್ತ, ವಿಠಲ್, ಡಿ.ಎಸ್. ಜೀವಾಕ್ಷರಿ, ಎಸ್. ಶ್ರಾವಂತ್, ಬಿ.ವಿ. ಸಂಜೀವ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಎನ್. ಖುಷಿ, ಹೆಚ್. ಸಿದ್ದೇಶ್, ಎ.ಬಿ. ನರೇಂದ್ರ, ಎಸ್.ಎನ್. ತನ್ಮಯಾನಂದ ಮತ್ತು ಪ್ರಜ್ವಲ್ ತೃತೀಯ ಸ್ಥಾನ ಪಡೆದಿದ್ದಾರೆ.

## ನಗರದಲ್ಲಿ ಇಂದು ಕೆಎಎಸ್ ಪರೀಕ್ಷಾ ಪೂರ್ವ ತರಬೇತಿ

ಜಿಲ್ಲಾ ಉದ್ಯೋಗ ವಿನಿ ಮಯ ಕೇಂದ್ರದ ವತಿಯಿಂದ ರಾಮನಗರದ ಗಾಂಧಿ ಭವನ, ಡಿ.ಹೆಚ್.ಓ ಕಚೇರಿ ಪಕ್ಕ ಹಾಗೂ ಎಸ್.ಓ.ಜಿ ಕಾಲೋನಿಯಲ್ಲಿ ಇಂದಿನಿಂದ ಇದೇ ದಿನಾಂಕ 19ರ ವರೆಗೆ ಕೆ.ಎ.ಎಸ್ ಪರೀಕ್ಷೆಯ ಉಚಿತ ಪರೀಕ್ಷಾ ಪೂರ್ವ ತರಬೇತಿ ನಡೆಯಲಿದೆ.

ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆ.ಎ.ಎಸ್. ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಪರೀಕ್ಷಾರ್ಥಿಗಳು ವಿವರಕ್ಕೆ ಸಂಪರ್ಕಿಸಿ : 7406323294.

# ರಕ್ತದಾನ ಅನಿವಾರ್ಯತೆ ಇರುವವರ ಪ್ರಾಣ ರಕ್ಷಣೆಗೆ ಸಹಕಾರಿ

## ರಕ್ತದಾನ ಶಿಬಿರ ಉದ್ಘಾಟನಾ ಸಮಾರಂಭದಲ್ಲಿ ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ್

ದಾವಣಗೆರೆ, ಡಿ. 9- ರಕ್ತದಾನ ಶ್ರೇಷ್ಠವಾದದ್ದು, ಆರೋಗ್ಯವಂತ ವಿದ್ಯಾರ್ಥಿಗಳು ಕನಿಷ್ಠ ವರ್ಷಕ್ಕೆ ಎರಡು ಬಾರಿ ರಕ್ತದಾನ ಮಾಡುವುದು ಉತ್ತಮ, ಇದರಿಂದ ರಕ್ತದ ಅನಿವಾರ್ಯತೆ ಇರುವವರ ಪ್ರಾಣ ರಕ್ಷಣೆಗೆ ಸಹಕಾರಿಯಾಗಲಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಸಲಹೆ ನೀಡಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿಶ್ವ ವಿದ್ಯಾನಿಲಯದ ಎನ್‌ಎಸ್‌ಎಸ್ ಘಟಕ, ವಿದ್ಯಾ ನಗರ ರೋಟರಿ ಕ್ಲಬ್, ಹೆಚ್‌ಡಿಎಫ್‌ಸಿ ಬ್ಯಾಂಕ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಗಟೇರಿ ಆಸ್ಪತ್ರೆ ರಕ್ತ ಭಂಡಾರದ ಸಹಯೋಗದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ರಕ್ತ ಬಡವರು, ಗರ್ಭಿಣಿಯರು ಹಾಗೂ ತುರ್ತು ಪರಿಸ್ಥಿತಿಯಲ್ಲಿರುವವರಿಗೆ ಬಳಕೆಯಾಗಬೇಕು. ರಕ್ತದಾನದ ಕುರಿತು ವಿದ್ಯಾರ್ಥಿಗಳಲ್ಲಿ ಅಡಗಿರುವ ಭಯವನ್ನು ದೂರ ಮಾಡಿ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸುವುದು



ಕಾರ್ಯಕ್ರಮದ ಉದ್ದೇಶವಾಗಿದೆ. ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯ, ಜನಪರ ಕಾಳಜಿ ಮತ್ತು ಆರೋಗ್ಯದ ಬಗ್ಗೆ ಪ್ರಾಯೋಗಿಕವಾಗಿ ತಿಳಿವಳಿಕೆ ನೀಡುವುದು ರಕ್ತದಾನದ ಆಶಯವಾಗಿದೆ ಎಂದು ಹೇಳಿದರು.

ರಕ್ತದಾನದ ಹೆಸರಿನಲ್ಲಿ ಕೆಲವು ಖಾಸಗಿ ಸಂಸ್ಥೆಗಳು ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ರಕ್ತವನ್ನು ಮಾರಾಟ ಮಾಡುತ್ತಿದ್ದ ಆರೋಪಗಳು ಕೇಳಿ ಬಂದಿದ್ದವು ಆದ್ದರಿಂದ ಅಂತಹ ಸಂಸ್ಥೆಗಳಿಗೆ ಅವಕಾಶ ನೀಡದೆ ಆರೋಗ್ಯ ಇಲಾಖೆ, ರೋಟರಿಯಂತಹ ಸಂಸ್ಥೆಗಳ ಸಹಯೋಗದಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗುತ್ತಿದೆ, ಇಲ್ಲಿ ಸಂಗ್ರಹಿಸಿದ ರಕ್ತವನ್ನು ಬಡವರು, ದುರ್ಬಲರಿಗೆ ಚಿಗಟೇರಿ ಆಸ್ಪತ್ರೆಯ ಮೂಲಕ ವಿತರಿಸುವ ವ್ಯವಸ್ಥೆ ಮಾಡಲಾಗಿದೆ ಎಂದರು.

ಚಿಗಟೇರಿ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಅಧಿಕಾರಿ ಡಾ.ಗೀತಾ.ಡಿ.ಹೆಚ್ ಮಾತನಾಡಿ, ಪುರುಷರು ಮೂರು ತಿಂಗಳಿಗೊಮ್ಮೆ, ಮಹಿಳೆಯರು ನಾಲ್ಕು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ. ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ಮೂವರ ಪ್ರಾಣ ರಕ್ಷಣೆ ಮಾಡಬಹುದಾಗಿದೆ ಎಂದು ಮಾಹಿತಿ ನೀಡಿದರು.

ರಕ್ತದಾನ ಮಾಡುವವರಿಗೆ ದೇಹದಲ್ಲಿ ಹಳೆ ರಕ್ತ ಹೋಗಿ ಹೊಸ ರಕ್ತ ಉತ್ಪತ್ತಿಯಾಗುವುದರಿಂದ ಹೃದಯ ಸಂಬಂಧಿ ಕಾಯಿಲೆಗಳು, ಮಧುಮೇಹ, ರಕ್ತದೊತ್ತಡ ಹಾಗೂ ಪಾರ್ಶ್ವವಾಯುವಿನಂತಹ ಕಾಯಿಲೆಗಳಿಂದ ಮುಕ್ತರಾಗಬಹುದು ಎಂದು ಮಾಹಿತಿ ನೀಡಿದರು.


ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್. ಷಣ್ಮುಖಪ್ಪ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ.ರಾಘವನ್, ರೋಟರಿ ಕ್ಲಬ್ ಅಧ್ಯಕ್ಷ ಎಸ್.ಎನ್.ಮಳವಳ್ಳಿ ಮಾತನಾಡಿದರು. ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಅಶೋಕ್‌ಕುಮಾರ್ ವೀ. ಪಾಳೇದ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಸಿದ್ದಪ್ಪ ಕಕ್ಕಳಮೇಲಿ ಕಾರ್ಯಕ್ರಮ ನಿರೂಪಿಸಿದರು, ಹೆಚ್‌ಡಿಎಫ್‌ಸಿ ಬ್ಯಾಂಕ್ ಅಧಿಕಾರಿ ಪ್ರಕಾಶ್ ಗುಡಿಯಾರ ವಂದಿಸಿದರು.

# ಇಂದು ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪನವರ 122ನೇ ಜನ್ಮದಿನೋತ್ಸವ

ಕರ್ನಾಟಕ ಏಕೀಕರಣದ ರೂವಾರಿ, ರಾಷ್ಟ್ರ ಕಂಡ ಅಪರೂಪದ ರಾಜಕೀಯ ಮುತ್ಸದ್ದಿ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಮತ್ತು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ದಿ. ಎಸ್. ನಿಜಲಿಂಗಪ್ಪನವರ 122ನೇ ಜನ್ಮ ದಿನಾಚರಣೆಯು ಇಂದು ಆಗಿದ್ದು, ಅವರ ಸಾಧನೆ, ಬೆಳೆದು ಬಂದ ರೀತಿ, ದಿಟ್ಟ ಸಾಮಾಜಿಕ, ರಾಜಕೀಯ ನಿಲುವು ಮತ್ತು ನೈತಿಕ ಮೌಲ್ಯಗಳ ಪುನರಾವಲೋಕನ ಮಾಡಬೇಕಾದ ಅಗತ್ಯತೆಯ ಕಾಲಘಟ್ಟದಲ್ಲಿ ನಾವಿದ್ದೇವೆ.

ಅವರೊಬ್ಬ ಧೀಮಂತ ನ್ಯಾಯವಾದಿಗಳೂ, ಅದ್ವಿತೀಯ ಸ್ವಾತಂತ್ರ್ಯ ಹೋರಾಟಗಾರರೂ, ಪರಮ ಶ್ರೇಷ್ಠ ರಾಜಕಾರಣಿಯೂ, ಮುನ್ನೋಟದ ಮುತ್ಸದ್ಧಿಗಳೂ, ಸ್ಮರಣೀಯ ರಾಷ್ಟ್ರ ನಾಯಕರೂ, ಉದಾತ್ತ ಲೋಕ ಸೇವಕರೂ, ಕರ್ನಾಟಕ ರಾಜ್ಯದ ಅತ್ಯಂತ ಪ್ರಾಮಾಣಿಕ ಮತ್ತು ದಕ್ಷ ಮುಖ್ಯಮಂತ್ರಿಗಳೂ ಹಾಗೂ ಮಹಾ ಮಾನವತಾವಾದಿಯೂ ಆಗಿದ್ದವರು. ಇಂದು ಸ್ಥಳಿಯ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ಹಬ್ಬಿರುವ ಸಮಾಜೋ ರಾಜಕೀಯ ಮಾಲಿನ್ಯದ ಸಂದರ್ಭದಲ್ಲಿ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರ ಆದರ್ಶ, ಪ್ರಜಾಪ್ರಭುತ್ವದ ಬಗ್ಗೆ ಅವರ ಆಶಾವಾದಿತ್ವ ಮತ್ತು ಕಳಕಳಿ ನಿಜಕ್ಕೂ ಎಲ್ಲರಿಗೂ ಮಾದರಿಯೇ ಸರಿ.

ಎಸ್. ನಿಜಲಿಂಗಪ್ಪನವರು, ಈ ಹಿಂದಿನ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಹಲವಾಗಲು ಎಂಬ ಪುಟ್ಟ ಹಳ್ಳಿಯಲ್ಲಿ ಒಂದು ಸಾಮಾನ್ಯ ಕೃಷಿಕ ಕುಟುಂಬದ ಅಬ್ಬಲೂರು ಅಡವಪ್ಪ ಮತ್ತು ಶ್ರೀಮತಿ ನೀಲಮ್ಮ ದಂಪತಿಯ ಮಗನಾಗಿ, ದಿನಾಂಕ 10/12/1902 ರಲ್ಲಿ ಜನಿಸಿದರು. ಬಾಲ್ಯ ಜೀವನದಲ್ಲಿಯೇ ಅವರು ತಮ್ಮ ತಂದೆಯನ್ನು ಕಳೆದುಕೊಂಡರಲ್ಲದೇ, ಕಡು ಬಡತನದ ಬೇಗೆಯನ್ನೂ ಅನುಭವಿಸಿದರು. ತಾಯಿಯ ಕಡೆಯ ಸಂಬಂಧಿಕರ ನೆರವಿನಿಂದ ಅವರು ಚಿತ್ರದುರ್ಗಕ್ಕೆ ಬರುವ ಅವಕಾಶ ಒದಗಿಬಂತು. ಚಿತ್ರದುರ್ಗ ಜಿಲ್ಲೆಯಲ್ಲಿ ಅವರು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಪೂರೈಸಿದರು. ತದನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜ್‌ನಲ್ಲಿ ಶಿಕ್ಷಣ ಪಡೆದರಲ್ಲದೆ ನಂತರ ಕಾನೂನು ಪದವಿಯನ್ನು ಪೂನಾದಲ್ಲಿ ಪಡೆದು ನ್ಯಾಯವಾದಿ ವೃತ್ತಿಯನ್ನು ಚಿತ್ರದುರ್ಗದಲ್ಲಿ ಕೈಗೊಂಡರು. ಚಿತ್ರದುರ್ಗದ ಹೆಸರಾಂತ ವಕೀಲರಾಗಿ ಜನಪ್ರಿಯರಾಗಿ ದೊಡ್ಡ ಹೆಸರು ಮಾಡಿದರು. ಅವರನ್ನು ಪ್ರೀತಿ ಮತ್ತು ಅಭಿಮಾನದಿಂದ 'ಎಸ್ಸೆನ್' ಎಂದು ಸಂಬೋಧಿಸಲಾಗುತ್ತಿತ್ತು.



ತಾರುಣ್ಯದಲ್ಲಿಯೇ ಎಸ್. ನಿಜಲಿಂಗಪ್ಪನವರಿಗೆ ಸಮಾಜ ಸೇವೆ, ದೇಶಸೇವೆ ಮಾಡುವ ಮನೋಭಾವ ಇದ್ದಕಾರಣ ರಾಜಕೀಯ ಕ್ಷೇತ್ರ ಅವರನ್ನು ಕೈಬೀಸಿ ಕರೆಯಿತು. ಮಹಾತ್ಮ ಗಾಂಧೀಜಿ, ಅನ್ನಿಬೆಸೆಂಟ್, ಬಾಲಗಂಗಾಧರ ತಿಲಕರ ಸ್ವಾತಂತ್ರ್ಯ ಹೋರಾಟ ಅವರ ಮೇಲೆ ಪ್ರಭಾವ ಬೀರಿತು. 1924ರಲ್ಲಿ ಬೆಳಗಾವಿಯಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಎಸ್. ನಿಜಲಿಂಗಪ್ಪ ಸ್ವಯಂ ಸೇವಕರಾಗಿ ಪಾಲ್ಗೊಂಡರು.

1936 ರಲ್ಲಿ ಮೈಸೂರು ಪ್ರಾಂತ್ಯದ ಕಾಂಗ್ರೆಸ್‌ನ ಸ್ಥಾಪಿತ ಸದಸ್ಯರಾಗಿ ಆಯ್ಕೆಯಾದರು. 1938ರಲ್ಲಿ ಎಸ್. ನಿಜಲಿಂಗಪ್ಪನವರು ತುರುವನೂರಿನ 'ಈಚಲು ವನ' ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡರಲ್ಲದೇ, ಅದರ ನೇತೃತ್ವ ವಹಿಸಿಕೊಂಡರು. ಪರಿಣಾಮವಾಗಿ ಒಂದೂವರೆ ವರ್ಷ ಕಾರಾಗೃಹ ವಾಸದ ಶಿಕ್ಷೆಗೆ ಒಳಗಾಗಿ, ತಮ್ಮ ವಕೀಲ ಸನ್ನದನ್ನೂ ಕಳೆದುಕೊಳ್ಳಬೇಕಾಯಿತು. 1942 ರ 'ಬ್ರಿಟಿಷರೇ, ಭಾರತ ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ತೊಡಗಿಸಿಕೊಂಡು ವಸಾಹತು ಪ್ರಭುತ್ವದ ವಿರುದ್ಧ ಉಗ್ರ ಪ್ರತಿಭಟನೆ ಮಾಡಿದರು. ಮೈಸೂರು ಸಂಸ್ಥಾನದ ಜವಾಬ್ದಾರಿ ಸರ್ಕಾರ ರಚನೆಯ ಹೋರಾಟದಲ್ಲಿಯೂ ಭಾಗಿಯಾಗಿ ಶಿಕ್ಷೆ ಅನುಭವಿಸಿದರು. ಇವರು 1946 ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಗೊಂಡರು. 1948ರಲ್ಲಿ ಸಂವಿಧಾನ ರಚನಾ ಸಮಿತಿ ಸದಸ್ಯರಾಗಿ ರಾಷ್ಟ್ರದ ಪ್ರಮುಖ ಮಹಾನ್ ನಾಯಕರೊಂದಿಗೆ ಆತ್ಮೀಯತೆ ಬೆಳೆಸಿಕೊಂಡರು. 1952ರಲ್ಲಿ ಚಿತ್ರದುರ್ಗ ಜಿಲ್ಲೆಯ ಲೋಕಸಭಾ ಸದಸ್ಯರಾಗಿ, 1968ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ ನಿಜಲಿಂಗಪ್ಪನವರಿಗೆ ದೊರೆಯಿತು.

ಅವರು ಕರ್ನಾಟಕ ಏಕೀಕರಣ ಚಳವಳಿಯ ರೂವಾರಿಗಳಾಗಿ ಇತಿಹಾಸದಲ್ಲಿ ಚರಿತ್ರಾರ್ಹರಾಗಿದ್ದಾರೆ. ಕರ್ನಾಟಕ ಪ್ರಾಂತ್ಯ ರಚನೆಯಾದ ನಂತರ ನಿಜಲಿಂಗಪ್ಪನವರು ಏಕೀಕೃತ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾಗಿ ಆಡಳಿತ ಚುಕ್ಕಾಣಿ ಹಿಡಿದು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನಾಂದಿ ಹಾಡಿದರು. ಎಸ್ಸೆನ್ 1957ರಲ್ಲಿ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಂದಾಗ ಆಗ ಮೊಳಕಾಲ್ಮೂರು ಪುರಸಭೆಯ ಅಧ್ಯಕ್ಷರಾಗಿದ್ದ ಅನ್ನದಾನಿ ಆರ್. ವೀರಭದ್ರಪ್ಪ ಅವರ ಕಟ್ಟಾ ಬೆಂಬಲಿಗರಾಗಿದ್ದರು. ಚುನಾವಣೆ ನಡೆದು ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು 1957ರಲ್ಲಿ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡರು. ತದನಂತರ ಅವರು ಶಿಗ್ಗಾಂವಿ ಹಾಗೂ ಬಾಗಲಕೋಟೆಯಲ್ಲಿ ಚುನಾವಣೆಗೆ ನಿಂತು ಶಾಸಕರಾಗಿ ಆಯ್ಕೆಯಾದದ್ದು ಇತಿಹಾಸ.

ತಾಯಿ ನೀಲಮ್ಮ ಮತ್ತು ಪತ್ನಿ ಮುರಿಗೆಮ್ಮನವರು ತಮ್ಮ ಬದುಕಿನ ಕಣ್ಣುಗಳು ಹಾಗೂ ತಮ್ಮೆಲ್ಲಾ ಸಾಧನೆಯ ಹಿಂದಿನ ಪ್ರೇರಕ ಶಕ್ತಿಗಳು ಎಂದು ಎಸ್ಸೆನ್ ಸದಾ ಸ್ಮರಿಸಿಕೊಳ್ಳುತ್ತಿದ್ದರು. ಬಸವಣ್ಣನವರ 'ಕಾಯಕವೇ ಕೈಲಾಸ' ಸಿದ್ಧಾಂತದಲ್ಲಿ ನಂಬಿಕೆ ಇಟ್ಟವರಾಗಿದ್ದರು. ರಾಜ್ಯ ನಿರ್ದೇಶಕ ತತ್ವಗಳಲ್ಲಿ ನಂಬಿಕೆ ಮತ್ತು ಅದರ ಅನುಷ್ಠಾನದಲ್ಲಿ ಹೆಚ್ಚಿನ ಮುತುವರ್ಜಿ; ಮಹಾತ್ಮ ಗಾಂಧಿಯವರ ಅಹಿಂಸಾ ತತ್ವ, ಸರ್ವೋದಯ ಪರಿಕಲ್ಪನೆಯಲ್ಲಿ ಎಸ್ಸೆನ್‌ಗೆ ಅಪಾರ ವಿಶ್ವಾಸ. ಜೀವನದುದ್ದಕ್ಕೂ ಗಾಂಧಿವಾದಿಯಾಗಿಯೇ ಬದುಕಿದವರು. ಅವರಲ್ಲಿ ಮೂಢನಂಬಿಕೆಗೆ ಆಸ್ಪದವಿರಲಿಲ್ಲ. ವಿಚಾರವಾದಿ, ನಿಷ್ಠೂರವಾದಿ, ನ್ಯಾಯವಾದಿ, ಮಹಾಮಾನವತಾವಾದಿಯಾಗಿದ್ದ ಎಸ್ಸೆನ್ ಪ್ರಧಾನಮಂತ್ರಿ ಪಂಡಿತ್ ಜವಹರಲಾಲ್ ನೆಹರು ಅಭಿಮಾನಿಯಾಗಿದ್ದರೂ ಅವರನ್ನು ಟೀಕಿಸದೆ ಬಿಟ್ಟವರಲ್ಲ.

1969ರಲ್ಲಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರೊಂದಿನ ಸೈದ್ಧಾಂತಿಕ ಸಂಘರ್ಷ, ತದನಂತರದ ರಾಜಕೀಯ ಬೆಳವಣಿಗೆಯಲ್ಲಿ ಸಂಸ್ಥಾ ಕಾಂಗ್ರೆಸ್ ಸ್ಥಾಪಕ ಸದಸ್ಯರಾಗಿದ್ದು ಚಾರಿತ್ರ್ಯಿಕ.

ಸದಾ ಅಧ್ಯಯನಶೀಲತೆ, ತತ್ವಾಧಾರಿತ ರಾಜಕಾರಣ, ನೈತಿಕ ಮೌಲ್ಯ ಸಂವರ್ಧನೆಯಲ್ಲಿ ವಿಶ್ವಾಸ, ಅಭಿವೃದ್ಧಿ ಕಾರ್ಯಗಳಲ್ಲಿ ಆಸಕ್ತಿ, ಕೃಷಿ ಹಾಗೂ ಕೃಷಿಕರ ಹಿತ ಚಿಂತನೆ, ಸಮಾಜ ಕಲ್ಯಾಣ ಕಾರ್ಯಗಳಲ್ಲಿ ಹೆಚ್ಚಿನ ಉತ್ಸುಕತೆ, ಲೋಕೋಪಯೋಗಿ ಕಾರ್ಯಗಳಲ್ಲಿ ಅಪಾರ ಉತ್ಸಾಹ, ಜನೋಪಯೋಗಿ ಕಾರ್ಯಗಳಲ್ಲಿ ಭಾಗಿಯಾಗುವುದರಲ್ಲಿ ಸದಾ ಉಲ್ಲಾಸ ಹೀಗೆ ನಿಜಲಿಂಗಪ್ಪನವರ ಹಲವು ಹತ್ತು ಸಮಾಜಮುಖಿ ಹಾಗೂ ಸೃಜನಶೀಲ ಕಾರ್ಯವೈಖರಿ. ಎರಡು ಬಾರಿ ರಾಷ್ಟ್ರಾಧ್ಯಕ್ಷರಾಗಲು ಕರೆ ಬಂದರೂ ವಿನಯವಾಗಿಯೇ ನಿರಾಕರಿಸಿದವರು; ಅಧಿಕಾರದ ವಿಷಯದಲ್ಲಿ ನಿರ್ಮೋಹಿ. ಎಸ್.ಆರ್. ಬೊಮ್ಮಾಯಿ ಮತ್ತು ರಾಮಕೃಷ್ಣ ಹೆಗ್ಡೆಯವರು ಬೆಂಗಳೂರಿನಲ್ಲಿ ವಾಸಕ್ಕೆ ಮನೆ ನೀಡಲು ಬಯಸಿದರೂ ಅದನ್ನು ಒಲ್ಲೆ ಎಂದವರು. ಎಸ್ಸೆನ್ ಸರಳ, ಸಜ್ಜನ, ಸದ್ಗುಣಶೀಲ, ಸದಾಚಾರದ, ಪ್ರಾಮಾಣಿಕ ಮತ್ತು ಆದರ್ಶ ರಾಜಕಾರಣಿ.

ಸರ್ದಾರ್ ವಲ್ಲಭಾಯ್ ಪಟೇಲ್ ಟ್ರಸ್ಟ್‌ನ ಮುಖ್ಯ ಸದಸ್ಯರಾಗಿಯೂ ಕಾರ್ಯ ನಿರ್ವಹಣೆ ಮಾಡಿದವರು. ಭ್ರಷ್ಟಾಚಾರ ಸಹಿಸದ ಅನನ್ಯ ಆದರ್ಶ ರಾಜಕೀಯ ಮಾಡಿದವರು. ಇಂದಿನ ಹಲವು ರಾಜಕೀಯ ವ್ಯವಸ್ಥೆ, ರಾಜಕೀಯ ವ್ಯಕ್ತಿಗಳ ಬಗ್ಗೆ ಹಾಗೂ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆ ಕುಸಿದಿರುವುದರ ಬಗ್ಗೆ ಚಿಂತಾಕ್ರಾಂತರಾಗುತ್ತಿದ್ದರಲ್ಲದೆ ಸಿಡಿಮಿಡಿಗೊಳ್ಳುತ್ತಿದ್ದರು. ಜನಪರ ಚಳವಳಿ ಹಾಗೂ ಸಮಷ್ಟಿ ಹಿತದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು. ಯುವಕ ಯುವತಿಯರು ದೇಶಪ್ರೇಮ ಬೆಳೆಸಿಕೊಳ್ಳುವಂತೆ ತಿಳಿ ಹೇಳುತ್ತಿದ್ದರು.

ನಿಜಲಿಂಗಪ್ಪನವರ ಬದುಕು ಅತ್ಯಂತ ಸರಳವಾದುದು ಮತ್ತು ಪಾರದರ್ಶಕವಾದುದು. ಸುಮಾರು ಮೂರು ದಶಕಗಳಿಗೂ ಹಿಂದೆ ಅವರು ಮೊಳಕಾಲ್ಮೂರಿನ ನಮ್ಮ ಮನೆಗೆ ಆಗಮಿಸಿದಾಗ ನಮ್ಮ ತಾಯಿಯವರು ಬಡಿಸಿದ ರೊಟ್ಟಿ, ಮೊಸರು ಇಷ್ಟಪಟ್ಟು ಸೇವಿಸಿದರಲ್ಲದೆ, ಪಪ್ಪಾಯಿ ಹಣ್ಣನ್ನು ಸಹಾ ಅಷ್ಟೇ ಇಷ್ಟಪಟ್ಟು ಸವಿದರು. ನಮ್ಮ ಸಾಮಾನ್ಯ ಮನೆಯ ಸಣ್ಣ ಕೋಣೆಯಲ್ಲಿ ಮಧ್ಯಾಹ್ನದ ಅಲ್ಪಕಾಲ ವಿಶ್ರಾಂತಿ ಪಡೆದದ್ದು ಮರೆಯಲಾಗದ ಸಂಗತಿ. ಯಾರನ್ನೂ ಕೇಳಿ ಪಡೆಯದ ಅವರು ತಮಗೆ ಆತ್ಮೀಯರಾದ ನಮ್ಮ ತಂದೆಯವರಾದ ಅನ್ನದಾನಿ ಆರ್. ವೀರಭದ್ರಪ್ಪನವರಿಗೆ ಊಲೂಪಿ ಕಟ್ಟಿಗೆಯ ಊರುಗೋಲು ಸಿಗುವುದೇ ಎಂದು ಕೇಳಿ ಪಡೆದುಕೊಂಡರು. ಅದೊಂದು ಸಾಮಾನ್ಯ ಕಟ್ಟಿಗೆಯದಾಗಿದ್ದರೂ, ಗಾಂಧೀವಾದಿಯಾಗಿದ್ದ ಅವರು, ಜೀವಿತದ ಕೊನೆಗಾಲದಲ್ಲಿ ಆ ಊಲೂಪಿ ಊರುಗೋಲನ್ನೇ ಬಳಸುತ್ತಿದ್ದರು. ನಮ್ಮಜ್ಜಿ ಸಾಂತಮ್ಮನವರು ವಕೀಲರಾಗಿದ್ದ ನಿಜಲಿಂಗಪ್ಪನವರ ಕಕ್ಷಿದಾರಳು. ನಾನು ಅವರನ್ನು ಹತ್ತಾರು ಬಾರಿ ಅವರ ಮನೆಯಲ್ಲಿ ಭೇಟಿಯಾದಾಗ ನಿಮ್ಮಜ್ಜಿ ಸಾಂತಮ್ಮ ಬಹಳ ಬುದ್ದಿವಂತೆ ಎಂದು ಸಾಮಾನ್ಯ ಮಹಿಳೆಯಾಗಿದ್ದ ನನ್ನಜ್ಜಿಯನ್ನು ಹೊಗಳುತ್ತಿದ್ದರು. ಇದು ಅವರ ಸ್ತ್ರೀ ಪರವಾದದ ಪ್ರಗತಿಪರ ನಿಲುವು.

ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರ 88 ನೇ ಹುಟ್ಟುಹಬ್ಬದ ವರ್ಧಂತ್ಯೋತ್ಸವ ಮೊಳಕಾಲ್ಮೂರಿನಲ್ಲಿ 1990 ರಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಲವಲವಿಕೆಯಿಂದ ಭಾಗವಹಿಸಿದ್ದ ಎಸ್ಸೆನ್‌ರವರು ಸಮಾರಂಭದಲ್ಲಿ ಸಂಭ್ರಮಿಸಿದರು. ಈಗ ಅವರಿಲ್ಲ. ಅವರು ಹಾಕಿಕೊಟ್ಟ ಆದರ್ಶ ಮಾರ್ಗವಿದೆ. ಆ ಪಥದಲ್ಲಿ ಸಾಗಿ ಮುನ್ನಡೆದಾಗಲೇ ಅವರ 122ನೇ ವರ್ಷದ ಜಯಂತಿಗೆ ಅರ್ಥ ಬಂದೀತು. ನವ ಕರ್ನಾಟಕ ಶಿಲ್ಪಿ, ಕರ್ನಾಟಕ ರತ್ನ ದಿವಂಗತ ನಿಜಲಿಂಗಪ್ಪನವರ ಚೈತನ್ಯ ಮತ್ತು ಸಿದ್ಧಾಂತಕ್ಕೆ ಎಂದೂ ಸಾವಿಲ್ಲ. ಅವರೊಬ್ಬ ನಿಜ 'ಜಂಗಮ' ಮತ್ತು ಅವರ ಸಾಧನೆಗಳು ಅಜರಾಮರ. ಇಂತಹ ಶ್ರೇಷ್ಠ ಚಿನ್ಮೂಲಾದ್ರಿ ಮಣ್ಣಿನ ಮಗನ ಸಾಧನೆ ಸ್ಮರಣೆಗೆ ಅವರ ಆಳೆತ್ತರದ ಕಂಚಿನ ಪ್ರತಿಮೆ ಸ್ಥಾಪನೆಯನ್ನು ಚಿತ್ರದುರ್ಗದ ಮುಖ್ಯ ವೃತ್ತದಲ್ಲಿ ಘನ ಸರ್ಕಾರ ಸರ್ವರ ಸಾಮರಸ್ಯದೊಂದಿಗೆ ಮಾಡುವಂತಾಗಲಿ; ಅವರು ಜೀವಿಸಿದ್ದ ಮನೆಯನ್ನು ತ್ವರಿತವಾಗಿ ನವೀಕರಿಸಿ ಶಾಶ್ವತ ಸ್ಮರಣಾಲಯ ಮಾಡಿ ಪ್ರಜೆಗಳ ಪ್ರೀತಿಗೆ ಪಾತ್ರವಾಗಲಿ.

- ಪ್ರೊ. ಎ.ವಿ. ನುಂಕಪ್ಪ
ನಿವೃತ್ತ ಪ್ರಾಂಶುಪಾಲರು, ಚಿತ್ರದುರ್ಗ

## ಖೈದಿಗಳು ಸನ್ನಡತೆ ರೂಢಿಸಿಕೊಳ್ಳಿ



**ಎಸ್. ಸಿದ್ದೇಶ್ ಕುರ್ಕಿ**

ದಾವಣಗೆರೆ, ಡಿ.9- ಬಂಧನದಲ್ಲಿರುವ ಖೈದಿಗಳು ಸನ್ನಡತೆ ರೂಢಿಸಿಕೊಂಡು, ಇಲ್ಲಿಂದ ಬಿಡುಗಡೆ ಹೊಂದಿ, ಸಮಾಜದಲ್ಲಿ ಉತ್ತಮ ಜೀವನ ಕಟ್ಟಿಕೊಳ್ಳಿ ಎಂದು ಸಾಹಿತಿ ಎಸ್. ಸಿದ್ದೇಶ್ ಕುರ್ಕಿ ಖೈದಿಗಳಿಗೆ ಕಿವಿಮಾತು ಹೇಳಿದರು.

ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಕಲಾಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಗರದ ಜಿಲ್ಲಾ ಬಂಧೀಖಾನೆಯಲ್ಲಿ ಭಾನುವಾರ ಆಯೋಜಿಸಿದ್ದ ಸಂಗೀತ ಸುಧೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೋ ಮನಸ್ಥಿತಿಯಿಂದ ಅಪರಾಧ ಕೃತ್ಯಗಳಲ್ಲಿ ತೊಡಗಿ ಬಂಧನಕ್ಕೊಳಪಟ್ಟು ಪಶ್ಚಾತ್ತಾಪ ಪಡುವ ಜತೆಗೆ ಮಾನಸಿಕವಾಗಿ ಕುಗ್ಗಿದ್ದೀರಿ. ಹಾಗಾಗಿ ಎಲ್ಲರೂ ಇಂದಿನಿಂದಲೇ ಸದ್ಗುಣಗಳನ್ನು ಅಳವಡಿಸಿಕೊಳ್ಳಿ ಎಂದು ಹೇಳಿದರು.

ಮಾನವ ಜೀವ ಶ್ರೇಷ್ಠ ಎಂಬುದನ್ನು ಅರಿತು, ಇನ್ನಾದರೂ ಒಳ್ಳೆಯ ಬದುಕನ್ನು ಕಟ್ಟಿಕೊಳ್ಳಿ ಎಂದು ಯರಗುಂಟೆಯ ಗುರು ಕರಿಬಸವೇಶ್ವರ ಸ್ವಾಮಿ ಗದ್ದಿಗೆ ಮಠದ ಪರಮೇಶ್ವರ ಶ್ರೀಗಳು ಆಶೀರ್ವಚನ ನೀಡಿದರು.

ಕತ್ತಿಗೆ ಪರಮೇಶ್ವರಪ್ಪ ಅವರು ತತ್ವಪದ ಹಾಡಿದರೆ, ಖಾದರ್ ಅವರು ಜಾನಪದ ಸಂಗೀತಕ್ಕೆ ಧ್ವನಿಯಾದರು. ಮತ್ತು ಎಂ.ಸಿ ರುದ್ರೇಶ್ ಅವರು ಸುಗಮ ಸಂಗೀತ ಗಾಯನ ಮಾಡಿದರೆ, ರತ್ನಾ ಅವರು ವಚನ ಸಂಗೀತವನ್ನು ಉಣಬಡಿಸಿದರು.

ಕಾರ್ಯಕ್ರಮದಲ್ಲಿ ಜೈಲರ್ ಪ್ರೇಮ ಪ್ರಕಾಶ್ ಕೊಮ್ಮಿಕರ್, ಲಮಾಣಿ, ಎನ್.ಎಸ್ ರಾಜು, ಎಸ್.ಜಿ ಶಾಂತ, ಮಮತ, ವನಜಾ ಮಹಾಲಿಂಗಯ್ಯನವರ್ ಹಾಗೂ ಬಂಧೀಖಾನೆಯ ಸಿಬ್ಬಂದಿಗಳು ಇದ್ದರು.

## ಸಾಮಾಜಿಕ ಬದಲಾವಣೆಗೆ ನಾಟಕಗಳು ಸೂಕ್ತ ವೇದಿಕೆ



**ಹರಪನಹಳ್ಳಿ**

ಹರಪನಹಳ್ಳಿ, ಡಿ. 9 - ಸಾಮಾಜಿಕ ಬದಲಾವಣೆಗೆ ನಾಟಕಗಳು ಸೂಕ್ತ ವೇದಿಕೆಯಾಗಿವೆ ಎಂದು ನಾಟಕ ಅಕಾಡೆಮಿಯ ಸದಸ್ಯ ಶಿವ ನಾಯಕ್ ದೊರೆ ಹೇಳಿದರು. ಪಟ್ಟಣದ ದೇವೀರಮ್ಮ ಆಪ್ತ ರಂಗ ಚಾವಡಿಯಲ್ಲಿ ನಾಟಕ ಅಕಾಡೆಮಿ ಬೆಂಗಳೂರು ಹಾಗೂ ನೈಪುಣ್ಯ ಟ್ರಸ್ಟ್ ರಿ. ಬಸವನಾಳು ಸಹಯೋಗದೊಂದಿಗೆ ಮಣ್ಣು ನಾಟಕ ಪ್ರದರ್ಶನ ಉದ್ಘಾಟಿಸಿ ಮಾಡಿ ಮಾತನಾಡಿದರು.

ನಾಟಕವು ಎಲ್ಲವನ್ನು ಒಳಗೊಂಡ ಸಮಗ್ರ ಕಲೆಯಾಗಿದ್ದು, ಇದನ್ನು ಪ್ರತಿಯೊಬ್ಬರು ಸ್ವೀಕರಿಸುವಂತಾಗಬೇಕು. ಸಮಾಜದ ಹುಳುಕುಗಳನ್ನು ಎತ್ತಿ ತೋರಿಸುವ, ಸಮಾಜದ ಸಂಬಂಧಗಳನ್ನು ಗಟ್ಟಿಗೊಳಿಸುವ ಸಾಮರ್ಥ್ಯ ನಾಟಕಗಳಿಗಿದೆ. ನಾಟಕಗಳಿಗೆ ಎಲ್ಲಾ ಕಾಲಗಳಲ್ಲೂ ಬೆಲೆ ಇದೆ. ನಾಟಕ ಪುರಾತನ ಗಂಡು ಕಲೆ. ರಂಗಭೂಮಿ ಬದುಕಿನ ಕನ್ನಡಿ ಹಾಗೂ ನೈಜ ಕಲೆಯಾಗಿದ್ದು, ಪ್ರೇಕ್ಷಕರೇ ಇದರ ಜೀವಾಳವಾಗಿದ್ದಾರೆ ಎಂದರು.

ಸೋಮೇಶ್ ಉಪ್ಪಾರ್ ಮರಿಯಮ್ಮನಹಳ್ಳಿ ಮಾತನಾಡಿ ನಾಟಕಗಳು ಜನರನ್ನು ಜಾಗೃತಗೊಳಿಸುವ ರಂಗಭೂಮಿ ಕಲೆ. ಜಾಗತೀಕರಣ ಮತ್ತು ಅಧುನಿಕತೆಯ ಭರಾಟೆಯಲ್ಲಿ ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳಾಗಿರುವ ನಾಟಕಗಳು ಇಂದು ಹೆಚ್ಚು ಜನರನ್ನು ತಲುಪುತ್ತಿಲ್ಲ. ಜನತೆ ಸಿನಿಮಾ, ಟಿವಿ ಕಡೆಗೆ ಆಕರ್ಷಿತರಾಗಿ ನಾಟಕಗಳನ್ನು ನೋಡುವುದನ್ನೇ ಕಡಿಮೆ ಮಾಡಿದ್ದಾರೆ ಎಂದು ವಿಷಾದ ವ್ಯಕ್ತ ಪಡಿಸಿದರು.

ರಂಗ ನಿರ್ದೇಶಕ ಆನಂದ್ ಕರುವಿನ ಮಾತನಾಡಿ ನಾಟಕಗಳನ್ನು ಜನರು ಹೆಚ್ಚು ಹೆಚ್ಚು ನೋಡಿದಾಗ ಮತ್ತು ಹೆಚ್ಚು ಹೆಚ್ಚು ಪ್ರದರ್ಶನಗಳಾದಾಗ ಮಾತ್ರ ನಾಟಕಗಳ ಸಾರ್ಥಕತೆ ಪಡೆಯುತ್ತವೆ. ಸಮಾಜದಲ್ಲಿ ಕಲಾವಿದರಿಗೆ ಉತ್ತಮ ಸ್ಥಾನಮಾನಗಳು ಸಿಗಬೇಕು. ಕಲಾವಿದರು ಬದುಕು ಎಷ್ಟೇ ಸಂಕಷ್ಟದಲ್ಲಿದ್ದರೂ ತಮ್ಮ ರಕ್ತಗತವಾದ ಕಲೆಯಿಂದ ಸಮಾಜದ ಸಂಕಷ್ಟಗಳನ್ನು ಮರೆಸಿ, ಮನರಂಜಿಸುತ್ತಾರೆ. ಆಧುನಿಕ ಯುಗದ ಒತ್ತಡಗಳಿಗೆ ನಮ್ಮ ಸಾಂಪ್ರದಾಯಿಕ ಕಲಾ ಪ್ರಕಾರಗಳು ಅವನತಿಗೊಳ್ಳುತ್ತಿವೆ. ರಾಜ್ಯದಲ್ಲಿ ಹಿಂದೊಮ್ಮೆ ನಾಟಕಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಈಗ ಆ ಪರಿಸ್ಥಿತಿ ಇಲ್ಲವಾಗಿದೆ. ಅಳಿದುಳಿದ ಕೆಲವು ವೃತ್ತಿ ರಂಗಭೂಮಿ ಕಂಪನಿಗಳು ಈ ನಾಟಕದ ಪರಂಪರೆಯನ್ನು ಉಳಿಸಿದ್ದು ಜನರ ಅಭಿಪ್ರಾಯಗಳನ್ನು ಮನದಲ್ಲಿಟ್ಟುಕೊಂಡು ಇದೇ ರೀತಿ ಮುಂದಿನ ನಾಟಕಗಳನ್ನು ನಿರ್ದೇಶಿಸುತ್ತೇನೆ ಎಂದು ಹೇಳಿದರು. ಬಯಲಾಟ ಅಕಾಡೆಮಿ ಸದಸ್ಯ ಬಿ. ಪರಶುರಾಂ ಗುಡ್ಡಪ್ಪ, ಕೆ. ಅರುಣಾನಾಯಕ್ ಬಿಎಸ್ ಸೇರಿದಂತೆ ಇತರರು ಇದ್ದರು.

## ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ ಡಿ.9- ಪರಿಶಿಷ್ಟ ಜಾತಿ ಹಾಗೂ ಪಂಗಡ ಉಪಯೋಜನೆ ಅಡಿ ಯಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟ ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಅರ್ಜಿಗಳನ್ನು ಇದೇ ದಿನಾಂಕ 20ರೊಳಗಾಗಿ ಸಹಾ ಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿಗೆ ಸಲ್ಲಿಸಬೇಕು. ಮಾಹಿತಿಗೆ ಸಂಪರ್ಕಿಸಿ : 08192-237480.

## ರೈತರ ಉಪವಾಸ ಸತ್ಯಾಗ್ರಹ ಬೆಂಬಲಿಸಿ, ಸಮಸ್ಯೆ ಇತ್ಯರ್ಥಕ್ಕೆ ಮನವಿ

**ರೈತ ಸಂಘ, ಹಸಿರು ಸೇನೆ ಪ್ರತಿಭಟನೆ**

ದಾವಣಗೆರೆ, ಡಿ. 9- ರೈತರ ಸಮಸ್ಯೆ ಇತ್ಯರ್ಥಪಡಿಸುವಲ್ಲಿ ಸರ್ಕಾರ ಯಾವುದೇ ಕಾನೂನಾತ್ಮಕ ನಿರ್ಣಯವನ್ನು ತೆಗೆದುಕೊಳ್ಳದಿರುವುದನ್ನು ವಿರೋಧಿಸಿ, ರೈತರ ಉಪವಾಸ ಸತ್ಯಾಗ್ರಹ ಬೆಂಬಲಿಸುವಂತೆ ಮತ್ತು ಸಂಸತ್‌ನಲ್ಲಿ ವಿಷಯ ಪ್ರಸ್ತಾಪಿಸುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಪದಾಧಿಕಾರಿಗಳು ಸಂಸದರ ಗೃಹ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ದೆಹಲಿಯ ಗಡಿಭಾಗದ ಖಾನೌರಿ ಗಡಿಯಲ್ಲಿ ಇಡೀ ರಾಜ್ಯದ ರೈತರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದು, ಕೇಂದ್ರ ಸರ್ಕಾರ ಇದನ್ನು ಲೆಕ್ಕಿಸದೇ ತಾವು ಹೇಳಿದ ಎಂಎಸ್‌ಪಿ ಬೆಲೆ ಖಾತ್ರಿ ಮಾಡುತ್ತೇವೆಂದು ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿರುತ್ತದೆ ಎಂದು ಪ್ರತಿಭಟನಾಕಾರರು ದೂರಿದರು.

ಈಗಾಗಲೇ ಕೊರೊನಾ ವೇಳೆ 800 ಜನ ರೈತರು ಹುತಾತ್ಮರಾಗಿದ್ದು, ಗಡಿಯಲ್ಲಿ ಸುಮಾರು ತಿಂಗಳುಗಳ ಕಾಲ ಚಳವಳಿ ನಡೆಸುತ್ತಿದ್ದು, ಸರ್ವೋಚ್ಛ ನ್ಯಾಯಾಲಯ ರೈತರ ಮನವಿ ಪುರಸ್ಕರಿಸಿ ರೈತರ ಸಮಸ್ಯೆ ಇತ್ಯರ್ಥ ಪಡಿಸಿ, ಚಳವಳಿಯನ್ನು ತೆರವುಗೊಳಿಸಲು ಸೂಚಿಸಿದೆ. ಇದುವರೆಗೂ ಕೇಂದ್ರ ಸರ್ಕಾರ ಯಾವುದೇ ಕಾನೂನಾತ್ಮಕ ನಿರ್ಣಯ ತೆಗೆದುಕೊಂಡಿಲ್ಲ ಎಂದು ಕಿಡಿಕಾರಿದರು.

ಸಂಘದ ಪದಾಧಿಕಾರಿಗಳಾದ ಬಲ್ಲೂರು ರವಿಕುಮಾರ್, ಸಿ.ಎಸ್. ಶಿವಮೂರ್ತೆಪ್ಪ, ಅಂಜಿನಪ್ಪ ಪೂಜಾರ್, ಹೆಬ್ಬಾಳು ರಾಜಯೋಗಿ, ಮೀಯಾಪುರ ತಿರುಮಲೇಶ್, ಜಯನಾಯ್ಕ, ಸಾಣೆಕೆರೆ ಗುರುಮೂರ್ತಿ, ಕರಿಬಸಪ್ಪ ಬೆಳವನೂರು, ಆರ್.ಹೆಚ್. ಪ್ರತಾಪ್ ಮತ್ತಿತರರಿದ್ದರು.

ಇದೇ ವೇಳೆ ದಾವಣಗೆರೆ, ಹರಿಹರ, ಹೊನ್ನಾಳಿ, ನ್ಯಾಮತಿ, ಜಗಳೂರು ಹಾಗೂ ಚನ್ನಗಿರಿ ತಾಲ್ಲೂಕುಗಳ ಗ್ರಾಮ ಪಂಚಾಯತಿಗಳಲ್ಲಿ ಇ-ಸ್ವತ್ತು ಕೊಡುವುದಕ್ಕೆ ವಿಳಂಬ ಮತ್ತು ತಾತ್ಸಾರ ಮಾಡುತ್ತಿದ್ದು, ಕೂಡಲೇ ವಿಳಂಬ ಮಾಡದೇ ಇ-ಸ್ವತ್ತು ನೀಡುವಂತೆ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಮನವಿ ಸಲ್ಲಿಸಿದರು.

## ಎಸ್. ಆರ್. ಪಾಟೀಲ ಸೇರಿ 12 ಜನರಿಗೆ 'ಅವ್ವ ಪ್ರಶಸ್ತಿ'

ಹುಬ್ಬಳ್ಳಿ, ಡಿ.9- ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಅವ್ವ ಸೇವಾ ಟ್ರಸ್ಟ್ ನೀಡುವ ಪ್ರಸ್ತುತ ವರ್ಷದ 'ಅವ್ವ ಪ್ರಶಸ್ತಿ'ಗೆ ರಾಜಕಾರಣಿ ಎಸ್. ಆರ್. ಪಾಟೀಲ, ಪತ್ರಕರ್ತ ಚಂದ್ರಕಾಂತ ವಡ್ಡು, ಸಿತಾರ್ ವಾದಕ ಛೋಟೆ ರಹಮತ್‌ಖಾನ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 12 ಜನರನ್ನು ಆಯ್ಕೆ ಮಾಡಲಾಗಿದೆ.

ಹುಬ್ಬಳ್ಳಿಯ ಗುಜರಾತ್ ಭವನದಲ್ಲಿ ಡಿಸೆಂಬರ್ 15ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ 14ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸಾಧಕರಿಗೆ 'ಅವ್ವ ಪ್ರಶಸ್ತಿ' ಪ್ರದಾನ ಮಾಡಲಾಗುತ್ತದೆ' ಎಂದು ಸುದ್ದಿಗೋಷ್ಠಿಯಲ್ಲಿ ಅವ್ವ ಸೇವಾ ಟ್ರಸ್ಟ್ ಅಧ್ಯಕ್ಷ ಬಸವರಾಜ ಹೊರಟ್ಟಿ ತಿಳಿಸಿದರು.

ಸಾಹಿತಿ ಸಂಗಮನಾಥ ಲೋಕಾಪುರ, ಗಾಯಕಿ ರೇಖಾ ಹೆಗಡೆ, ಭಾಗವತ ಕೇಶವ ಹೆಗಡೆ ಕೊಳಗಿ, ಉದ್ಯಮಿ ಮಹೇಂದ್ರ ಸಿಂಘಿ, ಬಸವ ತತ್ವ ಪ್ರಚಾರಕ ಎಸ್. ಮಹದೇವಯ್ಯ, ಸಮಾಜ ಸೇವಕಿ ರಾಜೇಶ್ವರಿ ಪಾಟೀಲ, ಜಾನಪದ ಕಲಾವಿದ ಬಸವರಾಜ ಶಿಗ್ಗಾಂವಿ, ಸ್ಕೇಟ್ ಕ್ರೀಡಾಪಟು ತ್ರಿಶಾ ಜಡಲಾ ಹಾಗೂ ಎಸ್ಸೆಸ್ಸೆಲ್ಸಿಯಲ್ಲಿ 625 ಕ್ಕೆ 625 ಅಂಕ ಗಳಿಸಿದ ಬಾಗಲಕೋಟೆಯ ಅಂಕಿತಾ ಕೊಣ್ಣೂರ ಅವರು ಅವ್ವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಸ್ಮರಣಿಕೆ ಜೊತೆಗೆ 25 ಸಾವಿರ ರೂ. ನಗದು ಇರಲಿದೆ ಎಂದು ಮಾಹಿತಿ ನೀಡಿದರು.

ಈವರೆಗೆ 68 ಮಂದಿಗೆ 'ಅವ್ವ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ' ಎಂದು ಹೊರಟ್ಟಿ ಹೇಳಿದರು.


**ಡ್ರೈವರ್ ಬೇಕಾಗಿದ್ದಾರೆ**
ಕಾರ್/ಇನೋವಾದಲ್ಲಿ ಅನುಭವವಿರುವ, ಲೈಸನ್ಸ್ ಹೊಂದಿರುವವರು ಸಂಪರ್ಕಿಸಿ
ಬೆಳಗ್ಗೆ 11.30 ರಿಂದ 2.00ರವರೆಗೆ
08192 254736

**ಮಳಿಗೆಗಳು ಮಾರಾಟಕ್ಕಿವೆ**
ಬಾಡಿಗೆಗೆ ಬರುವಂತಹ ಕಮರ್ಷಿಯಲ್ ಮಳಿಗೆಗಳು ಮಾರಾಟಕ್ಕಿವೆ. ಸಿತಾರ ಬಾರ್ ಹತ್ತಿರ 23x24 ಸೈಜಿನ, 23x24 ಪೂರ್ವ ದಿಕ್ಕಿನ ಮಳಿಗೆಗಳು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗೆ/ಲೀಸ್‌ಗೆ ಇದೆ**
34x70 (2380 ಚದರಡಿ) ಅಳತೆಯ ಮೊದಲ ಹಾಗೂ ಎರಡನೇ ಮಹಡಿ ಬಾಡಿಗೆಗೆ /ಲೀಸ್‌ಗೆ ಇದೆ.
ವಿಳಾಸ: ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ಬಸವೇಶ್ವರ ನಗರ, ಹಳೇ ಪಿ.ಬಿ. ರಸ್ತೆ, ದಾವಣಗೆರೆ.
ಸಂಪರ್ಕಿಸಿ : 94493 35577

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಕಿಡ್ಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 40x45 East, 40 ಅಡಿ ರೋಡಿಗಿದೆ, ಸಿದ್ದ ವೀರಪ್ಪ ಬಡಾವಣೆಯಲ್ಲಿ 40x55 South, ಡಾಲರ್ಸ್ ಕಾಲೋನಿಯಲ್ಲಿ 30x45 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 North, LIC ಕಾಲೋನಿಯಲ್ಲಿ 30x50 North, ಡಾಲರ್ಸ್ ಕಾಲೋನಿಯಲ್ಲಿ 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
B. Com, BA ಅಥವಾ PUC ಆದವರು ಆಫೀಸ್ ಮತ್ತು ಮಾರ್ಕೆಟಿಂಗ್ ಕೆಲಸಕ್ಕೆ ಬೇಕಾಗಿದೆ
ಸಂಪರ್ಕಿಸಿ
96325 54524

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**2BHK ಮನೆ ಲೀಸ್‌ಗಿದೆ**
1800 ಚ.ಅ., ಫುಲ್ ಫರ್ನಿಷ್ಡ್, ಸಿಸಿಟಿವಿ, ಭಗೀರಥ ಕಲ್ಯಾಣ ಮಂಟಪ ಹತ್ತಿರ, ಪಿ.ಬಿ. ರೋಡ್, ಹರಿಹರ.
90088 00080

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
81500 82897, 91108 97420

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**WANTED**
SS Distributors
Mineral Water and Beverages
Male candidate for sales and marketing. Male and Female candidate for accounts. Minimum 2 years of expierience. Davanagere.
94496 02786, 99808 96782

**ಲೋನ್ ದೊರೆಯುತ್ತದೆ**
ಕೇಂದ್ರ, ಸರ್ಕಾರದ ಯೋಜನೆಯಡಿ ಎಲ್ಲಾ ರೀತಿಯ ಬಿಜಿನೆಸ್ ಮಾಡುವವರಿಗೆ ಸಬ್ಸಿಡಿ ಲೋನ್ ದೊರೆಯುತ್ತದೆ.
72592 97502

**ಮನೆ ಲೀಜ್‌ಗಿದೆ**
# 3100/51, ನೂತನ್ ಕಾಲೇಜ್ ರಸ್ತೆ, 7ನೇ ಮುಖ್ಯರಸ್ತೆ, 34ನೇ ವಾರ್ಡ್, 7ನೇ C ಶಿವಶಕ್ತಿ ಬ್ಲಾಕ್, ಅಳತೆ 30x50 ಅಡಿ, ವಿವೇಕಾನಂದ ಬಡಾವಣೆ, ದಾವಣಗೆರೆ ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್ ರೂಂ, 2ನೇ ಮಹಡಿ, 3 ಬೆಡ್ ರೂಂ ಮನೆ ಮುನ್ಸಿಪಲ್/ಬೋರ್‌ವೆಲ್ ಇದೆ.
95387 32909, 98444 56243

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಮನೆಗಳು ಲೀಸ್‌ಗೆ ಇವೆ**
ದಾವಣಗೆರೆ ಹೊಸ ಕೋರ್ಟ್ ಹತ್ತಿರ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್‌ನಲ್ಲಿ ಒಂದು ಬೆಡ್ ರೂಂನ 2 ಮನೆಗಳು ಲೀಸ್‌ಗೆ ಲಭ್ಯವಿದೆ. ಸಂಪರ್ಕಿಸಿ:
63660 20922

**ನೋಂದಣಿ ಕ್ರಯಪತ್ರ ಕಳೆದಿದೆ**
ಶ್ರೀಮತಿ ಪಾರ್ವತಮ್ಮ ಕೋಂ ಮಾರುತಿ ಹೆಸರಿನಲ್ಲಿರುವ ಶ್ರೀ ರಾಜೀವ್ ಗಾಂಧಿ ಬಡಾವಣೆ, ಸೈಟ್ ನಂ. 1175 ಚಾಲ್ತಿ ಡೋರ್‌ನಂ. 1175 ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ : 18.09.2013 ರಂದು ದಾವಣಗೆರೆಯ ಹಿರಿಯ ಉಪ-ನೋಂದಣಾಧಿಕಾರಿಯವರ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ್ ಡಿವಿಜಿ 1-09539-2013-14 ಆಗಿ ಸಿಡಿ ನಂ. ಡಿವಿಜಿಡಿ 310ನೇದ್ದರಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಕ್ರಯ ಪತ್ರವು ಸುಮಾರು 3 ವರ್ಷಗಳ ಹಿಂದೆ ಮನೆಯನ್ನು ಸ್ವಚ್ಛಗೊಳಿಸುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 99724 73993

**ಮನೆ ಮಾರಾಟಕ್ಕಿದೆ**
ನಿಟುವಳ್ಳಿಯ ಚಿಕ್ಕನಹಳ್ಳಿ ಬಡಾವಣೆಯಲ್ಲಿ 15x40 2 ಬೆಡ್ ರೂಂ ಇರುವ ಆರ್.ಸಿ.ಸಿ. ಮನೆ ಮಾರಾಟಕ್ಕಿದೆ.
94486 55850

**ಸೈಟ್ ಮಾರಾಟಕ್ಕಿದೆ**
50x80 ಪಶ್ಚಿಮಾಭಿಮುಖ ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ.
99008 92750
98441 16813

**ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
99868 86464

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ Nurse. ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಮಾರಾಟಕ್ಕಿದೆ**
ಹೊಂಡಾ ಎವಿಯೇಟರ್ (ಮಾಡಲ್-2011) ಉತ್ತಮ ಸ್ಥಿತಿಯಲ್ಲಿದೆ.
ರೂ. 25,000/- (ಸ್ಕೂಟರ್)
84531 61869

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಕಾಡು ಬೆಳೆಸಿ ನಾಡು ಉಳಿಸಿ**

**ಹೆಸರು ತಿದ್ದುಪಡಿ**
ನಾನು ಕರ್ಣ ಪಿ.ಹೆಚ್. ಬಿನ್ ಹನುಮಂತಪ್ಪ, ವಾಸ ವಡ್ಡಿನಹಳ್ಳಿ, ಹರಪನಹಳ್ಳಿ ತಾಲ್ಲೂಕು, ನನ್ನ ಮೊದಲಿನ ಹೆಸರು ಕರಣ ಪಿ.ಹೆಚ್. ಎಂದು ಇದ್ದು, ದಾವಣಗೆರೆಯ ನೋಟರಿಯಲ್ಲಿ ಕರ್ಣ ಪಿ.ಹೆಚ್. ಎಂದು ಬದಲಾಯಿಸಿಕೊಂಡಿರುತ್ತೇವೆ. ಮುಂದೆ ನನ್ನ ಎಲ್ಲಾ ವ್ಯವಹಾರಗಳಲ್ಲಿ ಕರ್ಣ ಪಿ.ಹೆಚ್. ಎಂಬ ಹೆಸರಿನಲ್ಲೆ ಮುಂದುವರೆಸುತ್ತೇನೆಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇವೆ.
ಸಹಿ /- ಕರ್ಣ ಪಿ.ಹೆಚ್.

**ಮಳಿಗೆ ಬಾಡಿಗೆಗೆ ಇದೆ**
ಗಡಿಯಾರ ಕಂಬದ ಎದುರು ವಸಂತ ಟಾಕೀಸ್ ರಸ್ತೆಯ ಕಾರ್ನರ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 1 ಹಾಗೂ ಫಸ್ಟ್ ಫ್ಲೋರ್‌ನಲ್ಲಿ 3, ಸೆಕೆಂಡ್ ಫ್ಲೋರ್‌ನಲ್ಲಿ 3 ಮಳಿಗೆ ಹಾಗೂ ಥರ್ಡ್ ಫ್ಲೋರ್‌ನಲ್ಲಿ 3 ರೂಂ ಬಾಡಿಗೆಗೆ ಇವೆ. ಮಳಿಗೆ ಅಳತೆ : 10x21
98444 76185
98445 00114

**ಗೀರ್ ಹಸುಗಳು ಮಾರಾಟಕ್ಕಿವೆ**
ಸ್ಥಳ: ಶ್ರೀ ನಿಧಿ ಫಾರ್ಮ್ ಹೌಸ್ ಸಿದ್ದಾಪುರ, ಹಲವಾಗಲು
ಸಂಪರ್ಕಿಸಿ:
89707 77554

**ಬೇಕಾಗಿದ್ದಾರೆ**
ರಾಂ ಅಂಡ್ ಕೋ ಸರ್ಕಲ್ ಬಳಿಯಿರುವ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಉಚಿತ ಕಣ್ಣಿನ ತಪಾಸಣೆ**
ಮಧುಮೇಹ (ಸಕ್ಕರೆ ಖಾಯಿಲೆ) ಹಾಗೂ ಕಣ್ಣಿನ ಸಮಸ್ಯೆ ಇರುವವರಿಗೆ ಉಚಿತ ಕಣ್ಣಿನ ತಪಾಸಣೆ
ದಾವಣಗೆರೆ ನೇತ್ರಾಲಯ ಘಟಕವಾಗಿರುವ
ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ,
ಎಂಸಿಸಿ ಎ ಬ್ಲಾಕ್, ಗುಂಡಿ ಛತ್ರ ಪಕ್ಕ, ದಾವಣಗೆರೆ.
83101 60893

**ಬೇಕಾಗಿದ್ದಾರೆ**
ಮೆಡಿಕಲ್ ಫಾರ್ಮಾದಲ್ಲಿ SSLC/ PUC ಮಧ್ಯಮ ವಯಸ್ಕರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ.
ಸಾವಳಗಿ ಫಾರ್ಮಾಸ್ಯೂಟಿಕಲ್
ಹಡಡಿ ರಸ್ತೆ, ದಾವಣಗೆರೆ.
94484 24185

**ಮನೆ ಲೀಸ್‌ಗೆ ಇದೆ**
ಡಬಲ್ ಬೆಡ್ ರೂಮ್‌ಗಳನ್ನು ಹೊಂದಿರುವ ಹೊಸ ಮನೆ ಲೀಸ್‌ಗಾಗಿ ಸಂಪರ್ಕಿಸಿ : ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ, ದಾವಣಗೆರೆ.
95356 10817

**REQUIRED FOR BOYS ONLY**
Qualification-ITI Technician
SRI KALLESHWARA ENTERPRISES
Vguard authorised service centre
MCC `A' block, 2nd main, 2nd cross, Davangere-4
9482066363, 8660939327

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ROOM FOR RENT**
Single Attached room with all facilities available with wardrobe and cots system at MCC 'A' Block, Near Ram Krishna Ashrama, Beside Ganesh temple.
97405 69252

**ಕೆಲಸ ಖಾಲಿ ಇದೆ**
ಹೋಲ್ ಸಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮತ್ತು ಡೆಲಿವೆರಿ ಬಾಯ್ ಕೆಲಸ ಖಾಲಿ ಇದೆ.
ಕನಿಷ್ಠ ಅನುಭವ : 1 ವರ್ಷ
ಕರೆ ಮಾಡಿ :
74066 59695, 79751 77934

# ಅನುದಾನ ತಾರತಮ್ಯಕ್ಕೆ ಆಕ್ಷೇಪ : ಸಭೆ ಮುಂದಕ್ಕೆ



## ಜಗಳೂರು ಪ.ಪಂ. ಸಭೆ

ಜಗಳೂರು, 9 - ವಾರ್ಡ್ ಅಭಿವೃದ್ಧಿಗೆ ಅನುದಾನ ನೀಡುವಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಪಟ್ಟಣ ಪಂಚಾಯಿತಿಯಲ್ಲಿ ಇಂದು ನಡೆಯಬೇಕಿದ್ದ ಸಾಮಾನ್ಯ ಸಭೆ ಸದಸ್ಯರ ವಾಗ್ವಾದ, ಗೊಂದಲದಿಂದ ಮುಂದೂಡಲಾಯಿತು.

ಮುಖ್ಯಮಂತ್ರಿ ವಿಶೇಷ ಅನುದಾನದಲ್ಲಿ 8 ಕೋಟಿ ಅನುದಾನವನ್ನು ಪಟ್ಟಣದ ಅಭಿವೃದ್ಧಿಗೆ ಶಾಸಕರು ಮೀಸಲಿಟ್ಟಿದ್ದು, 18 ವಾರ್ಡ್ ಗಳಿಗೆ ಪ್ರಾತಿನಿಧ್ಯ ನೀಡದೆ ತಾರತಮ್ಯ ನೀತಿ ಅನುಸರಿಸಲಾಗಿದೆ ಎಂದು ಕೆಲ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ ಪರಿಣಾಮ ಪ.ಪಂ.ಅಧ್ಯಕ್ಷ ನವೀನ್ ಕುಮಾರ್ ಸಭೆಯನ್ನು ಮುಂದೂಡಿದರು.

ಸದಸ್ಯ ಆರ್.ತಿಪ್ಪೇಸ್ವಾಮಿ ಮಾತನಾಡಿ, ಪಟ್ಟಣದಲ್ಲಿ ಚರಂಡಿ ಮತ್ತು ರಸ್ತೆಗಳು ಸಮರ್ಪಕವಾಗಿ ಇಲ್ಲದಿರುವುದರಿಂದ ಪಟ್ಟಣದ ಮೂಲಸೌಕರ್ಯ ಅಭಿವೃದ್ದಿಗಾಗಿ 8 ಕೋಟಿ ಅನುದಾನ ನೀಡಿರುವುದು ಆದರೆ ಕೆಲವಾರ್ಡ್‌ಗಳಿಗೆ ಮಾತ್ರ ಅನುದಾನ ನೀಡಿದ್ದು, ಕೆಲ ವಾರ್ಡ್‌ಗಳಿಗೆ ಅನುದಾನ ನೀಡದೇ ಇರುವುದನ್ನು ಪ್ರಶ್ನಿಸಿ ಮೂಲ ಸೌಕರ್ಯಕ್ಕೆ ತಲಾ 30 ಲಕ್ಷದವರೆಗೆ ಕನಿಷ್ಠ ಅನುದಾನ ಹಂಚಿಕೆಯಾಗಲಿ ಎಂದು ಒತ್ತಾಯಿಸಿದರು.

ಪ.ಪಂ.ಉಪಾಧ್ಯಕ್ಷೆ ಲೋಕಮ್ಮ ಮಾತನಾಡಿ, ಕೆಲ ವಾರ್ಡ್‌ಗಳ ಅಭಿವೃದ್ದಿಗೆ ಮಾತ್ರ ಅನುದಾನ ನೀಡಲಾಗಿದ್ದು, ಕ್ರಿಯಾ ಯೋಜನೆ ಮಾಡುವುದು ಸರಿಯಲ್ಲ. ಶಾಸಕರ ಬಳಿ ನಿಯೋಗ ತೆರಳಿ ಚರ್ಚಿಸಿ ಪ್ರತಿ ವಾರ್ಡ್‌ಗಳ ಅಭಿವೃದ್ದಿಗೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.

ಪ.ಪಂ. ಸದಸ್ಯರಾದ ಶಕೀಲ್ ಅಹಮ್ಮದ್, ಲಲಿತಮ್ಮ, ದೇವರಾಜ್ ಮಾತನಾಡಿದರು. ಶಾಸಕರು ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲಾ ವಾರ್ಡ್‌ಗಳ ಅಭಿವೃದ್ಧಿಗೆ ಅನುದಾನ ಒದಗಿಸುವ ಭರವಸೆ ನೀಡಿದ್ದು, ಇದೀಗ ತಯಾರಿಸಿದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಮನವಿ ಮಾಡಿದರು.

ಸಂದರ್ಭದಲ್ಲಿ ಪ.ಪಂ.ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಸದಸ್ಯರಾದ ಮಹಮ್ಮದ್ ಅಲಿ, ನಿರ್ಮಲಕುಮಾರಿ, ಲಲಿತಮ್ಮ, ಪಾಪಲಿಂಗಪ್ಪ, ರೇವಣ್ಣ, ದೇವರಾಜ್, ಸರೋಜಮ್ಮ ಇದ್ದರು.

# ಬೆಳ್ಳೂಡಿ ಮಠದಲ್ಲಿ ಸಂಭ್ರಮದ ಕಾರ್ತಿಕೋತ್ಸವ

ಮಲೇಬೆನ್ನೂರು, ಡಿ.9- ಕಾಗಿನೆಲೆ ಕನಕ ಗುರು ಪೀಠದ ಬೆಳ್ಳೂಡಿ ಶಾಖಾ ಮಠದಲ್ಲಿ ಆದಿ ಜಗದ್ಗುರು ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ಸೋಮವಾರ ರಾತ್ರಿ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರು ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಮೂರ್ತಿಗೆ ವಿಶೇಷ ಪೂಜೆ, ಫಳಾರ ನೆರವೇರಿಸಿದ ನಂತರ ದೀಪ ಬೆಳಗಿಸಿ ಕಾರ್ತಿಕೋತ್ಸವಕ್ಕೆ ಚಾಲನೆ ನೀಡಿದರು.

ಕಾರ್ತಿಕೋತ್ಸವದ ಅಂಗವಾಗಿ ಇಡೀ ಮಠ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿತ್ತು. ಪಟಾಕಿ ಸಿಡಿತ ಭಕ್ತರ ಗಮನ ಸೆಳೆಯಿತು. ಡೊಳ್ಳು ಕುಣಿತ ಕಾರ್ತಿಕೋತ್ಸವಕ್ಕೆ ಮೆರಗು ತಂದಿತು.

ಮಾಜಿ ಸಚಿವ ಆರ್. ಶಂಕರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಹಾನಗರಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್, ಬೆಳ್ಳೂಡಿ ಗ್ರಾ.ಪಂ. ಅಧ್ಯಕ್ಷ ಉಮೇಶ್, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಐರಣಿ ಅಣ್ಣಪ್ಪ, ಕೆ. ರೇವಣಸಿದ್ದಪ್ಪ, ಕರೇಕಟ್ಟೆ ಲೋಕೇಶ್, ಸಿಪಿಐ ಸುರೇಶ್ ಸಗರಿ,



ಪಿಎಸ್ಐ ರವಿಕುಮಾರ್, ಕೆ.ಪಿ. ಗಂಗಾಧರ್ ಡಿ.ಕೆ. ಸಿದ್ದನಗೌಡ, ಎಳೆಹೊಳೆ ಕುಮಾರ್, ಪಿ.ಹೆಚ್.ಶಿವಕುಮಾರ್, ಮಲ್ಲಿಕಾರ್ಜುನ್ ಪೂಜಾರ್, ಹೆಚ್.ಕೆ. ಕನ್ನಪ್ಪ ಸೇರಿದಂತೆ, ಎಸ್.ಎಂ. ಮಂಜುನಾಥ್, ಮಲ್ಲೇಶ್ ಇನ್ನೂ ಅನೇಕರು ಭಾಗವಹಿಸಿದ್ದರು.

# ಉಕ್ಕಡಗಾತ್ರಿಯಲ್ಲಿ ವಿಜೃಂಭಣೆಯ ಬೆಳ್ಳಿ ರಥೋತ್ಸವ





ಮಲೇಬೆನ್ನೂರು, ಡಿ.9- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಕಾರ್ತಿಕೋತ್ಸವವು ಸೋಮವಾರ ರಾತ್ರಿ ಸಂಭ್ರಮದಿಂದ ನಡೆಯಿತು.

ಕಾರ್ತಿಕೋತ್ಸವದ ಅಂಗವಾಗಿ ಸೋಮವಾರ ಬೆಳಗ್ಗೆ ಅಜ್ಜಯ್ಯನ ಬೆಳ್ಳಿ ರಥೋತ್ಸವ ಮತ್ತು ರಾತ್ರಿ ಅಜ್ಜಯ್ಯನ ಪಾಲಿಕೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿದವು.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಬೆಳ್ಳಿ ರಥಕ್ಕೆ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು.

ವೀರಗಾಸೆ, ಡೊಳ್ಳು, ಭಜನೆ, ಹಲಗೆ ಸೇರಿದಂತೆ ವಿವಿಧ ಕಲಾ ಮೇಳಗಳು ರಥೋತ್ಸವಕ್ಕೆ ಮೆರಗು ತಂದವು.

ರಾತ್ರಿ ಅಜ್ಜಯ್ಯನ ಪಾಲಿಕೋತ್ಸವದಲ್ಲೂ

## ಅಜ್ಜಯ್ಯನ ಪಾಲಿಕೋತ್ಸವ

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಹೂವಿನಿಂದ ಅಲಂಕಾರ ಮಾಡಿದ ಟ್ರ್ಯಾಕ್ಟರ್‌ನಲ್ಲಿ ಅಜ್ಜಯ್ಯನ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆ ಮಾಡಲಾಯಿತು.

ಪಟಾಕಿ ಸಿಡಿತ ಬಾನಂಗಳದಲ್ಲಿ ಬಣ್ಣ-ಬಣ್ಣದ ಚಿತ್ತಾರ ಮೂಡಿಸಿ, ಜನರ ಗಮನ ಸೆಳೆಯಿತು. ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕಲಾಪದಲ್ಲಿ ವಕ್ಫ್ ಕೋಲಾಹಲ

**(1ನೇ ಪುಟದಿಂದ)** ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂದು ಪ್ರತಿಪಕ್ಷ ಸದಸ್ಯರ ಒಂದು ಗುಂಪು ಆಕ್ರೋಶ ವ್ಯಕ್ತಪಡಿಸಿ, ಧರಣಿಗೆ ಮುಂದಾಯಿತು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇಳಲು ಜನರಿಗೆ ಹಕ್ಕುಗಳಿಲ್ಲವೇ ಎಂದ ಅಶೋಕ್ ಹಾಗೂ ಯತ್ನಾಳ್, ಜಿಲ್ಲಾಧಿಕಾರಿಗಳು ತಮ್ಮ ಮನಬಂದಂತೆ ಅಧಿಕಾರ ನಡೆಸುತ್ತಿದ್ದಾರೆ.

ಪಂಚಮಸಾಲಿ ಸಮುದಾಯದ ಹೋರಾಟ ಇಂದು-ನಿನ್ನೆಯದಲ್ಲ, ತಮ್ಮ ಹಕ್ಕಿಗಾಗಿ ಬಸವ ಮೃತ್ಯುಂಜಯ ಸ್ವಾಮೀಜಿ ನಾಯಕತ್ವದಲ್ಲಿ ನಿರಂತರ ಹೋರಾಟ ನಡೆದಿದೆ. ಸಮುದಾಯದ ಹಕ್ಕಿಗಾಗಿ ಸರ್ಕಾರದ ಗಮನ ಸೆಳೆಯಲು ಶಾಂತಿಯುತ ಧರಣಿ, ಹೋರಾಟ ನಡೆಸುವ ಅವಕಾಶವನ್ನೂ ಸರ್ಕಾರ ನೀಡಿಲ್ಲ.

ಅಧಿವೇಶನ ನಡೆಯುವ ವೇಳೆ ಹೋರಾಟಗಾರರು, ಸರ್ಕಾರದ ಗಮನ ಸೆಳೆಯಲು ಧರಣಿ ನಡೆಸುತ್ತಾರೆ, ಇದಕ್ಕೆ ಗಮನ ಹರಿಸುವ ಬದಲು ಜಿಲ್ಲಾಡಳಿತ ಪೋಲಿಸರ ಮೂಲಕ ದಬ್ಬಾಳಿಕೆ ನಡೆಸಿ, ನಮ್ಮ ಹಕ್ಕು ಕಸಿಯಲು ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಸದನದಲ್ಲಿ ಧರಣಿ ಕುಳಿತರು.

ಈ ಸಂದರ್ಭದಲ್ಲಿ ಆಡಳಿತ ಹಾಗೂ ಪ್ರತಿಪಕ್ಷ ಬಿಜೆಪಿ ಸದಸ್ಯರ ನಡುವೆ ಏರಿದ ದನಿಯಲ್ಲಿ ಮಾತಿನ ಚಕಮಕಿ ನಡೆದು ಸದನ ಗದ್ದಲದಲ್ಲಿ ಮುಳುಗಿದಾಗ ಕಲಾಪವನ್ನು ಮುಂದೂಡಲಾಯಿತು.

# ಹರಿಹರ : ದತ್ತ ಜಯಂತಿ ಆಚರಣೆ

ಹರಿಹರ, ಡಿ.9- ನಗರದ ಜಗದ್ಗುರು ಕೂಡಲಿ ಶೃಂಗೇರಿ ಮಹಾಸಂಸ್ಥಾನದ ಶ್ರೀ ದತ್ತ ಪಾದುಕಾ ಮಂದಿರದಲ್ಲಿ ಶ್ರೀ ದತ್ತ ಜಯಂತಿಯನ್ನು ಇಂದಿನಿಂದ ಇದೇ ದಿನಾಂಕ 16 ರವರಿಗೆ ಆಚರಿಸಲಾಗುತ್ತದೆ ಎಂದು ಉತ್ಸವ ಸಮಿತಿಯ ಗೌರವಾಧ್ಯಕ್ಷ ಡಾ. ನಾರಾಯಣ ಜೋಯಿಸರು ತಿಳಿಸಿದರು.

ದಿನಾಂಕ 16 ರವರಿಗೆ ಪ್ರತಿನಿತ್ಯ ಬೆಳಗ್ಗೆ ಕಾಕಡಾರತಿ, ಸಂಕಲ್ಪ, ಶ್ರೀ ಗುರು ಚರಿತ್ರೆ ಪಾರಾಯಣ, ದತ್ತಾತ್ರೇಯ ಪಾದುಕೆಗೆ ಲಘುನ್ಯಾಸ ಪೂರ್ವಕ ರುದ್ರಾಭಿಷೇಕ, ಸಂಜೆ 8 ರಿಂದ ಭಜನೆ ಮುಂತಾದ ಪೂಜೆಗಳು ನಡೆಯುತ್ತಿವೆ.

14 ರ ಶನಿವಾರ ವಿವಿಧ ಪೂಜಾ ಕಾರ್ಯಕ್ರಮಗಳು ಏರ್ಪಾಡಾಗಿವೆ. ದಿನಾಂಕ 10 ರಂದು ಸಂಜೆ 6-30 ಕ್ಕೆ ದಾವಣಗೆರೆ ಅಜಯ ನಾರಾಯಣ ಇವರಿಂದ ಭಕ್ತಿ ಸಂಗೀತ, 11 ರಂದು ಸಂಜೆ 6-30 ಕ್ಕೆ ಶ್ರೀಮತಿ ಉಮಾ ಭಟ್ ರವರಿಂದ ಭಕ್ತಿ ಸಂಗೀತ, 12 ರಂದು ಸಂಜೆ 6-30 ಕ್ಕೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, 13 ರಂದು ಸಂಜೆ 6-30 ಕ್ಕೆ ಪ್ರದೋಷ ಪೂಜೆ, ನಂತರ ಶ್ರೀ ಗುರು ದತ್ತಾತ್ರೇಯ ಭಕ್ತಿಗೀತೆ ನಡೆಯಲಿದೆ.

ದತ್ತ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ರವೀಂದ್ರ ಮುದ್ರಿ, ಉಪಾಧ್ಯಕ್ಷ ಸುನೀಲ್ ಹವಾಲ್ದಾರ್, ಕಾರ್ಯದರ್ಶಿ ಡಾ ಹರಿಶಂಕರ ಜೋಯಿಸರು, ಕೋಶಾಧ್ಯಕ್ಷ ಶ್ರೀನಿಧಿ ಶರ್ಮ, ದತ್ತ ಭಜನಾ ಮಂಡಳಿ ಅಧ್ಯಕ್ಷೆ ಭಾರತಿ ಬಾಯಿ ಕೊನೇರಿ ಇತರರು ಹಾಜರಿದ್ದರು.

# 13 ರಂದು ಬೆಳಗಾವಿ ಸುವರ್ಣ ಸೌಧಕ್ಕೆ ರೈತ ಸಂಘದಿಂದ ಮುತ್ತಿಗೆ ಹಾಕಿ ಪ್ರತಿಭಟನೆ

ದಾವಣಗೆರೆ, ಡಿ. 9- ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಇದೇ ದಿನಾಂಕ 13 ರಂದು ಬೆಳಿಗ್ಗೆ 10.30ಕ್ಕೆ ಬೆಳಗಾವಿ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸುವುದಾಗಿ ಸಂಘಟನೆಯ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ಧರಾಮಯ್ಯ ಅಧಿಕಾರಕ್ಕೆ ಬಂದಾಗಿನಿಂದಲೂ ರೈತರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸದೇ ಮರೆತಿದ್ದಾರೆ. ರೈತಪರ ಯಾವುದೇ ಕೆಲಸಗಳು ಸಹ ಆಗುತ್ತಿಲ್ಲ. ಆದ ಕಾರಣ ಈ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಹೇಳಿದರು.

ಕೃಷಿ ಕಾಯ್ದೆ ರದ್ದುಗೊಳಿಸಲಿಲ್ಲ. ಇದರಿಂದಾಗಿ 10 ಲಕ್ಷ ರೈತರು ಕೃಷಿ ಭೂಮಿಯಿಂದ ಹೊರಗುಳಿದಿದ್ದಾರೆ. ವಕ್ಫ್ ಬೋರ್ಡ್ ರೈತರ ಪಹಣಿಯಲ್ಲಿ ತರಲಾಗಿದೆ. ವಕ್ಫ್ ಸಂಪೂರ್ಣ ರದ್ದಾಗಿಲ್ಲ. ಹಾವೇರಿಯಲ್ಲಿ ರೈತರ ಪಹಣಿ ತಿದ್ದಿ ವಕ್ಫ್ ಎಂದು ಮಾಡಿ ತಕ್ಷಣವೇ ಆ ಭೂಮಿ ಮೋಕಾಶಿ ಟ್ರಸ್ಟ್‌ಗೆ ವರ್ಗಾವಣೆ ಮಾಡಿ ಖುದ್ದು ಜಿಲ್ಲಾಧಿಕಾರಿ, ಎಸ್ಪಿ, ಎಸಿ ಸ್ಥಳಕ್ಕೆ ಬಂದು ಆ ರೈತರ ಭೂಮಿಯನ್ನು ಜೆಸಿಬಿ ಮೂಲಕ ಇದ್ದ ಬೆಳೆಯನ್ನು ನಾಶಗೊಳಿಸಿ ರೈತರನ್ನು ಭೂಮಿಯಿಂದ ಹೊರಹಾಕಿದ್ದಾರೆ.

> ❛ ರೈತರಲ್ಲಿ ಆತಂಕ ಸೃಷ್ಟಿಸಿದ ವಕ್ಫ್ ಬೋರ್ಡ್ ಆಸ್ತಿ ವಿವಾದ ಉಂಟಾದ ಪ್ರದೇಶದಲ್ಲಿ ಪ್ರವಾಸ ಮಾಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗಿತ್ತು. ಈ ಆದೇಶ ವಾಪಾಸ್ ಪಡೆಯಲಾಗಿದೆ ಎಂದಿದ್ದಾರೆ. ಆದರೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ವಕ್ಫ್ ಬೋರ್ಡ್ ಹೆಸರು ತೆಗೆದು ರೈತರ ಜಮೀನು ಎಂದು ತೋರಿಸುತ್ತಿಲ್ಲ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು.
>
> 
>
> - ಕೋಡಿಹಳ್ಳಿ ಚಂದ್ರಶೇಖರ್, ರಾಜ್ಯಾಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ

ಕಳೆದ 75 ವರ್ಷಗಳಿಂದ ಸುಮಾರು 10 ಲಕ್ಷ ರೈತರು ಬಗರ್ ಹುಕ್ಕುಂ ಮಾಡಿಕೊಂಡು ಬಂದಿದ್ದಾರೆ. ಅವರನ್ನು ಸಕ್ರಮಗೊಳಿಸಬೇಕು. ಅರಣ್ಯ ಇಲಾಖೆ ಕಾಡಿನ ಅಂಚಿನಲ್ಲಿ ಉಳುಮೆ ಮಾಡಿಕೊಂಡಿದ್ದ ರೈತರನ್ನು ಹೊರದೂಡುವ ಕೆಲಸ ಮಾಡಲಾಗುತ್ತಿದೆ. ಕೂಡಲೇ ನಿಲ್ಲಬೇಕು. ಉಚ್ಛ ನ್ಯಾಯಾಲಯ ಮೂರು ಎಕರೆ ಹಂಗಾಮಿ ಮಾಡಿದ್ದರೆ ಹೊರ ಹಾಕಬಾರದು ಎಂದು ತಿಳಿಸಿದೆ. ಸರ್ಕಾರ ಆದೇಶ ಮಾಡಿದೆ. ಆದರೂ ಸಕ್ರಮ ಮಾಡಿಲ್ಲ ಎಂದು ದೂರಿದರು.

ಎಂಎಸ್‌ಪಿ ಶಾಸನಬದ್ಧಗೊಳಿಸಲು ಯಾವುದೇ ತೀರ್ಮಾನವಿಲ್ಲದೇ ಇರುವ ಇವರು, ಕೃಷಿ ಮಾರುಕಟ್ಟೆಯಲ್ಲಿ ವರ್ಷದ ಕೆಲಸದ ಎಲ್ಲಾ ದಿನಗಳಲ್ಲಿ ಖರೀದಿ ಕೇಂದ್ರ ತೆರೆದಿರಬೇಕು. 10 ಸಾವಿರ ಕೋಟಿ ಆವರ್ತ ನಿಧಿ ಸ್ಥಾಪಿಸಿ ಎಲ್ಲಾ ಬೆಳೆ ಖರೀದಿಸಬೇಕೆಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ಕಬ್ಬಿನ ಸಕ್ಕರೆ ಪ್ರಮಾಣವನ್ನು 9.5 ರಿಂದ 10.5 ಕ್ಕೆ ಹೆಚ್ಚುವರಿ ಮಾಡಿ 10 ಕೆಜಿ ಸಕ್ಕರೆ ವಂಚನೆ ಮಾಡಿದೆ. ಇದರಿಂದಾಗಿ ಕಾರ್ಖಾನೆಯವರಿಗೆ ಲಾಭ ಮಾಡಿದಂತಾಗಿದೆ. ಸಕ್ಕರೆ ಪರ್ಸೆಂಟೇಜ್ ನಿರ್ಧಾರ ಮಾಡುವುದು ಕಾರ್ಖಾನೆ ಮಾಲೀಕರು ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೊಡ್ಡ ಕಾರ್ಪೊರೇಟ್ ಕಂಪನಿಗಳನ್ನು ತೆರವು ಮಾಡಿಸುವುದಿಲ್ಲ. ಆದರೆ ರೈತರಿಗೆ ಮಾತ್ರ ತೊಂದರೆ ಕೊಡುತ್ತಿದ್ದು, ಇದು ಖಂಡನೀಯ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಚಿನ್ನಸಮುದ್ರ ಶೇಖರ ನಾಯ್ಕ, ಭಕ್ತರಹಳ್ಳಿ ಭೈರೇಗೌಡ, ಶತಕೋಟಿ ಬಸಪ್ಪ, ವಿಶ್ವನಾಥ್, ನಲ್ಕುದುರೆ ಚನ್ನಬಸಪ್ಪ, ಎನ್. ಬಸವರಾಜ್ ದಾಗಿನಕಟ್ಟೆ ಉಪಸ್ಥಿತರಿದ್ದರು.

# ಟ್ರ್ಯಾಕ್ಟರ್‌ಗಳ ಮೇಲೆ ಕೇಸ್

**(1ನೇ ಪುಟದಿಂದ)** ಕ್ಯಾನ್ಸಲ್ ಆಗಿರುವುದರಿಂದ ಸಣ್ಣ ಸಣ್ಣ ಅಂಗಡಿಗಳು, ತರಕಾರಿ , ಹಣ್ಣಿನ ಅಂಗಡಿಗಳು ತುಂಬಾ ಜಾಸ್ತಿಯಾಗಿರುತ್ತದೆ. ಮಂಡಿಪೇಟೆ ಸುತ್ತಮುತ್ತ ತುಂಬಾ ಅಂಗಡಿಗಳು ಆಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ.

ನಿಷೇಧಿತ ಪ್ರದೇಶದಲ್ಲಿ ವಾಹನ ನಿಲುಗಡೆ ಮಾಡಿದರೆ, ಪೊಲೀಸರು ದಂಡ ವಿಧಿಸಿ, ಸಿ.ಸಿ.ಟಿವಿ ಕ್ಯಾಮೆರಾಗಳ ಮೂಲಕ ದಂಡದ ನೋಟಿಸ್ ಕೂಡ ವಾಹನ ಮಾಲೀಕರಿಗೆ ರವಾನೆಯಾಗುತ್ತಿದೆ. ಬಸ್ ಸರ್ವಿಸ್ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು, ಆಟೋ, ಟ್ಯಾಕ್ಸಿಗಳು ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುವುದರಿಂದ ವಾಹನ ಸವಾರರು ಪಾದಚಾರಿಗಳು ಸುಗಮವಾಗಿ ಓಡಾಡಲು ಕಿರಿಕಿರಿ ಉಂಟಾಗುತ್ತಿದೆ.

ಆಟೋಗಳಲ್ಲಿ ಹೆಚ್ಚು ಜನರನ್ನು ಕರೆದು ಕೊಂಡು ಹೋಗುತ್ತಿದ್ದಾರೆ, ಕೂಡಲೇ ಅವರಿಗೆ ದಂಡ ವಿಧಿಸಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕ್ರಮಕೈಗೊಳ್ಳಬೇಕು. ಸಿಗ್ನಲ್ ಜಂಪ್ ಮಾಡುತ್ತಿರುವ ವಾಹನ ಸವಾರರ ಮೇಲೆ ಕಾನೂನು ಕ್ರಮ ಮಾಡದ ಪೊಲೀಸರಿಗೆ ಎಚ್ಚರಿಕೆ ನೀಡಿದರು.

ಮಹಾನಗರ ಪಾಲಿಕೆ ವ್ಯಾಪ್ತಿಯ ಅಕ್ತರ್‌ರಜ್ಹಾ ಸರ್ಕಲ್‌ನಿಂದ ಬಾಡಾ ಕ್ರಾಸ್‌ವರೆಗೆ ವರ್ತುಲ ರಸ್ತೆ ಕಾಮಾಗಾರಿಯನ್ನು ಮಾಡುವುದರಿಂದ ನಗರದ ಹೊರವಲಯದಲ್ಲಿ ಭಾರಿ ವಾಹನಗಳು ಸಂಚಾರ ಮಾಡುವುದರಿಂದ ನಗರದಲ್ಲಿನ ಹಗಲು ವೇಳೆ ವಾಣಿಜ್ಯ ಸಂಕೀರ್ಣಗಳು ಇರುವ ರಸ್ತೆಗಳ ಸಂಚಾರ ದಟ್ಟಣೆಯನ್ನು ಕಡಿತಗೊಳಿಸಿದಂತಾಗುತ್ತದೆ. ಮಂಡಿಪೇಟೆಯಲ್ಲಿ ತರಕಾರಿಯವರು ತುಂಬಾ ಕಸವನ್ನು ಜಾಸ್ತಿ ಮಾಡುತ್ತಿದ್ದು, ಕಸ ತೆಗೆಯಲು ತುಂಬಾ ಕಷ್ಟವಾಗಿರುತ್ತದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ಅವರು ತಿಳಿಸಿದರು.

ಬಾಡಾ ಕ್ರಾಸ್, ಮಾಗಾನಹಳ್ಳಿ ಕ್ರಾಸ್, ಮಹಾನಗರಪಾಲಿಕೆ, ತರಳಬಾಳು ಶಾಲೆ, ಎಸ್ ಎಸ್.ಆಸ್ಪತ್ರೆಯ ಹತ್ತಿರ ಬೀದಿ ದೀಪದ ಬೆಳಕು ಕೂಡ ಇರುವುದಿಲ್ಲ ಹಾಗೂ ನಾಯಿಗಳು ನಗರದಲ್ಲಿ ತುಂಬಾ ಜನರಿಗೆ ಕಚ್ಚುತ್ತಿವೆ, ಅವುಗಳನ್ನು ಸೂಕ್ತ ಜಾಗದಲ್ಲಿ ಇರಿಸಬೇಕು ಎಂದು ಪಾಲಿಕೆಯ ಸ್ಥಾಯಿ ಸಮಿತಿಯ ಸದಸ್ಯರು ತಿಳಿಸಿದರು.

ಪಾಲಿಕೆಯ ಮಹಾಪೌರರಾದ ಕೆ ಚಮನ್ ಸಾಬ್, ಉಪಮಹಾಪೌರರಾದ ಸೋಗಿ ಶಾಂತಕುಮಾರ್, ಹೆಚ್ಚುವರಿ ಪೊಲೀಸ್ ಅಧಿಕಾರಿ ವಿಜಯಕುಮಾರ್ ಎಂ. ಸಂತೋಷ್, ಮಂಜುನಾಥ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್, ಆರ್.ಟಿ.ಓ ಅಧಿಕಾರಿ ಪ್ರಮುತೇಶ್, ಪಾಲಿಕೆ ವಿರೋಧ ಪಕ್ಷದ ನಾಯಕರಾದ ಪ್ರಸನ್ನಕುಮಾರ್, ಸ್ಥಾಯಿ ಸಮಿತಿ ಸದಸ್ಯರು ಹಾಗೂ ಉಪಸ್ಥಿತರಿದ್ದರು.

# ದೆಹಲಿ ಜಾಗತಿಕ ಸಮ್ಮೇಳನಕ್ಕೆ ಡಾ. ಗಣೇಶ್ ಎನ್.ವೈ.ಪೂಜಾರಯ್ಯ



ದಾವಣಗೆರೆ, ಡಿ. 9- ದೆಹಲಿಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ನಡೆಸುತ್ತಿರುವ 2023-24ನೇ ಸಾಲಿನ ಜಾಗತಿಕ ಸಮ್ಮೇಳನಕ್ಕೆ ನಗರದ ಮನಶಾಸ್ತ್ರಜ್ಞರು, ಲೇಖಕರು, ಜೆಐಟಿ ಸಹ ಪ್ರಾಧ್ಯಾಪಕರೂ ಆದ ಡಾ. ಗಣೇಶ್ ಎನ್. ವೈ.ಪೂಜಾರಯ್ಯ ಇವರನ್ನು ಆಹ್ವಾನಿಸಿದೆ.

5 ವರ್ಷಗಳಿಂದ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಸದಸ್ಯರು ಹಾಗೂ ಸಲಹೆಗಾರರಾಗಿ ಸಲ್ಲಿಸುತ್ತಿದ್ದ ಸೇವೆ ಪರಿಗಣಿಸಿ, ಇವರನ್ನು ಗೌರವಿಸಲಾಗಿದ್ದ ಪ್ರಕಾಶ್‌ಗೆ ದೆಹಲಿಯ ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ಇದೇ 14ರ ಶನಿವಾರ ಕಾರ್ಯಕ್ರಮ ನಡೆಯಲಿದೆ.

# ಹರಿಹರದಲ್ಲಿ ಪೌರ ಕಾರ್ಮಿಕರಿಗೆ ಸುರಕ್ಷಾ ವಸ್ತುಗಳ ವಿತರಣೆ



ಹರಿಹರ, ಡಿ. 9 - ನಗರದ ಪೌರ ಕಾರ್ಮಿಕರಿಗೆ ಸುರಕ್ಷಾ ವಸ್ತುಗಳನ್ನು ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಸದಸ್ಯ ಪಿ.ಎನ್. ವಿರುಪಾಕ್ಷ, ನಾಗರತ್ನ, ಅಬ್ದುಲ್ ಅಲಿಂ ವಿತರಣೆ ಮಾಡಿದರು.

ಈ ವೇಳೆ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಮಾತನಾಡಿ ಪೌರ ಕಾರ್ಮಿಕರು ತಮ್ಮ ಜೀವದ ಹಂಗು ತೋರೆದು ನಗರದ ಸ್ವಚ್ಚತೆ ಕೆಲಸವನ್ನು ಮಾಡುತ್ತಾರೆ.

ಅವರಿಗೆ ಯಾವುದೇ ರೀತಿಯ ತೊಂದರೆ ಬರದಂತೆ ರಕ್ಷಣೆ ಮಾಡವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಆದ್ದರಿಂದ ಪೌರ ಕಾರ್ಮಿಕ ಸ್ಥಿತಿಗತಿಗಳನ್ನು ಅರಿತು 24.10 ಹಾಗೂ 7.25 ಯೋಜನೆ ಅಡಿಯಲ್ಲಿ ಸುಮಾರು 8 ಲಕ್ಷ ರೂಪಾಯಿ ವೆಚ್ಚದಲ್ಲಿ ಪೌರ ಕಾರ್ಮಿಕರಿಗೆ ಕಿಟ್ ವಿತರಣೆ ಮಾಡಲಾಗಿತ್ತು. ಅದರಲ್ಲಿ ಸುಮಾರು 18 ಪೌರ ಕಾರ್ಮಿಕರಿಗೆ ಕೊರತೆ ಬಿದ್ದ ಪರಿಣಾಮ ಪೂನಹ 3 ಲಕ್ಷ ರೂಪಾಯಿ ವೆಚ್ಚವನ್ನು ಬಿಡುಗಡೆ ಮಾಡಿಸಿಕೊಂಡು ಒಟ್ಟು 11 ಲಕ್ಷ ರೂಪಾಯಿ ವೆಚ್ಚದಲ್ಲಿ ಸಮವಸ್ತ್ರ, ಮಾಸ್ಕ್,ಹ್ಯಾಂಡ್ ಬ್ಲೂಸ್, ಹೆಲ್ಮೆಟ್ ವಿತರಣೆ ಮಾಡಲಾಗಿರುತ್ತದೆ. ಇದನ್ನು ಪಡೆದುಕೊಂಡ ಕಾರ್ಮಿಕರು ಪಡೆದ ನಂತರ ಮನೆಯಲ್ಲಿ ಇಟ್ಟು ಕೆಲಸವನ್ನು ಮಾಡುವುದನ್ನು ಬಿಟ್ಟು ಪ್ರತಿನಿತ್ಯ ಬಳಕೆ ಮಾಡುವಂತೆ ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಪಿ.ಎನ್. ವಿರುಪಾಕ್ಷಪ್ಪ, ನಾಗರತ್ನ, ಅಬ್ದುಲ್ ಅಲಿಂ, ಮುಖಂಡ ಮಾರುತಿ ಬೇಡರ್, ಯೋಜನೆ ಅಧಿಕಾರಿ ಜಗದೀಶ್, ಪೌರ ಕಾರ್ಮಿಕರು, ಇತರರು ಹಾಜರಿದ್ದರು.

# ಶ್ರೀ ಮಹಾಗಣಪತಿ, ವೀರಭದ್ರೇಶ್ವರ ಕಾರ್ತಿಕೋತ್ಸವ



ದಾವಣಗೆರೆಯ ಶಾಮನೂರು ರಸ್ತೆಯಲ್ಲಿರುವ ಶ್ರೀ ಮಹಾಗಣಪತಿ ಮತ್ತು ವೀರಭದ್ರೇಶ್ವರ ಸ್ವಾಮಿಯ ಕಡೆ ಕಾರ್ತಿಕೋತ್ಸವವು ಇಂದು ಸಂಜೆ 8ಕ್ಕೆ ನೆರವೇರಲಿದೆ. ಸ್ವಾಮಿಗೆ ವಿಶೇಷ ಬಾಳೆ ದಿಂಡಿನ ಅಲಂಕಾರ ಮಾಡಲಾಗುವುದು ಎಂದು ಪ್ರಧಾನ ಅರ್ಚಕ ವೀರಯ್ಯ ಶಾಸ್ತ್ರಿ ತಿಳಿಸಿದ್ದಾರೆ.

# ಕೊಡದಗುಡ್ಡದ ವೀರಭದ್ರೇಶ್ವರ ಕಾರ್ತಿಕೋತ್ಸವ

ಜಗಳೂರು ತಾಲ್ಲೂಕಿನ ಕೊಡದಗುಡ್ಡದ ಶ್ರೀ ವೀರಭದ್ರ ಸ್ವಾಮಿ ಕಾರ್ತಿಕೋತ್ಸವವು ಇದೇ ದಿನಾಂಕ 17ರ ಮಂಗಳವಾರ ನಡೆಯಲಿದ್ದು, ಈ ಪ್ರಯುಕ್ತ ವಿವಿಧ ಪೂಜಾ ಕಾರ್ಯಕ್ರಮಗಳು ಆರಂಭಗೊಂಡಿವೆ.

ಇಂದು ಕುದುರೆ ಪೂಜೆ ಜರುಗಲಿದ್ದು, ದಿನಾಂಕ 17ರ ಮಂಗಳಾರ ಬಸವನ ಪೂಜೆ, ರಾತ್ರಿ 7.30 ರಿಂದ 11ರವರೆಗೆ ಬೆಳ್ಳಿ ಪಲ್ಲಕ್ಕಿ ಮಹೋತ್ಸವ ನಡೆಯಲಿದೆ.

# ಒಲಂಪಿಯನ್ಸ್ ಸೃಷ್ಟಿ ಮಾಡುವಂಥ ಕ್ರೀಡಾ ಅಕಾಡೆಮಿ ದಾವಣಗೆರೆಯಲ್ಲಿ ಸ್ಥಾಪನೆಯಾಗಲಿ : ಜೆ.ಬಿ. ವಿನಯ್



ದಾವಣಗೆರೆ, ಡಿ. 8 - ಪ್ರಕಾಶ್ ಪಡುಕೋಣೆ, ದ್ರಾವಿಡ್ ಕ್ರೀಡಾ ಅಕಾಡೆಮಿಯಂತೆಯೇ ದಾವಣಗೆರೆಯಲ್ಲಿಯೂ ಒಲಂಪಿಯನ್ಸ್‌ನ ಸೃಷ್ಟಿ ಮಾಡುವಂಥ ಕ್ರೀಡಾ ಅಕಾಡೆಮಿ ಸ್ಥಾಪನೆಯಾಗಬೇಕಾದ ಅವಶ್ಯಕತೆ ಇದೆ ಎಂದು ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ, ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಪ್ರತಿಪಾದಿಸಿದರು.

ನಗರದ ನೇತಾಜಿ ಸುಭಾಷ್ ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 5ನೇ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಸ್ಪರ್ಧೆ-2024ರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರು, ಸಂಸದರು ಕ್ರೀಡಾ ಅಕಾಡೆಮಿ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳುತ್ತಾರೆ ಎಂದು ಭಾವಿಸುತ್ತೇನೆ ಎಂದವರು ಹೇಳಿದರು.

ರಾಷ್ಟ್ರೀಯ ಮಟ್ಟದಲ್ಲಿ ಸ್ಟೆರಾಯ್ಡ್ ಸೇರಿದಂತೆ ಇನ್ನಿತರೆ ಉದ್ದೀಪನ ವಸ್ತುಗಳನ್ನು ಸೇವಿಸಿ ಕ್ರೀಡಾ ಪಟುಗಳು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವುದನ್ನು ನೋಡಿದ್ದೇವೆ. ಸಹಜವಾಗಿ ಸ್ಪರ್ಧಾಳುಗಳ ಪಾಲ್ಗೊಳ್ಳುವಿಕೆ ಉತ್ತಮ ಬೆಳವಣಿಗೆ. ದೇಹದಾರ್ಢ್ಯ ಹಾಗೂ ಕರಾಟೆಯಂತಹ ಸ್ಪರ್ಧೆಗಳು ಹೆಚ್ಚಾಗಿ ನಡೆಯಬೇಕು. ಕ್ರೀಡಾ ಪಟುಗಳು ಪ್ರತಿಯೊಂದು ಮನೆಯಿಂದಲೂ ಹೊರ ಬರಬೇಕಿದೆ ಎಂದು ಆಶಿಸಿದರು.

ಸಾವಿರಾರು, ಲಕ್ಷಾಂತರ ವಿದ್ಯಾರ್ಥಿಗಳು ಕರಾಟೆ ಅಭ್ಯಸಿಸಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ದಾವಣಗೆರೆಯಲ್ಲಿ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಸ್ಪರ್ಧೆ ನಡೆಸಲಾಗುತ್ತಿದೆ. ಇದು ದೇಶದ ಮೂಲೆ ಮೂಲೆಯನ್ನೂ ತಲುಪುವಂತಾಗಲಿ ಎಂದು ವಿನಯ್ ಕುಮಾರ್ ಹಾರೈಸಿದರು.

ಪೋಷಕರು ಮಕ್ಕಳಿಗೆ ಕೇವಲ ಓದಿನಲ್ಲಿ ಮುಳುಗಬೇಕು, ನೀಟ್, ಸಿಇಟಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮಕ್ಕಳು ಹೆಚ್ಚು ತೊಡಗಿಸಿಕೊಳ್ಳಬೇಕು ಎಂಬ ಉದ್ದೇಶದ ಜೊತೆಗೆ ಕರಾಟೆ, ದೇಹದಾರ್ಢ್ಯ, ಕಬಡ್ಡಿ, ಸಂಗೀತ ಸೇರಿದಂತೆ ಕ್ರೀಡಾ ಚಟುವಟಿಕೆಗಳಲ್ಲಿಯೂ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಿ. ಇದು ಜೀವನದ ಅವಿಭಾಜ್ಯ ಅಂಗ. ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಿ. ಕೇವಲ ಪುಸ್ತಕ ಓದಿನ ಹುಳುಗಳಂತೆ ಮಾಡಬೇಡಿ ಎಂದು ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಕರಾಟೆ ಸ್ಪರ್ಧೆ ಆಯೋಜಕ ರೆನ್ಸಿ ಹೆಚ್. ಮಲ್ಲಿಕಾರ್ಜುನ್, ಹೆಚ್.ಎಂ. ಕಾರ್ತಿಕ್, ಚನ್ನಕೇಶವ, ಲೋಹಿತ್ ಕುಮಾರ್, ಸಿದ್ದೇಶ್, ರಘು, ಸುಭಾಷ್ ಹೆಚ್.ಪಿ. ಕರಾಟೆ ತರಬೇತುದಾರರು ಹಾಜರಿದ್ದರು.

# ನಿದ್ದೆಗೆ ಜಾರಿದ ಆಡಳಿತ ಯಂತ್ರ

**(1ನೇ ಪುಟದಿಂದ)** ಗುರುವಾರ ಮಾತ್ರ ವಿಧಾನಸೌಧಕ್ಕೆ ಆಗಮಿಸುತ್ತಿದ್ದು, ಇದು ಗುರುವಾರದ ಸರ್ಕಾರವಾಗಿದೆ, ಆಡಳಿತ ಚುಕ್ಕಾಣಿ ಹಿಡಿದಾಗ ಧರ್ಮ ದರ್ಶನ, ಜನಸಂಪರ್ಕ ಕಾರ್ಯಕ್ರಮಗಳನ್ನು ಮಾಡುವುದಾಗಿ ಹೇಳಿದ್ದ ಸರ್ಕಾರ ಮಾತು ಮರೆತು ಹಣ ಮಾಡುವುದರಲ್ಲಿ ನಿರತವಾಗಿದೆ ಎಂದರು. ಅಭಿವೃದ್ಧಿಗೆ ಏನು ಕಾರ್ಯಕ್ರಮ ನೀಡಿದೆ, ಉತ್ತರ ಕರ್ನಾಟಕವನ್ನು ಚಿನ್ನದ ನಾಡು ಮಾಡುತ್ತೇವೆ ಎಂದವರು ಎಲ್ಲಿ ಹೋದರು ? ಎಂದು ಪ್ರಶ್ನಿಸಿದರು.

## ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ.

**ಅಸಲು ದಾವಾ ಸಂಖ್ಯೆ : 31/2021**

ವಾದಿಗಳು : ತಿರುಕವ್ವ ಯಾನೇ ಸುಶೀಲಮ್ಮ ಮತ್ತು ಇತರರು - ವಿರುದ್ಧ
ಪ್ರತಿವಾದಿ : ಸಿದ್ದಪ್ಪ, ಪೌತಿ ವಾರಸುದಾರರು ಶ್ರೀಮತಿ ಬಂದಮ್ಮ ಮತ್ತು ಇತರರು
ನೋಟಿಸ್‌ದಾರರು ಪ್ರತಿವಾದಿ ನಂ. 1/:1 (ಬಿ) ರಾಜು.ಎಸ್. ಬಿನ್ ಲೇಟ್ ಟಿ.ಸಿ. ಸಿದ್ದಪ್ಪ, ವಯಸ್ಸು ಸುಮಾರು 39 ವರ್ಷ, ತರಗಾರ ಕೆಲಸ, 1 (ಸಿ) ಮಂಜುನಾಥ. ಎಸ್. ಬಿನ್ ಲೇಟ್ ಟಿ.ಸಿ.ಸಿದ್ದಪ್ಪ, ವಯಸ್ಸು ಸುಮಾರು 35 ವರ್ಷ, ವ್ಯಾಪಾರ, 1(ಡಿ) ಕೃಷ್ಣಮೂರ್ತಿ. ಎಸ್. ಬಿನ್ ಲೇಟ್ ಟಿ.ಸಿ.ಸಿದ್ದಪ್ಪ, ವಯಸ್ಸು ಸುಮಾರು 31 ವರ್ಷ, ವ್ಯಾಪಾರ, ಎಲ್ಲರ ವಾಸ : 1ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಜೆ.ಸಿ.ಬಡಾವಣೆ, ಹರಿಹರ ಸಿಟಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ಪ್ರತಿವಾದಿ ನಂ.1(ಬಿ) 1(ಸಿ), 1(ಡಿ) ರವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು**

ಮೇಲ್ಕಂಡ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಪಾಲು ವಿಭಾಗ ಹಾಗೂ ಪ್ರತ್ಯೇಕ ಸ್ವಾಧೀನತೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಪ್ರತಿವಾದಿ ನಂ.1(ಬಿ), 1(ಸಿ), 1(ಡಿ) ರವರಾಗಿದ್ದು, ಮಾನ್ಯ ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ 24.01.2025 ರಂದು ಬೆಳಗ್ಗೆ 11-00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 27.11.2024 ರಂದು ಕೊಡಲ್ಪಟ್ಟಿದೆ.

**ಸಹಿ/- ವಾದಿಯ ಪರ ವಕೀಲರು**
**(ಕೆ.ಹೆಚ್. ಧನಂಜಯ)**
**ದಾವಣಗೆರೆ**
**ಸ್ಥಳ : ಹರಿಹರ, ದಿನಾಂಕ :26.11.2024**

**ನ್ಯಾಯಾಲಯದ ಆದೇಶದ ಮೇರೆಗೆ,**
**ಸಹಿ /- ಶಿರಸ್ತೇದಾರರು**
**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ.**

## ಗೌರವಾನ್ವಿತ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.

**ಸಿಆರ್ ಮಿಸ್ ನಂ. 1395/2024**

ಅರ್ಜಿದಾರರು : ಶ್ರೀಮತಿ ರುದ್ರಮ್ಮ ಬಿನ್. ಹನುಮಂತಪ್ಪ, ಕೋಂ. ಲೇಟ್ ತಿಪ್ಪಣ್ಣ. ವಯಸ್ಸು 84 ವರ್ಷ, ಕೆಲಸ: ಗೃಹಿಣಿ, ಮತ್ತಿ ಗ್ರಾಮ, ಮತ್ತಿ ಪೋಸ್ಟ್, ದಾವಣಗೆರೆ ತಾ॥

-: ವಿರುದ್ಧ :-

ಎದುರುದಾರರು:1) ಮಾನ್ಯ ತಹಶೀಲ್ದಾರರು, ಜನನ-ಮರಣ ನೋಂದಣಾಧಿಕಾರಿಗಳ ಕಛೇರಿ, ದಾವಣಗೆರೆ ತಾಲ್ಲೂಕು, ದಾವಣಗೆರೆ. 2) ಶ್ರೀಮತಿ ಮಹದೇವಮ್ಮ ಕೋಂ, ಲೇಟ್ ಹನುಮಂತಪ್ಪ, ವಯಸ್ಸು 81 ವರ್ಷ, ಕೆಲಸ: ಗೃಹಿಣಿ, ಮತ್ತಿ ಗ್ರಾಮ, ಮತ್ತಿ ಪೋಸ್ಟ್, ದಾವಣಗರ ತಾ॥ 3) ಶ್ರೀಮತಿ. ಸುನಂದಮ್ಮ ಬಿನ್. ಹನುಮಂತಪ್ಪ, ಕೋಂ. ಮುರುಗೇಂದ್ರಪ್ಪ, ವಯಸ್ಸು 44 ವರ್ಷ, ಕೆಲಸ: ಕೂಲಿ, ಈಚಲನಾಗೇನಹಳ್ಳಿ ಗ್ರಾಮ, ಚಿತ್ರದುರ್ಗ ತಾ॥. 4) ಶ್ರೀಮತಿ ರೇಖಾ ಹೆಚ್. ಬಿನ್.ಹನುಮಂತಪ್ಪ, ಕೋಂ. ರಾಜಪ್ಪ, ವಯಸ್ಸು 42 ವರ್ಷ, ಕೆಲಸ: ಕೂಲಿ, ಅಣಬೇರು ಗ್ರಾಮ, ದಾವಣಗೆರೆ ತಾ॥. 5). ಶ್ರೀಮತಿ ಲಕ್ಷ್ಮೀ ಬಿನ್. ಹನುಮಂತಪ್ಪ, ಕೋಂ. ಲೇಟ್ ರುದ್ರಪ್ಪ, ವಯಸ್ಸು 40 ವರ್ಷ, ಕೆಲಸ: ಕೂಲಿ, ಬಾಡ ಗ್ರಾಮ, ದಾವಣಗೆರೆ ತಾ॥ 6). ಶ್ರೀ ಬಸವರಾಜ ಬಿನ್. ಹನುಮಂತಪ್ಪ, ವಯಸ್ಸು 39 ವರ್ಷ, ಕೆಲಸ: ವ್ಯವಸಾಯ, ಮತ್ತಿ ಗ್ರಾಮ, ಮತ್ತಿ ಪೋಸ್ಟ್, ದಾವಣಗೆರೆ ತಾ॥. 7) ಶ್ರೀಮತಿ ಹಾಲಮ್ಮ ಬಿನ್, ಹನುಮಂತಪ್ಪ, ಕೋಂ. ಮಾರಪ್ಪ, ವಯಸ್ಸು 37 ವರ್ಷ, ಕೆಲಸ: ಕೂಲಿ, ಮತ್ತೆ ಗ್ರಾಮ, ಮತ್ತೆ ಪೋಸ್ಟ್, ದಾವಣಗೆರೆ ತಾ॥

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು**

ಅರ್ಜಿದಾರರ ತಂದೆ, 2ನೇ ಎದುರುದಾರರ ಗಂಡ ಹಾಗೂ 3 ರಿಂದ 7ನೇ ಎದುರುದಾರರ ತಂದೆಯವರಾದ ಶ್ರೀ ಹನುಮಂತಪ್ಪ ಬಿನ್ ಹಾಲಮ್ಮ ಇವರು ದಿನಾಂಕ: 18.07.1997ರಂದು ದಾವಣಗೆರೆ ತಾಲ್ಲೂಕು ಮತ್ತಿ ಗ್ರಾಮದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ತನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮಾನ್ಯ ಘನ ನ್ಯಾಯಾಲಯದಲ್ಲಿ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ: 17. 01. 25 ರಂದು ಬೆಳ್ಳಿಗ್ಗೆ 11-00 ಗಂಟೆಗೆ ನೀವು ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾವುಗುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ: 06 . 12. 2024 ರಂದು ಕೊಡಲ್ಪಟ್ಟಿದೆ.

**ಸಹಿ/- ಅರ್ಜಿದಾರರ ಪರ ವಕೀಲರು**
**(ಶ್ರೀ ತುಕಾರಾಮಪ್ಪ ಅರಣ)**
**ನ್ಯಾಯವಾದಿಗಳು**

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು,**
**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.**

## ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ಕಾರ್ತೀಕೋತ್ಸವ



ದಾವಣಗೆರೆ, ಡಿ.9- ಸ್ಥಳೀಯ ತರಳಬಾಳು ಬಡಾವಣೆಯಲ್ಲಿನ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿ ಶ್ರೀ ವಿಶ್ವಬಂಧು ಮರುಳಸಿದ್ದರ ದೇವಸ್ಥಾನದಲ್ಲಿ ಇಂದು ಸಂಜೆ ಏರ್ಪಾಡಾಗಿದ್ದ ಕಾರ್ತಿಕ ಮಹೋತ್ಸವಕ್ಕೆ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಚಾಲನೆ ನೀಡಿದರು.

ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಕನ್ನಡ ಸಾಹಿತ್ ಪರಿಷತ್ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ, ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ ಗೌಡ್ರು, ರಾಮಗೊಂಡನಹಳ್ಳಿ ದಯಾನಂದ್, ಲೋಕಿಕೆರೆ ಕೆಂಚಪ್ಪ, ಮಹೇಶ್ವರಯ್ಯ, ಆನೆಕೊಂಡದ ರೇವಣಸಿದ್ದಪ್ಪ, ಎ.ಪರಮೇಶ್ವರಪ್ಪ, ಡಿ.ಜಿ. ಸುಭಾಷ್, ಶ್ರೀಮತಿ ಉಜ್ವಲ ಸುಭಾಷ್, ಸಿದ್ಧನೂರು ಮಹೇಶ್ವರಯ್ಯ, ಎನ್.ಜಿ. ಪುಟ್ಟಸ್ವಾಮಿ, ನಾಗಪ್ಪ ಮೇಷ್ಟ್ರು, ಕಂದಗಲ್ಲು ಬಸವರಾಜಪ್ಪ, ಹೆಬ್ಬಾಳು ಮಹೇಶ್ವರಪ್ಪ, ಎಸ್.ಪಿ. ಪೂಜಾರ್, ಶ್ರೀಮತಿ ಮಂಜುಳಾ ಪ್ರೊ. ಚಂದ್ರಪ್ಪ, ಪಿ.ಆರ್. ಶಂಕ್ರಪ್ಪ, ರವಿಕುಮಾರ್, ಲಿಂಗರಾಜ್ ಆನೆಕೊಂಡ, ಎಂ.ಆರ್ .ಮಹಾದೇವಪ್ಪ, ಷಡಾಕ್ಷರಯ್ಯ, ನಾರಾಯಣ ರಜಪೂತ್ ಮತ್ತು ಇತರರು ಈ ಸಂದರ್ಭದಲ್ಲಿದ್ದರು.

### ನಗರದಲ್ಲಿ ಇಂದು ಚೌಡೇಶ್ವರಿ ಕಾರ್ತಿಕ

ಪಿ.ಜೆ. ಬಡಾವಣೆಯ 6 ನೇ ಮೇನ್, 6 ನೇ ಕ್ರಾಸ್ ಸೇಂಟ್ ಪಾಲ್ಸ್ ಕಾನ್ವೆಂಟ್ ಶಾಲೆ ಹತ್ತಿರದ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನದಲ್ಲಿ ಸೇವಾ ಸಮಿತಿ ವತಿಯಿಂದ ಇಂದು ಸಂಜೆ 7 ಗಂಟೆಗೆ ಶ್ರೀ ಚೌಡೇಶ್ವರಿ ದೇವಿಯ ಕಾರ್ತಿಕೋತ್ಸವ ಜರುಗಲಿದೆ.

# ಶಿಲ್ಪಕಲೆಗೆ ಉದ್ಯಮದ ರೂಪ ನೀಡುವ ಅಗತ್ಯವಿದೆ

## ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಪ್ರೊ.ಕುಂಬಾರ



ದಾವಣಗೆರೆ, ಡಿ.9- ಚಿತ್ರಕಲೆ ಮತ್ತು ಶಿಲ್ಪಕಲೆ ಸೇರಿ ಒಟ್ಟಾರೆ ಕಲೆಯ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಕೈಗಾರೀಕರಣ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಎಲ್ಲ ಕಲಾವಿದರು ಆಲೋಚಿಸಬೇಕು ಎಂದು ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಸೋಮವಾರ ಕಾಲೇಜಿನ ವಜ್ರ ಮಹೋತ್ಸವದ ಅಂಗವಾಗಿ 2007ನೇ ಸಾಲಿನ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಎಲ್ಲ ಕ್ಷೇತ್ರಗಳೂ ಆರ್ಥಿಕ ಸ್ವರೂಪ ಪಡೆಯುತ್ತಿರುವ ಇಂದಿನ ಯುಗದಲ್ಲಿ ಕಲಾ ವಿದ್ಯಾರ್ಥಿಗಳು ಹಾಗೂ ಕಲಾವಿದರು ಚಿತ್ರಕಲೆ ಮತ್ತು ಶಿಲ್ಪ ಕಲೆಗೆ ಉದ್ಯಮದ ರೂಪ ನೀಡುವ ಅಗತ್ಯವಿದೆ ಎಂದು ಹೇಳಿದರು.

ಇಂದು ಜಗತ್ತು ತಂತ್ರಜ್ಞಾನದ ಬಲದಲ್ಲಿ ಮುನ್ನಡೆಯುತ್ತಿದೆ. ಕಾರಣ, ಕಲೆಗೆ ಕೈಗಾರಿಕೆಯ ಅಥವಾ ಉದ್ಯಮದ ಸ್ವರೂಪ ನೀಡುವಾಗ ತಂತ್ರಜ್ಞಾನಕ್ಕೂ ಆದ್ಯತೆ ನೀಡಬೇಕು. ತಂತ್ರಜ್ಞಾನ ಸಮ್ಮಿಳಿತವಾಗಿದ್ದರೆ ನಿಮ್ಮ ಉದ್ಯಮವನ್ನು ಜನ ನಂಬುತ್ತಾರೆ. ತಂತ್ರಜ್ಞಾನ ಜತೆಗಿದ್ದರೆ ಕಲಾ ಪ್ರೋತ್ಸಾಹಕರು ನಿಮ್ಮ ಕಲಾಕೃತಿಗಳನ್ನು ಖರೀದಿಸಲು ಮುಂದೆ ಬರುತ್ತಾರೆ. ಕಾರಣ ಕಲೆಯ ಅಧ್ಯಯನದ ಜತೆ ಜತೆಗೆ ತಂತ್ರಜ್ಞಾನದ ಕಲಿಕೆ ಮತ್ತು ಅಳವಡಿಗೆಯತ್ತ ವಿದ್ಯಾರ್ಥಿಗಳು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಕಾಲೇಜಿನ ವಜ್ರ ಮಹೋತ್ಸವದ ಅಂಗವಾಗಿ ವರ್ಷ ಪೂರ್ತಿ ನಾನಾ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಿದಂತೆ ವರ್ಷ ಪೂರೈಸಲು ಇನ್ನು ನಾಲ್ಕು ತಿಂಗಳು ಮಾತ್ರ ಬಾಕಿ ಇವೆ. ಈ ಅವಧಿಯಲ್ಲಿ ಕಾಲೇಜಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಇದುವರೆಗಿನ ಎಲ್ಲ ಬ್ಯಾಚ್‌ಗಳ ವಿದ್ಯಾರ್ಥಿಗಳಿಗೆ ಅವಕಾಶ ನೀಡಬೇಕು. ಈ ಸಂಬಂಧ ಹಿರಿಯ ವಿದ್ಯಾರ್ಥಿಗಳಿಗೆ ಕಾಲೇಜು ಅಧ್ಯಾಪಕರು ಹಾಗೂ ಸಿಬ್ಬಂದಿ ಸಂದೇಶ ರವಾನಿಸಬೇಕು. ಕೊನೆಗೆ ಯಾರೊಬ್ಬರೂ ಬಂದು ನಮಗೆ ಅವಕಾಶ ನೀಡಲಿಲ್ಲ ಎಂದು ದೂರಬಾರದು ಎಂದು ಹೇಳಿದರು.

ವೇದಿಕೆ ಕಾರ್ಯಕ್ರಮ ಆರಂಭಕ್ಕೂ ಮುನ್ನ 2003ರಲ್ಲಿ ಕಲಾ ಕಾಲೇಜಿನ ವಿದ್ಯಾರ್ಥಿ ಇಂದ್ರಕುಮಾರ್ ನಿರ್ಮಿಸಿದ್ದ ಸರಸ್ವತಿ ಪ್ರತಿಮೆಗೆ ಕುಲಪತಿ ಹಾಗೂ ಅತಿಥಿಗಳು ಪುಷ್ಪ ಅರ್ಪಿಸಿದರು. ಬಳಿಕ 2006ರಲ್ಲಿ ಕಾಲೇಜಿನ ವಿದ್ಯಾರ್ಥಿಗಳೇ ಸ್ವಂತ ಖರ್ಚಿನಲ್ಲಿ ನಿರ್ಮಿಸಿರುವ ಜಿರಾಫೆ ಪ್ರತಿರೂಪಗಳ ಕಂಚಿನ ಪ್ರತಿಮೆಯನ್ನು ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅನಾವರಣಗೊಳಿಸಿದರು.

ವೇದಿಕೆ ಕಾರ್ಯಕ್ರಮದ ಬಳಿಕ 2007ನೇ ಸಾಲಿನ ವಿದ್ಯಾರ್ಥಿಗಳಿಂದ ಬ್ರಾಂಡಿಂಗ್ ಮತ್ತು ಡಿಜಿಟಲ್ ಮಾರ್ಕೆಟಿಂಗ್, ಯುಐ/ಯುಎಕ್ಸ್ ಡಿಸೈನಿಂಗ್, ಶಿಲ್ಪಕಲೆ, ವಿಎಫ್‌ಎಕ್ಸ್ ಪ್ರೊಡಕ್ಷನ್ ಕುರಿತು ಪ್ರಾತ್ಯಕ್ಷಿಕೆ ಹಾಗೂ ಸಂವಾದ ಕಾರ್ಯಕ್ರಮ ನಡೆಯಿತು.

ಪ್ರಿನ್ಸಿಪಾಲ್ ಡಾ.ಜೈರಾಜ್ ಚಿಕ್ಕಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು, 2007ನೇ ಸಾಲಿನ ವಿದ್ಯಾರ್ಥಿಗಳಾದ ಡಿ.ಪಿ.ಪವನ್, ಕೆ.ವಿರಾಕೇಶ್, ಐಕ್ಯುಎಸಿ ಸಂಯೋಜನಾಧಿಕಾರಿ ಸತೀಶ್‌ಕುಮಾರ್ ಪಿ. ವಲ್ಲೇಪುರೆ ಇತರರಿದ್ದರು.

# ಸಾಮರಸ್ಯ, ಸಹಬಾಳ್ವೆ, ಕೂಡಿ ಬಾಳುವ ಸಂಸ್ಕೃತಿ ಹೆಚ್ಚಲಿ

## ಸಾರ್ವಜನಿಕ ಸೇವಾ ಸಮಿತಿಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ



ದಾವಣಗೆರೆ, ಡಿ. 9- ಸಮಾಜದ ಸ್ವಾಸ್ಥ್ಯ ಕದಡುವ ಜನರ ಬಗ್ಗೆ ಎಚ್ಚರದಿಂದ ಇರಬೇಕಾದ ಅನಿವಾರ್ಯತೆ ಇದೆ. ಸಾಮರಸ್ಯ, ಸಹಬಾಳ್ವೆ ಮತ್ತು ಕೂಡಿ ಬಾಳುವ ಸಂಸ್ಕೃತಿ ನಮ್ಮಲ್ಲಿ ಬೆಳೆಯಬೇಕಾಗಿದೆ. ಸರ್ವ ಸಮುದಾಯದವರು ಒಟ್ಟಾಗಿ ಕನ್ನಡದ ಹಬ್ಬ ರಾಜ್ಯೋತ್ಸವವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಿರುವುದು ಸಂತಸ ತಂದಿದೆ ಎಂದು ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹೇಳಿದರು.

ವಿನೋಬನಗರದ ಎರಡನೇ ಮುಖ್ಯ ರಸ್ತೆಯಲ್ಲಿ ಸಾರ್ವಜನಿಕ ಸೇವಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 26 ನೇ ವರ್ಷದ ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜ್‌ಕುಮಾರ್ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜವಾಹರಲಾಲ್ ನೆಹರು ಮತ್ತು ಮಹಾತ್ಮಾ ಗಾಂಧೀಜಿ ಅವರು ಸದೃಢ ಭಾರತ ನಿರ್ಮಾಣ ಮಾಡುವಲ್ಲಿ ಅವಿರತ ಶ್ರಮಿಸಿದ ವರು. ಭಾರತೀಯರ ಭವಿಷ್ಯ ರೂಪಿಸಿದವರು. ದೇಶ ಮತ್ತು ಜನರಿಗಾಗಿ ನೆಹರು ಮತ್ತು ಗಾಂಧಿ ಮಾಡಿರುವ ತ್ಯಾಗ ಭಾರತದ ಇತಿಹಾಸದಲ್ಲಿ ಅಪ್ರತಿಮವಾಗಿದೆ ಎಂದರು.

ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಮಾತನಾಡಿ, ಸರ್ವ ಧರ್ಮೀಯರೂ ಒಟ್ಟಾಗಿ ಸೇರಿ ಸಡಗರ, ಸಂಭ್ರಮದಿಂದ ಆಚರಿಸುವ ಏಕೈಕ ಹಬ್ಬ ಅದುವೇ 'ಕನ್ನಡ ಹಬ್ಬ' ಎಂದು ಹೆಮ್ಮೆಯಿಂದ ಹೇಳಿಕೊಂಡ ಅವರು, 'ನಾನು ಬದುಕ ಬೇಕು-ಇತರರನ್ನು ಬದುಕಲು ಬಿಡಬೇಕು' ಎಂಬ ತತ್ವದ ಆಧಾರದ ಮೇಲೆ ಸೌಹಾರ್ದತೆಯ, ಸಾಮರಸ್ಯದ ಬದುಕು ನಮ್ಮೆಲ್ಲರದ್ದಾಗಬೇಕೆಂದು ಕರೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಒಡೆದಾಳುವ ನೀತಿ ಹೆಚ್ಚಾಗುತ್ತಿದ್ದು, ಪ್ರಶ್ನೆ ಮಾಡುವ ಹಕ್ಕನ್ನೇ ಕಸಿಯಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದ್ವೇಷ ತುಂಬಿಕೊಂಡವರು, ಸಾಮ್ರಾಜ್ಯವನ್ನಾಳಿದವರು ಹೆಚ್ಚು ದಿನ ನೆನಪಿನಲ್ಲಿ ಉಳಿಯಲಾರರು. ಆದರೆ ತ್ಯಾಗ ಮನೋಭಾವನೆ, ನಿಸ್ವಾರ್ಥ ಸೇವೆ ಮಾಡಿದ ಬುದ್ಧ, ಬಸವ, ಮಹಾವೀರ, ಅಂಬೇಡ್ಕರ್, ಮಹಮದ್ ಪೈಗಂಬರ್, ಬಸವಣ್ಣ ಮುಂತಾದವರು ಪ್ರಾತಃಸ್ಮರಣೀಯರಾಗಿ ಎಲ್ಲರ ಮನದಲ್ಲಿದ್ದಾರೆ ಎಂದರು.

ಉಪ ಮೇಯರ್ ಸೋಗಿ ಶಾಂತಕುಮಾರ್ ಮಾತನಾಡಿದರು. ಸಾರ್ವಜನಿಕ ಸೇವಾ ಸಮಿತಿ ಅಧ್ಯಕ್ಷ ಎ. ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು.

ಕಾಂಗ್ರೆಸ್ ಮುಖಂಡ ಎಸ್. ಮಲ್ಲಿಕಾರ್ಜುನ್, ಮಹಾನಗರ ಪಾಲಿಕೆ ವಿವಿಧ ಸ್ಥಾಯಿ ಸಮಿತಿಗಳ ಅಧ್ಯಕ್ಷರಾದ ಸವಿತಾ ಗಣೇಶ ಹುಲ್ಮನಿ, ಸುಧಾ ಇಟ್ಟಿಗುಡಿ, ಆಶಾ ಉಮೇಶ್, ವರ್ತಲ ಅಜ್ಮತ್‌ವುಲ್ಲಾ, ನಾಗರಾಜ್ ಕೆ. ರಾಯ್ಕರ್ (ಶಿಕಾರಿಪುರ), ಸುರೇಶ್, ರಾಮಚಂದ್ರ ರಾಯ್ಕರ್, ಶಿವಾಜಿರಾವ್ ಯಶವಂತ್, ರಮೇಶ್, ರವಿ ಸೇರಿದಂತೆ ಸಮಿತಿ ಪದಾಧಿಕಾರಿಗಳು ಭಾಗವಹಿಸಿದ್ದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಖುಷಿ ರಾಯ್ಕರ್, ಶ್ರೇಯಸ್ ಪ್ರಭು ಆಚಾರ್, ತಿಮ್ಮಕ್ಕ ವೆಂಕಟೇಶ್, ಕಾರ್ತಿಕ್ ಸಿ. ಅಂಗಡಿ, ಪದ್ಮಶ್ರೀ, ಪ್ರಿಯಾಂಕ ಅವರನ್ನು ಸಮಿತಿ ವತಿಯಿಂದ ಗೌರವಿಸಲಾಯಿತು.

### ನಗರದಲ್ಲಿ ನಾಳೆ - ನಾಡಿದ್ದು ಗೀತಾ ಜಯಂತಿ : ಭಗವದ್ಗೀತೆ ಸ್ಪರ್ಧೆ

ದಾವಣಗೆರೆ, ಡಿ. 9- ನಗರದ ವರ್ತುಲ ರಸ್ತೆಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 11 ಮತ್ತು 12 ರಂದು ಎರಡು ದಿನಗಳ ಕಾಲ ಗೀತಾ ಜಯಂತಿ ಕಾರ್ಯಕ್ರಮವನ್ನು ಬ್ರಾಹ್ಮಣ ಸಮಾಜ ಸೇವಾ ಸಂಘದ ಮಹಿಳಾ ವಿಭಾಗದಿಂದ ಹಮ್ಮಿಕೊಳ್ಳಲಾಗಿದೆ.

ಶ್ರೀ ವಿಷ್ಣು ಸಹಸ್ರನಾಮ ಪಠಣ, ಭಗವದ್ಗೀತೆ ಒಂಭತ್ತನೇ ಅಧ್ಯಾಯ ಪಠಣ ನಂತರ ಗೀತಾ ಜಯಂತಿ ಅಂಗವಾಗಿ ನಡೆಸಿದ ಭಗವದ್ಗೀತೆ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ. ಭಕ್ತರು ಭಾಗವಹಿಸುವಂತೆ ಬ್ರಾಹ್ಮಣ ಸಮಾಜ ಸೇವಾ ಸಂಘದ ಕಾರ್ಯದರ್ಶಿ ಶ್ರೀಮತಿ ಅಡಿಗ ಕೋರಿದ್ದಾರೆ.

# ಬೆಳಗಾವಿ ಜಿಲ್ಲೆಯಲ್ಲಿ 'ಗಾಂಧಿ ಭಾರತ' ಹಬ್ಬದ ವಾತಾವರಣ ಸೃಷ್ಟಿ : ಡಿಕೆಶಿ

ಬೆಂಗಳೂರು, ಡಿ. 9- 'ಗಾಂಧಿ ಭಾರತ' ಕಾರ್ಯಕ್ರಮದ ಅಂಗವಾಗಿ ಡಿಸೆಂಬರ್ 26 ಹಾಗೂ 27ರಂದು ಬೆಳಗಾವಿ ಜಿಲ್ಲೆಯಾದ್ಯಂತ ಹಬ್ಬದ ವಾತಾವರಣ ಸೃಷ್ಟಿಯಾಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂಧಿ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ನೂರು ವರ್ಷಗಳಾದ ಸವಿನೆನಪಿಗಾಗಿ ಶತಮಾನೋತ್ಸವ ಸಂಭ್ರಮ ಆಚರಿಸಲಾಗುತ್ತಿದೆ ಎಂದರು.

ಸರ್ಕಾರ ಹಾಗೂ ಕಾಂಗ್ರೆಸ್‌ನಿಂದ 'ಗಾಂಧಿ ಭಾರತ' ಸಂಭ್ರಮವನ್ನು ವರ್ಷಪೂರ್ತಿ ಆಚರಿಸಲಾಗುವುದು, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮದ ಲಾಂಛನವನ್ನು ಅನಾವರಣ ಮಾಡಿದ್ದಾರೆ, ನೂರು ವರ್ಷಗಳ ಹಿಂದೆ ಮಹಾತ್ಮಾ ಗಾಂಧಿ ಅಲಂಕರಿಸಿದ ಸ್ಥಾನದಲ್ಲಿ ಈಗ ನಮ್ಮ ರಾಜ್ಯದ ಮಲ್ಲಿಕಾರ್ಜುನ ಖರ್ಗೆ ಆಸೀನರಾಗಿದ್ದಾರೆ.

ಕಾರ್ಯಕ್ರಮಕ್ಕೆ ರಾಷ್ಟ್ರ ನಾಯಕರು, ಕಾರ್ಯಕಾರಿ ಸಮಿತಿ ಸದಸ್ಯರು, ಸಂಸದರು ಆಗಮಿಸಲಿದ್ದು, ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಹಾಗೂ ಬೃಹತ್ ಸಾರ್ವಜನಿಕ ಸಭೆ ನಡೆಸುವುದಲ್ಲದೆ, ಗಾಂಧೀಜಿ ಸಂಚರಿಸಿದ್ದ ಸ್ಥಳಗಳಿಗೆ ಭೇಟಿ ನೀಡಲಾಗುವುದು.

ಸಭೆಗೆ ಮೂರ್ನಾಲ್ಕು ಜಾಗಗಳನ್ನು ಗುರುತಿಸಲಾಗಿದೆ, ನಾಳೆ ಅಥವಾ ನಾಡಿದ್ದು ಪಕ್ಷದ ರಾಷ್ಟ್ರೀಯ ನಾಯಕರು ಕಾರ್ಯಕ್ರಮ ಸ್ಥಳ ಪರಿಶೀಲನೆ ನಡೆಸಲಿದ್ದಾರೆ, ಹೆಚ್.ಕೆ ಪಾಟೀಲ್, ವೀರಪ್ಪ ಮೋಯ್ಲಿ, ಬಿ.ಎಲ್.ಶಂಕರ್ ಒಳಗೊಂಡ ಸಮಿತಿ ಕಾರ್ಯಕ್ರಮಗಳ ರೂಪುರೇಷೆ ಸಿದ್ಧಪಡಿಸಲಿದೆ.

ಕಾರ್ಯಕ್ರಮಕ್ಕೆ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಆಗಮಿಸುವ ಸಮಯ ಹಾಗೂ ಭದ್ರತೆ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದರು.

## ಮಾನವ ಹಕ್ಕುಗಳ ದಿನ : ಕಡ್ಡಾಯ ಆಚರಣೆಗೆ ಕರೆ

ದಾವಣಗೆರೆ, ಡಿ.9- ಜಿಲ್ಲೆಯ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರದ ಕಚೇರಿಗಳಲ್ಲಿ ಕಡ್ಡಾಯವಾಗಿ ನಾಳೆ ದಿನಾಂಕ 10 ರ ಮಂಗಳವಾರ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಪ್ರತಿ ಜಿಲ್ಲೆಯಲ್ಲಿ ಮತ್ತು ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಮಾನವ ಹಕ್ಕುಗಳ ದಿನಾಚರಣೆಯನ್ನು ಪ್ರತೀ ವರ್ಷದಂತೆ ಈ ವರ್ಷವೂ ಸಹ ವಿಶೇಷವಾಗಿ ಮಾನವ ಹಕ್ಕುಗಳ ದಿನಾಚರಣೆ ಆಚರಿಸಲು ನಿರ್ಧಾರ ಕೈಗೊಂಡಿದ್ದು, ಆಯೋಗದ ನಿರ್ದೇಶನದಂತೆ, ದಿನಾಂಕ 10 ರಂದು ಎಲ್ಲಾ ಇಲಾಖೆಗಳ ಕಚೇರಿಗಳಲ್ಲಿ ಮಾನವ ಹಕ್ಕುಗಳ ದಿನಾಚರಣೆ ಆಚರಿಸಬೇಕು.

ನಗರದಲ್ಲಿ ದಿನಾಂಕ 10ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಆರ್.ಎಲ್.ಕಾನೂನು ಕಾಲೇಜಿನಲ್ಲಿ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

### ಚೌಡಯ್ಯದಾನಾಪುರದಲ್ಲಿ ಕಾರ್ತಿಕ

ರಾಣೇಬೆನ್ನೂರು, ಡಿ.9- ತಾಲ್ಲೂಕಿನ ಚೌಡಯ್ಯ ದಾನಾಪುರದಲ್ಲಿ ಇದೇ ದಿನಾಂಕ 12ರಂದು ರಾತ್ರಿ 8ಕ್ಕೆ ಶ್ರೀ ವೀರಭದ್ರೇಶ್ವರ ದೇವರ ಕಾರ್ತಿಕೋತ್ಸವ ಜರುಗಲಿದೆ.

### 13ಕ್ಕೆ ಶ್ರೀ ಉತ್ಸವಾಂಭದೇವಿ ದೇವಿಯ ಮಹಾರುದ್ರಾಭಿಷೇಕ, ಕಾರ್ತಿಕೋತ್ಸವ



ದಾವಣಗೆರೆ, ಡಿ.9- ನಗರದ ವಸಂತ ರಸ್ತೆಯಲ್ಲಿನ ಶ್ರೀ ಉತ್ಸವಾಂಭದೇವಿ ದೇವ ಸ್ಥಾನದ ಶ್ರೀ ಚೌಡೇಶ್ವರಿದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿದೇವಿ ದೇವರುಗಳ ಮಹಾರುದ್ರಾಭಿಷೇಕ ಮತ್ತು ಕಾರ್ತಿಕ ದೀಪೋತ್ಸವವನ್ನು ಇದೇ ದಿನಾಂಕ 13 ರ ಶುಕ್ರವಾರ ನೆರವೇರಿಸಲಾಗುವುದು.

ಭಕ್ತಾದಿಗಳಿಂದ ತಾಯಿ ಅವರಿಗೆ ಬೆಳಗಿನ ಜಾವ 4.30ಕ್ಕೆ ಮಹಾರುದ್ರಾಭಿಷೇಕ ಹಾಗೂ ಸಂಜೆ 7.30ಕ್ಕೆ ಕಾರ್ತಿಕ ದೀಪೋತ್ಸವ ನೆರವೇರಿಸಲಾಗುವುದು.

## ಕೇಂದ್ರದಿಂದ ತಂಬಾಕು ಖರೀದಿಗೆ ಹಸಿರು ನಿಶಾನೆ

ಬೆಂಗಳೂರು, ಡಿ. 9- ಸಂಕಷ್ಟದಲ್ಲಿದ್ದ ರೈತರ ನೆರವಿಗೆ ಧಾವಿಸಿರುವ ಕೇಂದ್ರ ಸರ್ಕಾರ, ತಂಬಾಕು ಖರೀದಿಗೆ ಹಸಿರು ನಿಶಾನೆ ತೋರಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ದೆಹಲಿಯಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ ಹುಣಸೂರು, ಎಚ್.ಡಿ. ಕೋಟೆ, ಪಿರಿಯಾಪಟ್ಟಣ ಹಾಗೂ ಕೆ.ಆರ್.ನಗರ ತಾಲ್ಲೂಕುಗಳಲ್ಲಿನ ತಂಬಾಕು ಬೆಳೆಗಾರರು ಬೆಲೆ ಕುಸಿತದಿಂದ ಕಂಗೆಟ್ಟಿದ್ದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಶಾಸಕ ಹರೀಶ್, ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ರೈತ ಮುಖಂಡರ ನೇತೃತ್ವದಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರಿಗೆ ಮನವಿ ಸಲ್ಲಿಸಿದ್ದೆವು.

ಮನವಿಗೆ ಸ್ಪಂದಿಸಿದ ಸಚಿವರು, ಈ ಭಾಗದಲ್ಲಿ ತಂಬಾಕು ಖರೀದಿಗೆ ಹಸಿರು ನಿಶಾನೆ ತೋರಿದ್ದು, ಈಗಾಗಲೇ ಖರೀದಿ ಆರಂಭಗೊಂಡಿದೆ.

ಸಚಿವರ ಭೇಟಿ ಸಂದರ್ಭದಲ್ಲಿ ಬ್ರೆಜಿಲ್, ಲ್ಯಾಟಿನ್ ಅಮೆರಿಕಕ್ಕೆ ಸೇರಿದ ದೇಶಗಳಲ್ಲಿ ಜನವರಿ ವೇಳೆಗೆ ತಂಬಾಕು ಬೆಳೆ ಬರಲಿದ್ದು, ಡಿಸೆಂಬರ್ ಒಳಗಾಗಿ ನಮ್ಮ ರೈತರು ತಮ್ಮ ಬೆಳೆಯನ್ನು ಮಾರಾಟ ಮಾಡಬೇಕಿದೆ, ಈ ಕಾರಣದಿಂದ ತಮ್ಮ ಮನವಿಗೆ ಸರ್ಕಾರ ಸ್ಪಂದಿಸಿದೆ ಎಂದರು.

# ಕೊಯ್ಲಿಗೆ ಬಂದ ಬೆಳೆ ಮೇಲೆ ವರುಣನ ಕೆಂಗಣ್ಣು

## ಅಕ್ಟೋಬರ್ ಮಳೆಗೆ 1095 ಹೆಕ್ಟೇರ್ ಬೆಳೆ ನಷ್ಟ, ಸರ್ಕಾರಕ್ಕೆ ಜಿಲ್ಲಾಡಳಿತದ ವರದಿ

ದಾವಣಗೆರೆ, ಬೆಂ. 9 - ಇನ್ನೇನು ಭತ್ತ ಕೊಯ್ಲಿಗೆ ಬಂದಿದೆ. ಕೊಯ್ಲು ಯಂತ್ರಕ್ಕೋ ಅಥವಾ ಕೂಲಿ ಕಾರ್ಮಿಕರಿಗೋ ಹೇಳಿಯಾಗಿದೆ. ಇನ್ನು ನಿಶ್ಚಿಂತೆ ಎನ್ನುವಾಗಲೇ ಅಕಾಲಿಕ ಮಳೆ ರೈತರ ಹೃದಯ ಬಡಿತ ಹೆಚ್ಚಿಸುತ್ತಿದೆ. ಆಕಾಶ ಕಪ್ಪಾಗುತ್ತಲೇ ರೈತನ ಮೊಗದಲ್ಲೂ ಆತಂಕದ ಕಾರ್ಮೋಡ ಆವರಿಸುತ್ತದೆ.

ಕಳೆದ ತಿಂಗಳಷ್ಟೇ ಜಿಲ್ಲೆಯಲ್ಲಿ ಭಾರೀ ಮಳೆ ಸುರಿದು ಮೆಕ್ಕೆಜೋಳ, ಭತ್ತಕ್ಕೆ ಹಾನಿಯುಂಟಾಗಿತ್ತು. ನಾಲ್ಕೈದು ದಿನಗಳ ಕೆಳಗೆ ಫೆಂಗಾಲ್ ಚಂಡ ಮಾರುತದಿಂದ ಒಂದಿಷ್ಟು ಮಳೆ ಸುರಿಯಿತು. ಈಗ ಮತ್ತೆ ಚಂಡಮಾರುತ ಮಳೆ ಹೊತ್ತು ತಂದಿದೆ. ಕೈಗೆ ಬಂದ ತುತ್ತು ಇನ್ನೇನು ಬಾಯಿಗೆ ಬರಬೇಕು ಎನ್ನುವಷ್ಟರಲ್ಲಿ ಮಳೆ ಆಟ ಮತ್ತೆ ಶುರುವಾಗಿದೆ.

ಜಿಲ್ಲೆಯಲ್ಲಿ 65 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬಿತ್ತನೆಯಾಗಿದೆ. ಕೊಳೆದೊಂದು ತಿಂಗಳಿನಿಂದಲೂ ಭತ್ತದ ಕೊಯ್ಲು ನಡೆಯುತ್ತಿದೆ. ಹಲವರು ಮಾರಾಟವನ್ನೂ ಮಾಡಿಯಾಗಿದೆ. ಆದರೆ ಕೊಯ್ಲಾಗದೆ ಉಳಿದಿರುವ ಭತ್ತ ಮಳೆಗೆ ಆಹುತಿಯಾಗುವ ಆತಂಕವಿದೆ.

ಕೊಯ್ಲು ವಿಳಂಬವಾದರೆ ಕಾಳು ಉದುರುವ ಸಾಧ್ಯತೆ ಹೆಚ್ಚು, ಕಟಾವು ಮುಂದೂಡಿದರೆ ಜೋರು ಮಳೆಯ ಭಯ. ಸದ್ಯದ ಪರಿಸ್ಥಿತಿಯಲ್ಲಿ ಅನ್ನದಾತ ಸಂದಿಗ್ಧ ಸ್ಥಿತಿಯಲ್ಲಿದ್ದಾನೆ.

ಜಿಲ್ಲೆಯ ಪ್ರಮುಖ ಬೆಳೆಯಾದ ಮೆಕ್ಕೆಜೋಳವನ್ನು 1.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಬಹುತೇಕ ಕಟಾವು ಮುಕ್ತಾಯವಾಗಿದೆ. ಆದರೆ ಮರೆಯಾದ ಸೂರ್ಯನಿಂದ ಕಾಳು ಒಣಗಿಸುವುದು ಕಷ್ಟವಾಗಿದೆ. ಇದರಿಂದ ತೇವಾಂಶದ ಕಡಿಮೆಯಾದ ನೆಪದಲ್ಲಿ ಬೆಲೆಯೂ ಕಡಿಮೆಯಾಗುವ ಆತಂಕ ರೈತರಲ್ಲಿದೆ.

### ಜಿಲ್ಲೆಯಲ್ಲಿ ಭಾನುವಾರ ರಾತ್ರಿ 9.2 ಮಿ.ಮೀ. ಮಳೆ

**ಭಾನುವಾರ ರಾತ್ರಿ ಜಿಲ್ಲೆಯಲ್ಲಿ 9.2 ಮಿ.ಮೀ. ಮಳೆಯಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ 13.4, ದಾವಣಗೆರೆ 13.8, ಹರಿಹರ 4.9, ಹೊನ್ನಾಳಿ 1.7, ಜಗಳೂರು 8.6 ಹಾಗೂ ನ್ಯಾಮತಿಯಲ್ಲಿ 1.6ಮಿ.ಮೀ. ಮಳೆಯಾಗಿದೆ.**

**ಕಳೆದ ಅಕ್ಟೋಬರ್ 1ರಿಂದ ಡಿಸೆಂಬರ್ 9ರವರೆಗೆ 300 ಮಿ.ಮೀ. ಮಳೆಯಾಗಿದೆ.**

**ಕಳೆದ ತಿಂಗಳ ಮಳೆಗೆ 1095 ಹೆಕ್ಟೇರ್ ಬೆಳೆ ಹಾನಿ:** ಕಳೆದ ಅಕ್ಟೋಬರ್ ಮಾಸದಲ್ಲಿ ಸುರಿದ ಅಕಾಲಿಕ ಮಳೆಗೆ ಜಿಲ್ಲೆಯಲ್ಲಿ 1094.36 ಹೆಕ್ಟೇರ್ ಬೆಳೆ ನಷ್ಟವಾಗಿದೆ. ಈ ಬಗ್ಗೆ ಜಿಲ್ಲಾಡಳಿತ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿಯನ್ನೂ ಸಲ್ಲಿಸಿದೆ.

ಈ ಪೈಕಿ 1013 ಹೆಕ್ಟೇರ್ ಕೃಷಿ ಬೆಳೆಯಾದರೆ, 8061 ಹೆಕ್ಟೇರ್ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ. ಬರದ ನಾಡು ಜಗಳೂರು ತಾಲ್ಲೂಕಿನಲ್ಲಿ ಅತಿಹೆಚ್ಚು ಅಂದರೆ 617.16 ಹೆಕ್ಟೇರ್ ಪ್ರದೇಶದ ಬೆಳೆಗಳಿಗೆ ಹಾನಿಯಾಗಿದೆ.

ಉಳಿದಂತೆ ಹೊನ್ನಾಳಿ ತಾಲ್ಲೂಕಿನನಲ್ಲಿ 319.2 ಹೆಕ್ಟೇರ್, ದಾವಣಗೆರೆ ತಾಲೂಕಿನಲ್ಲಿ 78.46 ಹೆಕ್ಟೇರ್, ಹರಿಹರ ತಾಲೂಕಿನಲ್ಲಿ 57.24 ಹೆಕ್ಟೇರ್, ಚನ್ನಗಿರಿ ತಾಲೂಕಿನಲ್ಲಿ 20.55 ಹೆಕ್ಟೇರ್, ನ್ಯಾಮತಿ ತಾಲೂಕಿನಲ್ಲಿ 1.75 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದೆ.

ಜಿಲ್ಲೆಯಲ್ಲಿ ಮೆಕ್ಕೆಜೋಳ ಬೆಳೆಗೆ ಹೆಚ್ಚಿನ ಹಾನಿಯಾಗಿದೆ. 849 ಹೆ. ಮೆಕ್ಕೆಜೋಳ ಮಳೆಗೆ ಆಹುತಿಯಾಗಿದೆ. ಉಳಿದಂತೆ 65.35 ಹೆ. ಭತ್ತ, 5 ಹೆ. ಸೂರ್ಯಕಾಂತಿ, 10 ಹೆ.ಕಡಲೆ, 44.40 ಹೆ.ರಾಗಿ, 20 ಹೆ.ಬೆಂಗಾಲ್‌ಕಡ್ಲೆ, 20 ಹೆ. ಶೇಂಗಾ, 5.10 ಹೆ.ಬಾಳೆ, 0.54 ಹೆ.ತೆಂಗು, 1.20 ಹೆ. ಅಡಕೆ, 2.35 ಹೆ.ಪಪ್ಪಾಯ, 1.10 ಹೆ. ಸವತೆಕಾಯಿ, 1.10 ಹೆ.ಮೆಣಸು, 61.56 ಹೆ.ಈರುಳ್ಳಿ, 3.86 ಹೆ. ಟೊಮೆಟೋ, 0.40 ಹೆ. ಬದನೆಕಾಯಿ, 0.45 ಹೆ. ಹೂವು ಹಾಗೂ 2.75 ಹೆ. ಇತರೆ ಬೆಳೆ ಮಳೆಯಿಂದ ಹಾನಿಗೊಳಗಿದೆ.

ಹೊನ್ನಾಳಿ ತಾಲೂಕಿನಲ್ಲಿ 318 ಹೆಕ್ಕೇರ್, ಹರಿಹರ ತಾಲೂಕಿನಲ್ಲಿ 38 ಹೆಕ್ಕೇರ್, ದಾವಣಗೆರೆ ತಾಲೂಕಿನಲ್ಲಿ 20 ಹೆಕ್ಕೇರ್ ಹಾಗೂ ಚನ್ನಗಿರಿ ತಾಲೂಕಿನಲ್ಲಿ 13 ಹೆಕ್ಕೇರ್ ಪ್ರದೇಶದ ಮೆಕ್ಕೆಜೋಳ ಹಾನಿಗೊಳಗಾಗಿದೆ.

ದಾವಣಗೆರೆ ತಾಲ್ಲೂನಲ್ಲಿ ಭತ್ತ ಬೆಳೆ ಅತಿ ಹೆಚ್ಚು ಅಂದರೆ 41.80ಹೆ. ಹಾನಿಗೊಳಗಾಗಿದೆ. ಹರಿಹರ ತಾಲೂಕಿನಲ್ಲಿ 15 ಹೆ., ಹೊನ್ನಾಳಿ ತಾಲ್ಲೂಕಿನಲ್ಲಿ 1ಹೆ., ಚನ್ನಗಿರಿ ತಾಲೂಕಿನಲ್ಲಿ 7.55 ಹೆ.ಭತ್ತ ಮಳೆಯಿಂದ ಹಾಳಾಗಿದೆ.


ತೃತೀಯ ವರ್ಷದ ಪುಣ್ಯಸ್ಮರಣೆ



ಲಿಂ. ಶ್ರೀ ಮಂಜುನಾಥ ಎಸ್.
Civil Engineer and Contractor
ಜನನ : 21.01.1964, ಮರಣ : 10.12.2021
(ದಿ|| ಕೆ.ಜಿ.ಶಂಕರಪ್ಪ, ನಿವೃತ್ತ ಕಾರ್ಯಪಾಲಕ ಅಭಿಯಂತರರು ಹಾಗೂ ದಿ|| ಸುವರ್ಣಮ್ಮ ಇವರ ಪುತ್ರ)

'ಬದುಕೊಂದು ದೊರಕಿತ್ತು ಇನ್ನಾರಿಗೋ ಬೆಳಕಾಗಲೆಂದು
ಬೆಳಕು ಬೀರಿದ ನಂತರ ನಡೆದ ಭುವಿಗೆ ಹೊರೆಯಾಗದಿರಲೆಂದು'
ನಮ್ಮೆಲ್ಲರ ಬದುಕಿಗೆ ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮ ಮೇಲಿರಲಿ.
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ...

: ದುಃಖತಪ್ತರು :
ಶ್ರೀಮತಿ ವಿನುತ ಮಂಜುನಾಥ್
ಮಕ್ಕಳಾದ : ಡಾ|| ರಚಿತ ಹಾಗೂ ರಚನ B.E
ಕೋಟೆ ಗೌಡ್ರು ವಂಶಸ್ಥರು, ಸ್ನೇಹಿತರು ಹಾಗೂ ಬಂಧು ಮಿತ್ರರು.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas